
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

02, ಸೆಪ್ಟೆಂಬರ್ 2015 ಪುಟ 20 ರೂ. 15/-

ಪ್ರವಾದಿಗಳ ನಿಂದನೆಯ ಅಳತೆಗೋಲು



BBMP ಬಿಜೆಪಿಗೆ ಕಾದಿದೆ ಶಾಸ್ತಿ

ಪತ್ನಿಪೀಡಕ PSI ಉದ್ಧಟ



ಪಂಚಮಸಾಲಿ ಮಠದ ಫಜೀತಿ



ರಾಯಚೂರು

ೂಟಿಯಾಗುತ್ತಿರುವ ಶಿಲಾ ಸಂಪತ್ತು

ದಾವಣಗೆರೆ

ಸಮಾನತೆಗಾಗಿ ಜನಾಂದೋಲನ

ಸಮಾನತೆಗಾಗಿ ಜನಾಂದೋಲನ ಅಚ್ಛೆ ದಿನ್ ಆನೇವಾಲಾ ಹೈ

ಕರ್ನಾಟಕದಲ್ಲಿ ಸಮಾವೇಶ, ಸಮ್ಮೇಳನಗಳಿಗೇನೂ ಕೊರತೆಯಿಲ್ಲ. ಪ್ರತಿ ವರ್ಷ ವಿವಿಧ ಸಂಘಟನೆಗಳ ಹತ್ತಾರು ಸಮಾವೇಶಗಳು ನಡೆಯುತ್ತಲೇ ಇರುತ್ತವೆ. ತಮ್ಮ ತಮ್ಮ ಬೆಂಬಲಿಗರನ್ನು ಜಮಾವಣೆ ಮಾಡಿ ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡುವುದು ಸಂಘಟನೆಗಳಿಗೆ ಮಾಮೂಲಿ. ವ್ಯಂಗ್ಯವೇನೆಂದರೆ ಹಲವು ಸಂದರ್ಭಗಳಲ್ಲಿ ಇಂಥ ಸಮಾವೇಶಗಳು ಆಯಾ ಸಂಘಟನೆಗಳ ದೌರ್ಬಲ್ಯ ಪ್ರದರ್ಶನ ಮಾಡುವ ಕಾರ್ಯಕ್ರಮಗಳಾಗಿ ಪರ್ಯಾವಸಾನಗೊಂಡಿರುವುದೂ ಉಂಟು. ಯಾಕೆಂದರೆ ಹಲವು ಸಂಘಟನೆಗಳು ಪದೇಪದೇ ವಿಘಟಿತಗೊಂಡು ಶಕ್ತಿಗುಂದಿರುವುದು ಇಂದಿನ ಕಟು ವಾಸ್ತವ.

ಹೀಗಿರುವಾಗ ಆಗಸ್ಟ್ 15 ಮತ್ತು 16ರಂದು ದಾವಣಗೆರೆಯಲ್ಲಿ ನಡೆದ ಸಮಾವೇಶ ಕರ್ನಾಟಕದ ಮಟ್ಟಿಗೆ ಅಭೂತಪೂರ್ವವಾದುದು. ಕರ್ನಾಟಕದ ಸಾಮಾಜಿಕ ಚಳವಳಿಗಳಲ್ಲಿ ಪ್ರಮುಖ ಧಾರೆಗಳಾದ ಅಂಬೇಡ್ಕರ್‌ವಾದ, ಲೋಹಿಯಾವಾದ, ಮಾರ್ಕ್ಸ್‌ವಾದ ಮತ್ತು ಗಾಂಧಿವಾದದ ಸೈದ್ಧಾಂತಿಕ ಧಾರೆಗಳಲ್ಲಿ ಹತ್ತಾರು ವರ್ಷಗಳಿಂದ ಸಕ್ರಿಯವಾಗಿರುವ ನೂರಾರು ಗಣ್ಯರು ಅಲ್ಲಿ ಸಮಾವೇಶಗೊಂಡಿದ್ದರು. ರೈತ, ದಲಿತ, ಕಾರ್ಮಿಕ, ಮಹಿಳಾ, ವಿದ್ಯಾರ್ಥಿ, ಅಲ್ಪಸಂಖ್ಯಾತ, ಪರಿಸರ, ಕೋಮುಸೌಹಾರ್ದ, ಭ್ರಷ್ಟಾಚಾರ ವಿರೋಧಿ, ಮಾನವ ಹಕ್ಕು ಹೀಗೆ ನಮ್ಮ ನಾಡಿನ ನಾನಾ ಹೋರಾಟ ಧಾರೆಗಳ ಕಾರ್ಯಕರ್ತರ ದಂಡು ಅಲ್ಲಿ ನೆರೆದಿತ್ತು. ಕಲೆ, ಸಾಹಿತ್ಯ, ಶಿಕ್ಷಣ, ಮಾಧ್ಯಮ ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಅನೇಕರು ಹಾಜರಿದ್ದರು.

ಕರ್ನಾಟಕದಲ್ಲಿ ಮಾತ್ರವೇ ಅಲ್ಲ; ದೇಶದ ಇತರೆಡೆಗಳಲ್ಲಿ ಎಲ್ಲಾದರೂ ಇಂಥ ವಿದ್ಯಮಾನ ನಡೆದಿರುವುದು ತಿಳಿದುಬಂದಿಲ್ಲ. ಹೀಗಾಗಿ ಇದೊಂದು ಚಾರಿತ್ರಿಕ ವಿದ್ಯಮಾನ. ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಎಂಬ ಇಬ್ಬರು ಮಾಜಿ ನಕ್ಸಲ್ ನಾಯಕರು ಸುಮಾರು ಒಂದು ವರ್ಷದ ಹಿಂದೆಯೇ ಐಕ್ಯ ಚಳವಳಿ ರೂಪಿಸುವ ಬಗ್ಗೆ ಚಿಂತನೆ-ಮಂಥನ ಆರಂಭಿಸಿದರು. ಕಳೆದ ಡಿಸೆಂಬರ್ 8ರಂದು ಅವರು ಜೈಲಿನಿಂದ ಬಿಡುಗಡೆಯಾಗುವುದರೊಂದಿಗೆ ಈ ಪ್ರಕ್ರಿಯೆ ಮೂರ್ತರೂಪ ಪಡೆದುಕೊಂಡಿತು. ಅಂದಿನಿಂದ ಇಂದಿನವರೆಗೆ ಸತತ ಪ್ರಯತ್ನದ ಫಲವಾಗಿ ಇಂದು ನಾಡಿನ ನಾನಾಧಾರೆಗಳ ನೂರಾರು ಕಾರ್ಯಕರ್ತರು ಹಾಗೂ ನಾಯಕರು ಒಂದೆಡೆ ಸೇರುವಂತಾಯ್ತು. "ಇದು ಸಂಖ್ಯಾಬಲದ ಸಮ್ಮೇಳನವಾಗಿರದೆ ಚಿಂತನಾ ಮಂಥನದ ವೇದಿಕೆಯಾಗಿದೆ. ಕೇವಲ ಚಿಂತನೆಯ ಚಾವಡಿಯಷ್ಟೇ ಆಗಿರದೆ, ಒಗ್ಗೂಡಿ ನಡೆಸಬೇಕಾದ ಚಳವಳಿಯ ತಳಹದಿಯನ್ನು ರೂಪಿಸುವ ಕಾರ್ಯಾಗಾರವೂ ಆಗಿದೆ. ಚಿಂತನೆ ಹಾಗೂ ಕ್ರಿಯೆಯನ್ನು ಕಡೆಯುವ ಕಡೆಗೋಲಾಗಿದೆ. ಭವಿಷ್ಯದ ಜನ ಪರ್ಯಾಯದ ದಿಕ್ಸೂಚಿಯಾಗಿದೆ."

ಇವು ಸಮಾವೇಶದ ಆಮಂತ್ರಣ ಪತ್ರದಲ್ಲಿ ಅಚ್ಚಾಗಿದ್ದ ಮಾತುಗಳು. ಈ ನಿರೀಕ್ಷೆಯನ್ನು ಸಮಾವೇಶ ಬಹುಮಟ್ಟಿಗೆ ಸಾಕಾರಗೊಳಿಸಿದೆ.

ಈ ಸಮಾವೇಶದಲ್ಲಿ ದಲಿತ ಚಳವಳಿ ಹಾಗೂ ಎಡಪಂಥೀಯ ಚಳವಳಿಗಳ ಹಿನ್ನೆಲೆಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು. ರೈತ ಸಂಘಟನೆಗಳ ಹತ್ತಾರು ಕಾರ್ಯಕರ್ತರು ಇದ್ದರು. ಉಳಿದಂತೆ ಪ್ರಗತಿಪರ ಸಂಘಟನೆಗಳು, ಮಹಿಳಾ, ಮಾನವ ಹಕ್ಕು ಮುಂತಾದ ಸಂಘಟನೆಗಳ ಪ್ರತಿನಿಧಿಗಳೂ ನೆರೆದಿದ್ದರು.

ಜಿಲ್ಲಾವಾರು ನೋಡುವುದಾದರೆ ಬಹುತೇಕ ಎಲ್ಲ ಜಿಲ್ಲೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಅದರಲ್ಲೂ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕದ ಕಾರ್ಯಕರ್ತರ ಹಾಜರಿ ಎದ್ದು ಕಾಣುತ್ತಿತ್ತು, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಉತ್ತರ ಕರ್ನಾಟಕದ ಕಲಾವಿದರು ಗಮನ ಸೆಳೆದರು. ಹೀಗೆ ನಿಜವಾದ ಅರ್ಥದಲ್ಲಿ ರಾಜ್ಯದ ಪ್ರತಿನಿಧಿತ್ವ ಅಲ್ಲಿತ್ತು, ಹೀಗೆ ಪ್ರಾದೇಶಿಕವಾರು ಭಾಗವಹಿಸುವಿಕೆಯಲ್ಲೂ ಸಮಾವೇಶ ಯಶಸ್ಸು ಸಾಧಿಸಿದೆ.

ಸ್ವಾತಂತ್ರ್ಯ ಹೋರಾಟದ ಆಶಯವನ್ನು ಮಣ್ಣುಪಾಲು ಮಾಡಿರುವ ಇಂದಿನ ರಾಜಕೀಯ - ಆರ್ಥಿಕ ವ್ಯವಸ್ಥೆಯ ಹುನ್ನಾರಗಳನ್ನು ಬಿಚ್ಚಿಡುವ ಅರ್ಥಪೂರ್ಣವಾದ ಗೀತ ರೂಪಕದೊಂದಿಗೆ ಸಮಾವೇಶ ಆರಂಭವಾಯ್ತು, ಸಾಗರದ ಪ್ರತಿಭಾ ಮತ್ತು ಅವರ ತಂಡ ಈ ವಿಶೇಷ ರೂಪಕವನ್ನು ಅಭಿನಯಿಸಿದರು. ಈ ಗೀತ ರೂಪಕದ ಕೊನೆಯಲ್ಲಿ ವಿವಿಧ ಸಂಘಟನೆಗಳ ಹದಿಹರೆಯದ ಕಾರ್ಯಕರ್ತರು ಪಂಜು ಉರಿಸುವುದರೊಂದಿಗೆ ಸಮಾವೇಶ ಉದ್ಘಾಟನೆ ಮಾಡಿದ್ದು ಅರ್ಥಪೂರ್ಣವಾಗಿತ್ತು.

ಸಮಾವೇಶದಲ್ಲಿ ಎಲ್ಲರ ಗಮನ ಸೆಳೆದ ಮತ್ತೊಂದು ಪ್ರಮುಖ ಅಂಶವೆಂದರೆ ಯುವ ವಿದ್ಯಾರ್ಥಿಗಳು. ಹಾಗೆ ನೋಡಿದರೆ ಈ ಸಮಾವೇಶದ ಬಹುಪಾಲು ಯಶಸ್ಸು ಇವರಿಗೆ ಸಲ್ಲಬೇಕು. ವೇದಿಕೆಯ ನಿರ್ಮಾಣ, ಸಭಾಂಗಣದ ನಿರ್ವಹಣೆಯಿಂದ ಹಿಡಿದು ಊಟ ತಿಂಡಿ ವ್ಯವಸ್ಥೆಯವರೆಗೆ ಎಲ್ಲ ಕೆಲಸಗಳಲ್ಲೂ ಸಮಾವೇಶದ ಸ್ವಯಂಸೇವಕರಾಗಿ ದುಡಿದವರು ಸುಮಾರು 100 ಮಂದಿ ವಿದ್ಯಾರ್ಥಿ-ಯುವಕರ ದಂಡು. ಅವರಲ್ಲಿ ಬಹುತೇಕರು ಇನ್ನೂ ಹದಿಹರೆಯದಲ್ಲಿರುವವರು. ಅವರ ಉತ್ಸಾಹ ಮತ್ತು ಪಾದರಸದಂಥ ಕ್ರಿಯಾಶೀಲತೆ ಗಮನ ಸೆಳೆಯುವಂತಿತ್ತು, ಎಷ್ಟೇ ಆಗಲಿ, ಅವರೇ ನಮ್ಮ ಭವಿಷ್ಯವಲ್ಲವೆ?

ಈ ಯುವಕರು ಸ್ವಯಂಸೇವಕರಾಗಿ ದುಡಿಯುವುದರಲ್ಲಿ ಮಾತ್ರ ತೃಪ್ತರಾದಂತೆ ಕಂಡುಬರಲಿಲ್ಲ, ಜನಾಂದೋಲನದಲ್ಲಿ ಮುಂಚೂಣಿ ಪಾತ್ರ ವಹಿಸುವುದರಲ್ಲಿಯೂ ಆಸಕ್ತಿ ತೋರಿದರು. ಮುಕ್ತ ಚರ್ಚೆಯ ಗೋಷ್ಠಿಯಲ್ಲಿ ನಾಮುಂದು ತಾಮುಂದು ಎಂಬಂತೆ ಪ್ರಶ್ನೆಯೆತ್ತಲು, ಅಭಿಪ್ರಾಯ ಮಂಡಿಸಲು ಮುಂದಾದರು. ಎಲ್ಲರ ಪ್ರಶ್ನೆಗಳೂ ಬಹುಮಟ್ಟಿಗೆ ಒಂದೇ ತೆರನಾದುದು; ವಿದ್ಯಾರ್ಥಿಗಳಿಗೆ ಯುವಕರಿಗೆ ಸಂಘಟನೆಗಳು ಮತ್ತು ಚಳವಳಿಗಾರರು ಯಾಕೆ ಪ್ರಾಧಾನ್ಯತೆ ಕೊಡುತ್ತಿಲ್ಲ ಎಂಬುದು. ವೇದಿಕೆಯಲ್ಲಿ ಯುವಕರಿಗೆ ಅವಕಾಶ ಮಾಡಿಕೊಟ್ಟಿಲ್ಲ ಎಂಬುದನ್ನೂ ಅವರು ಪ್ರಶ್ನಿಸಿದರು.

ಇಂದಿನ ಯುವ ಪೀಳಿಗೆಯ ಬಗ್ಗೆ ಅನೇಕ ಸಾಂಪ್ರದಾಯಿಕ ಚಳವಳಿಗಾರರಲ್ಲಿ ಅಷ್ಟೇನೂ ಸದಭಿಪ್ರಾಯವಿಲ್ಲ ಎಂಬುದು ನಿಜ. ಆದರೆ ನಮ್ಮ ಭವಿಷ್ಯದ ತಲೆಮಾರನ್ನು ನಮ್ಮ ಸಮಾಜದ ಭವಿಷ್ಯ ನಿರ್ಮಾಣ ಕಾರ್ಯದಲ್ಲಿ ತೊಡಗಿಸುವುದು ಹೇಗೆಂಬುದು ನಮಗೆ ತಿಳಿದಿಲ್ಲ ಎಂಬುದಷ್ಟೆ ಇಂದಿನ ವಾಸ್ತವ. ಈ ನಿಟ್ಟಿನಲ್ಲಿ ಚಳವಳಿಗಾರರು ಸೃಜನಶೀಲ ವಿಧಾನಗಳನ್ನು ಅನ್ವೇಷಿಸಿ ನಿರಂತರ ಪ್ರಯತ್ನ ಹಾಕಬೇಕಾದ್ದು ನಮ್ಮ ಜವಾಬ್ದಾರಿ. ಹಾಗಿಲ್ಲವೆಂದರೆ ನಮ್ಮ ಬಯಕೆಗೆ ತಕ್ಕಂತೆ ಯುವಜನತೆಯನ್ನು ಅನ್ಯಗ್ರಹದಿಂದ ಆಮದು ಮಾಡಿಕೊಳ್ಳುತ್ತೇವೆಯೆ?

ಸಮಾವೇಶದ ವ್ಯವಸ್ಥೆಯನ್ನು ದಾವಣಗೆರೆಯ ಕೋಮುಸೌಹಾರ್ದ ವೇದಿಕೆಯ ಕಾರ್ಯಕರ್ತರು ವಹಿಸಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸಿದರು. ಕರ್ನಾಟಕ ವಿದ್ಯಾರ್ಥಿ ಸಂಘಟನೆಯ ಯುವ ವಿದ್ಯಾರ್ಥಿಗಳು, ರೆಡ್‌ಸ್ಟಾರ್ ಪಕ್ಷದ ಕಾರ್ಯಕರ್ತರು, ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರೂ ಜೊತೆಗೂಡಿ ವಾರಗಟ್ಟಳೆ ಶ್ರಮಿಸಿದ್ದರ ಫಲವಾಗಿ ಸಮಾವೇಶ ಸುಸೂತ್ರವಾಗಿ ನಡೆಯಿತು.

ಸಾಗರದ ಪ್ರತಿಭಾ, ರಾಯಚೂರಿನ ಹಿರಿಯ ಕಲಾವಿದ ದಾನಪ್ಪ, ಗಂಗಾಧರ್, ಕೋಲಾರದ ಮಾರುತಿ ಪ್ರಸಾದ್, ಮಂಡ್ಯದ ಉರುಗಲವಾಡಿ ರಾಮಯ್ಯ ಮುಂತಾದ ಕಲಾವಿದರ ತಂಡಗಳು ಕಾರ್ಯಕ್ರಮಕ್ಕೆ ಕಳೆ ತಂದುಕೊಡಲು ಶ್ರಮಿಸಿದವು. ದೊರೆಸ್ವಾಮಿಯವರು ಎಂದಿಗಿಂತಲೂ ಹೆಚ್ಚಿನ ಪ್ರಖರತೆಯಿಂದ ಮಾತಾಡಿ ಈ ದುಷ್ಟ ವ್ಯವಸ್ಥೆಯನ್ನು ಮಟ್ಟ ಹಾಕಲು ಐಕ್ಯರಾಗಿ ಹೋರಾಡುವಂತೆ ಕರೆನೀಡಿದರು. ಕುರುಡು ಸೈದ್ಧಾಂತಿಕ ಆರಾಧನೆಯನ್ನು ಬಿಟ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವತ್ತ ಗಮನ ಹರಿಸಬೇಕೆಂದು ದೇವನೂರು ಮಾರ್ಮಿಕ ರುಪಕಗಳ ಮೂಲಕ ವಿವರಿಸಿದರು. ಎಸ್‌ಆರ್ ಹಿರೇಮಠ್, ದಿನೇಶ್ ಅಮಿನ್‌ಮಟ್ಟು, ನೂರ್ ಶ್ರೀಧರ್, ಎಕೆ ಸುಬ್ಬಯ್ಯ, ಎಚ್.ಎಸ್. ಅನುಪಮ, ರಹಮತ್ ತರಿಕೆರೆ, ಜಿ ರಾಮಕೃಷ್ಣ ವಿಎಸ್‌ಶ್ರೀಧರ್, ಆರ್ ಮಾನಸಯ್ಯ ಬಾಲಗುರುಮೂರ್ತಿ, ಲಲಿತಾ ನಾಯಕ್, ರಂಜಾನ್ ದರ್ಗಾ, ಎನ್ ವೆಂಕಟೇಶ್, ಪಿವಿ ಲೋಕೇಶ್, ನಂಜೇಗೌಡ, ವಿಠಲ ಹೆಗಡೆ, ಫಣಿರಾಜ್ ಇನ್ನೂ ಮುಂತಾದ ಗಣ್ಯರು ತಮ್ಮದೇ ರೀತಿಯಲ್ಲಿ ಈ ಪ್ರಕ್ರಿಯೆಯ ಮಹತ್ವವನ್ನೂ ಹಾಗೂ ಪ್ರಬಲ ಚಳವಳಿ ರೂಪಿಸುವ ಬಗ್ಗೆ ತಂತಮ್ಮ ವಿಚಾರಗಳನ್ನು ಮಂಡಿಸಿದರು. ಎರಡು ದಿನಗಳ ಎಡೆಬಿಡದ ಭರ್ತಿ ಕಾರ್ಯಕ್ರಮವಿದ್ದರೂ ಇಡೀ ಸಭಾಂಗಣ ಸ್ವಲ್ಪವೂ ಆಲಸ್ಯ ತೋರದೆ ಆಸಕ್ತಿಕರವಾಗಿ ಭಾಗವಹಿಸಿದ್ದು ಈ ಸಮಾವೇಶದ ಮತ್ತೊಂದು ಯಶಸ್ಸು.

ಕಾರ್ಯಕ್ರಮದ ಪಟ್ಟಿಯಲ್ಲಿದ್ದ ಕೆಲವು ಪ್ರತಿನಿಧಿಗಳು ಗೈರುಹಾಜರಾಗಿದ್ದು ವಿರಾಮ ವೇಳೆಯ ಗುಂಪು ಚರ್ಚೆಗಳಿಗೆ ವಿಷಯವಾಗಿತ್ತು. ಕೆಲವರು ಅನಿವಾರ್ಯ ಅಥವ ಅನಾರೋಗ್ಯದ ಕಾರಣಗಳಿಗಾಗಿ ಬರಲಾಗಿರಲಿಲ್ಲ. ಮತ್ತೆ ಕೆಲವರದು ಕಾದು ನೋಡುವ ಧೋರಣೆ. ಮತ್ತೆ ಕೆಲವರು ಈಗಾಗಲೇ ತಾವು ರಚಿಸಿಕೊಂಡಿರುವ ಒಕ್ಕೂಟಗಳ ಗುಂಗಿನಲ್ಲಿದ್ದಾರೆಂಬುದೂ ಕೂಡ ಇಂದಿನ ವಾಸ್ತವಗಳಲ್ಲೊಂದು.

ಹಾಗೆ ನೋಡಿದರೆ ಕರ್ನಾಟಕದ ಇತಿಹಾಸದಲ್ಲಿ ಸಾಕಷ್ಟು ಒಕ್ಕೂಟಗಳು ಹುಟ್ಟಿಕೊಂಡಿವೆ; ಹಾಗೆ ಕಣ್ಮರೆಯಾಗಿವೆ. ಕೋಮು ಸೌಹಾರ್ದ ವೇದಿಕೆಯಂಥ ಕೆಲವೊಂದು ಒಕ್ಕೂಟಗಳು ಸಾಪೇಕ್ಷವಾಗಿ ದೀರ್ಘಕಾಲ ಕಾರ್ಯ ನಿರ್ವಹಿಸಿವೆ. ಕರ್ನಾಟಕದ ಮಟ್ಟಿಗೆ ಸಾಮಾನ್ಯವಾಗಿ ಅಲ್ಪಾಯುಷಿ ಒಕ್ಕೂಟಗಳೇ ಹೆಚ್ಚು. ಕೆಲವೊಮ್ಮೆ ಚುನಾವಣೆಗಳ ಸಂದರ್ಭದಲ್ಲಿ ಹುಟ್ಟಿಕೊಂಡ ಕೆಲ ಮೈತ್ರಿಕೂಟಗಳಲ್ಲಿ ಸಾಮಾಜಿಕ ಸಂಘಟನೆಗಳು ಪಾಲ್ಗೊಂಡಿದ್ದುಂಟು. ಆದರೆ ಇವೆಲ್ಲ ಸಂತೆಯ ಹೊತ್ತಿಗೆ ನೇಯ್ದ ಸೀರೆಗಳಾಗಿ ಕೊನೆಗೊಂಡಿವೆ. ಈ ಹಿನ್ನೆಲೆಯಲ್ಲಿ ಚಳವಳಿಗಳ ನಾಯಕರು ಈ ವೈಫಲ್ಯಗಳನ್ನು ಪರಾಮರ್ಶೆಗೆ ಒಡ್ಡಬೇಕಿರುವುದು ಇಂದಿನ ತುರ್ತು.

ಇದುವರೆಗಿನ ಎಲ್ಲ ಒಕ್ಕೂಟ ಸಂಘಟನೆಗಳಿಗಿಂತ ಈ ಪ್ರಕ್ರಿಯೆ ತೀರಾ ಭಿನ್ನವಾಗಿದೆ. ಮೊದಲನೆಯ... ಇದು ಅಂತರ್ಯದಲ್ಲಿ ಚುನಾವಣಾ ಮೈತ್ರಿ... ಇಟ್ಟುಕೊಂಡಿರುವ ಪ್ರಕ್ರಿಯೆಯಲ್ಲ, ಕರ್ನಾಟಕದ ... ಸಾಮಾಜಿಕ ಚಳವಳಿಗಳು ನಿರೀಕ್ಷಿತ ಯಶಸ್ಸು ಸಾಧಿಸ... ಸ್ಥಗಿತತೆ ಎದುರಿಸುತ್ತಿರುವುದು ಈ ಕಾಲಘಟ್ಟದ ... ವಾಸ್ತವ. ಇದೇ ಸಂದರ್ಭದಲ್ಲಿ ದಲಿತ, ರೈತ, ಕಾ... ಮಹಿಳೆ ಇತ್ಯಾದಿ ಎಲ್ಲ ಜನವಿಭಾಗಗಳ ಮೇಲೆ ದೌ... ಶೋಷಣೆಗಳು ಹೆಚ್ಚುತ್ತಿರುವುದು ಮತ್ತೊಂದು ಕಟು ವ... ಇಂಥಾ ಸನ್ನಿವೇಶದಲ್ಲಿ ಜನವಿರೋಧಿ ಆಳುವ ... ವಿರುದ್ಧ ಪ್ರಬಲ ಐಕ್ಯ ಚಳವಳಿಯನ್ನು ನಿರ್ಮಿಸಬೇ... ಮಾತುಗಳು ಕೆಲವಾರು ವರ್ಷಗಳಿಂದ ಕೇಳಿಬರುತ್ತಿ...

ಇದೇ ಕಾಲಘಟ್ಟಕ್ಕೆ ಸರಿಯಾಗಿ ನಕ್ಸಲ್ ನಾಯಕ... ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಇವರ... ವಿಶಾಲ ಜನಾಂದೋಲನ ರೂಪಿಸಬೇಕ... ಮಹತ್ವಾಕಾಂಕ್ಷೆಯೊಂದಿಗೆ ಪ್ರಜಾತಾಂತ್ರಿಕ ಮುಖ್ಯವಾ... ಬಂದು ಸೇರಿದ್ದು ವಿವಿಧ ಚಳವಳಿಗಳ ನಡುವಿನ ಒ... ಒಂದು ಮೂರ್ತರೂಪ ನೀಡಿದಂತಾಗಿದೆ. ನೂರ್ ... ಮಾತುಗಳಲ್ಲೇ ಹೇಳುವುದಾದರೆ 'ಹಲವಾರು ಕೇಸು... ಹೊತ್ತುಕೊಂಡು ಭೂಗತರಾಗಿದ್ದ ನಕ್ಸಲ್ ನಾಯ... ಮುಖ್ಯವಾಹಿನಿಗೆ ಬರುವ ಪ್ರಕ್ರಿಯೆ ನಾಡಿನ ... ಗಣ್ಯರು ಹಾಗೂ ಸಂಘಟನೆಗಳ ಸಕ್ರಿಯ ಬೆಂಬಲ... ಮಾತ್ರವೇ ಸಾಕಾರಗೊಂಡಿದೆ.' ಹೀಗೆ ಈ ಚಾರಿತ್ರಿಕ ... ಚಾಲನೆ ಪಡೆದುಕೊಳ್ಳಲು ಇಡಿಯಾಗಿ ನಮ್ಮ ಸಮ... ಜಾಗೃತ ಪ್ರಜ್ಞೆ ಕೆಲಸ ಮಾಡಿದೆಯೆಂದರೆ ಅತಿಶ... ಮಾತಾಗಲಾರದು. ಈ ಪ್ರಕ್ರಿಯೆಗೆ ಹತ್ತಾರು ಗ... ಬೆಂಬಲಿಸಿದ್ದರು ನಿಜ. ಆದರೆ ಸರ್ಕಾರದ ಆ... ಸಮಿತಿಯಲ್ಲಿ ನಾಗರಿಕ ಸಮಾಜದ ಪ್ರತಿನಿಧಿಗ... ಎಚ್.ಎಸ್. ದೊರೆಸ್ವಾಮಿ, ಎ.ಕೆ.ಸುಬ್ಬಯ್ಯ ಮತ್ತು ... ಪತ್ರಿಕೆಯ ಸಂಪಾದಕಿ ಗೌರಿ ಲಂಕೇಶ್‌ರು ... ನಿರ್ಣಾಯಕ ಪಾತ್ರ ವಹಿಸಿದ್ದನ್ನು ಇಲ್ಲಿ ವಿಶೇ... ನೆನೆಯಲೇಬೇಕು.

ಈ ಐಕ್ಯ ಚಳವಳಿಯ ಪ್ರಕ್ರಿಯೆಯನ್ನು ಆರ... ಹೆಗ್ಗಳಿಕೆ ನಕ್ಸಲ್ ನಾಯಕರದಾದರೂ ಈ ಸಮಾ... ಯಶಸ್ವಿ ಪ್ರಕ್ರಿಯೆಯಲ್ಲಿ ಹತ್ತಾರು ಸಂಘಟ... ಮುಖಂಡರು, ದೊರೆಸ್ವಾಮಿ, ದೇವನೂ... ಜಿ.ರಾಮಕೃಷ್ಣರಂಥ ಗಣ್ಯರೂ ಸಕ್ರಿಯವಾಗಿ ತೊಡಗಿಸಿ... ದ್ದಾರೆ. ಈ ಎಲ್ಲ ನಾಯಕರ ಸಕ್ರಿಯ ಪಾತ್ರವಿಲ್ಲದಿ... ಯಶಸ್ಸನ್ನು ಊಹಿಸಿಕೊಳ್ಳುವುದೂ ಕಷ್ಟ. ನೂರ್ ... ಸಿರಿಮನೆಯವರ ಹೋರಾಟದ ಹಾದಿಯ ಬಗ್ಗೆ ಹ... ವಿರೋಧವಿದ್ದರೂ ಕೂಡ ಅವರ ಸಾಮಾಜಿಕ ಬ... ಬಗ್ಗೆ ಯಾರಿಗೂ ಅನುಮಾನವಿರಲಿಲ್ಲ. ಈ ವಿಶ್ವಾಸ... ಈ ಪ್ರಕ್ರಿಯೆಯ ಯಶಸ್ಸಿನಲ್ಲಿ ಜೊತೆಯಾಗಿದೆ.

ಮಾಜಿ ನಕ್ಸಲ್ ನಾಯಕರು ಹೊರಗೆ ಬಂದ... ಯಾವ ಹಾದಿ ಹಿಡಿಯುತ್ತಾರೋ ಎಂಬ ಅನುಮಾನ... ಕೆಲವರಲ್ಲಿ ಇದ್ದದ್ದು ನಿಜ. ಆದರೆ ಈ 8 ತಿಂಗಳ ... ಪ್ರಜಾತಾಂತ್ರಿಕ ಮುಖ್ಯವಾಹಿನಿಯಲ್ಲಿದ್ದು ಐಕ್ಯ ... ರೂಪಿಸಲು ತೊಡಗಿಸಿಕೊಳ್ಳುವ ಅವರ ಬದ್ಧ... ಪ್ರಶ್ನಾತೀತವಾಗಿ ಸಾಬೀತುಪಡಿಸಿದೆ. ಐಕ್ಯ ಜನಾಂ... ನದಲ್ಲಿ ಮತ್ತಷ್ಟು ವಿಶ್ವಾಸ ವೃದ್ಧಿಗೆ ಇದು ಕಾರಣವ...

ಹೀಗೆ ಆಗಸ್ಟ್ 15 ಮತ್ತು 16ರ ದಾ... ಸಮಾವೇಶದ ಮೂಲಕ ರೂಪು ತಳೆಯುತ್ತಿರುವ ... ಮಗದೊಂದು ಒಕ್ಕೂಟವೋ ಅಥವ ಚು... ಮೈತ್ರಿಕೂಟವೋ ಆಗಿರದೆ ಈ ದುಷ್ಟ ... ಸವಾಲೆಸೆಯಬಲ್ಲ ಐಕ್ಯ ಚಳವಳಿಯಾಗಿ ರೂಪು ತ... ಲಕ್ಷಣ ಗೋಚರಿಸುತ್ತಿದೆ. ಇದಕ್ಕೆ 'ಜನಾಂದೋಲನ'... ಹೆಸರು ಅರ್ಥಪೂರ್ಣವಾಗಿದೆ.


ಅಂತಿಮವಾಗಿ ಸುಮಾರು 70 ಜನರ ... ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಈ ... ಮುಂದಿನ ಸೆಪ್ಟೆಂಬರ್ 13ನೇ ತಾರೀಕು ಹುಬ... ಸಭೆ ಸೇರಿ ಮುಂದಿನ ರೂಪುರೇಷೆಗಳನ್ನು ಕೈಗೊ...

ಅಂತೂ ಕರ್ನಾಟಕಕ್ಕೆ ಈ ರೀತಿಯಲ್ಲಾದರೂ ... ದಿನಗಳು ಬರಲಿ. ಮೋದಿ ಆಡಳಿತಕ್ಕೂ, ... ಮಾದರಿಯಲ್ಲಿ ಸಾಗಿರುವ ಎಲ್ಲ ರಾಜಕೀಯ ಪ... ಪ್ರಬಲ ಸವಾಲು ಒಡ್ಡಲಿ.

• ದೊಡ್ಡಿಪಾಳ್ಯ ನರಸಿಂಹಮ...







ಭಾಗವಹಿಸಿದ್ದ ಗಣ್ಯರು


ಎಚ್.ಎಸ್.ದೊರೆಸ್ವಾಮಿ, ದೇವನೂರು ಮಹಾದೇವ, ಜಿ. ರಾಮಕೃಷ್ಣ ಎ.ಕೆ.ಸುಬ್ಬಯ್ಯ ಎಸ್.ಆರ್.ಹಿರೇಮಠ್, ರಹಮತ್ ತರಿಕೆರೆ, ಬಿ.ಟಿ.ಲಲಿತಾನಾಯಕ್, ಅನಂತಸುಬ್ಬರಾವ್, ದಿನೇಶ್ ಅಮಿನ್‌ಮಟ್ಟು, ರೈತ ಸಂಘದ ನಂಜೇಗೌಡ, ಆರ್. ಮಾನಸಯ್ಯ, ರುದ್ರಯ್ಯ, ರಾಜಾಕಾಂತ್, ಎನ್.ವೆಂಕಟೇಶ್, ರಂಗಕರ್ಮಿ ಪ್ರಸನ್ನ, ವಿ.ಎಸ್.ಶ್ರೀಧರ್, ಕೆ.ಫಣಿರಾಜ್, ಕೆ.ಎಲ್.ಅಶೋಕ್, ಶ್ರೀರಾಮ್ ಎಸ್‌ಯುಸಿಐ(ಸಿ) ಪಕ್ಷದ ಮುಖಂಡ, ಡಾ.ಎಚ್.ವಿ.ವಾಸು, ಎಂ.ಡಿ. ಒಕ್ಕುಂದ, ಡಾ.ಎಚ್.ಎಸ್.ಅನುಪಮ, ರವಿಕೃಷ್ಣಾ ರೆಡ್ಡಿ , ವಸಂತಕುಮಾರ್, ಶಿವಾನಂದ ಕುಗ್ವೆ , ಡಾ.ಶ್ರೀರಾಮಪ್ಪ , ಎಚ್.ಕೆ. ರಾಮಚಂದ್ರಪ್ಪ, ಪೋಷಿಣಿ, ಬಾಲಗುರುಮೂರ್ತಿ, ವಿಠಲ ಹೆಗಡೆ ಮತ್ತು ಇನ್ನೂ ಹಲವರು.

ಈ ಸಮಾವೇಶದ ಐಕ್ಯತಾ ಸಮಿತಿಯಾಗಿ ದೊರೆಸ್ವಾಮಿ, ದೇವನೂರು, ಜಿ.ರಾಮಕೃಷ್ಣ ಇಂದೂಧರ, ವಿಜಯಮ್ಮ, ಸಿರಿಮನೆ ಮತ್ತು ನೂರ್‌ರನ್ನು ಒಳಗೊಂಡ 7 ಜನರ ಸಮಿತಿ ಶ್ಲಾಘನೀಯ ಕಾರ್ಯ ಮಾಡಿದೆ. ಈ ಐಕ್ಯತಾ ಸಮಿತಿಯ ಕೆಲಸ ಇಷ್ಟಕ್ಕೇ ಮುಗಿದುಹೋಗಿಲ್ಲ, ಈ ಪ್ರಕ್ರಿಯೆಯಿಂದ ದೂರ ಉಳಿದಿರುವ ಇನ್ನಿತರ ವ್ಯಕ್ತಿಗಳು, ಸಂಘಟನೆಗಳೊಂದಿಗೆ ಚರ್ಚಿಸಿ 'ಜನಾಂದೋಲನ'ದಲ್ಲಿ ಭಾಗಿಯಾಗುವಂತೆ ಮಾಡಬೇಕು. ಆ ಮೂಲಕ ಕರ್ನಾಟಕದಲ್ಲಿ ಒಂದು ಪ್ರಬಲ ಜನ ಚಳವಳಿಯ ನಿರ್ಮಾಣಕ್ಕೆ ಭೂಮಿಕೆ ಸಿದ್ಧಗೊಳಿಸಬೇಕು. ಇದು ಸಾಧ್ಯವಾಗಬೇಕಾದರೆ ನಾವು ನೀವೆಲ್ಲರೂ ಈ ಸಮಿತಿಯ ಕಾರ್ಯದಲ್ಲಿ ಕೈಜೋಡಿಸಬೇಕು. ಶೋಷಿತ ಜನಸಮುದಾಯಗಳ ನಡುವೆ ಕೆಲಸ ಮಾಡುತ್ತಿರುವ ಸಂಘಟನೆಗಳು ತಮ್ಮ ಅಲ್ಪಕಾಲಿಕ ಲೆಕ್ಕಾಚಾರವನ್ನು ಬದಿಗಿಟ್ಟು, ಚಳವಳಿಯ ದೀರ್ಘಕಾಲಿಕ ಬೆಳವಣಿಗೆಗೆ ಮಹತ್ವ ನೀಡಿ ಈ ಚಾರಿತ್ರಿಕ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು.

ಮೋದಿಯ ಬೂಟಾಟಿಕೆ...

ಮೊನ್ನೆ ದುಬೈನಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡುತ್ತಾ ನರೇಂದ್ರ ಮೋದಿ "ಹಿಂದೂ ದೇವಸ್ಥಾನ ಕಟ್ಟಲು ಇಲ್ಲಿ ಭೂಮಿ ಕೊಟ್ಟ ದುಬೈ ರಾಜಕುಮಾರನಿಗೆ ಜೈ" ಎಂದ. ಅಲ್ಲಿ ನೆರೆದಿದ್ದ ಜನರೆಲ್ಲರೂ "ಉಘೆ, ಉಘೆ" ಎಂದು ಚಪ್ಪಾಳೆ ತಟ್ಟಿದರು.

ಇಲ್ಲಿ ಒಂದೆರಡು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಈಗ ದುಬೈನಲ್ಲಿ ವಾಸಿಸುತ್ತಿರುವ ಅನಿವಾಸಿ ಭಾರತೀಯರಲ್ಲಿ ಯಾರೂ ಆ ದೇಶದ ಪ್ರಜೆಗಳಲ್ಲ, ಅವರೆಲ್ಲ ಅಲ್ಲಿ ದುಡಿಯುತ್ತಿರುವ ಶ್ರಮಿಕರು; ಹೆಚ್ಚೆಂದರೆ ಉದ್ಯಮಿಗಳು. ಅವರಿಗೆಲ್ಲ ಅಲ್ಲಿ ದುಡಿಯುವ ಅವಕಾಶವಿದೆಯಾದರೂ ಅವರಿಗೆ ಅಲ್ಲಿ ಮತ ಚಲಾಯಿಸುವ ಹಕ್ಕು ಇಲ್ಲ. ಅವರ್‍ಯಾರೂ ಮೂಲತಃ ಅಲ್ಲಿನವರೇ ಅಲ್ಲ. ಅಷ್ಟೇ ಮುಖ್ಯವಾಗಿ ಅಲ್ಲಿರುವ ಭಾರತೀಯರಲ್ಲಿ ಶೇ. 50 ಜನ ಮುಸಲ್ಮಾನರಾಗಿದ್ದರೆ, ಶೇ. 25 ಜನ ಕ್ರಿಶ್ಚಿಯನ್ನರು. ಉಳಿದ ಶೇ. 25 ಜನ ಮಾತ್ರ ಹಿಂದೂಗಳು; ಅಂದರೆ ಅಲ್ಲಿರುವ ಹಿಂದೂಗಳು ಅಲ್ಪಸಂಖ್ಯಾತರು.



ಆದರೆ ಭಾರತದಲ್ಲಿರುವ ಅಲ್ಪಸಂಖ್ಯಾತ ಮುಸಲ್ಮಾನರು ಬೇರೆ ಕಡೆಯಿಂದ ಬಂದವರಲ್ಲ, ಬದಲಾಗಿ ಅವರೆಲ್ಲ ಮೂಲತಃ ಇಲ್ಲಿನವರೆ. ಈ ದೇಶದ ಪ್ರಜೆಗಳೆ. ಅವರೆಲ್ಲರಿಗೆ ಇಲ್ಲಿ ವಾಸಿಸುವ, ದುಡಿಯುವ ಹಕ್ಕಿದೆ ಮಾತ್ರವಲ್ಲ ಇಲ್ಲಿ ಅವರಿಗೆ ಮತ ಚಲಾಯಿಸುವ ಹಕ್ಕೂ ಇದೆ.

ಈ ಹಿನ್ನೆಲೆಯಲ್ಲಿ ಒಂದೆರಡು ಪ್ರಶ್ನೆಗಳನ್ನು ಕೇಳಬೇಕಿದೆ. ದುಬೈ ಎಂಬ ಇಸ್ಲಾಮಿಕ್ ದೇಶದಲ್ಲಿ ವಿದೇಶದಿಂದ ದುಡಿಯಲು ಬಂದಿರುವ ಅಲ್ಪಸಂಖ್ಯಾತ ಹಿಂದೂಗಳಿಗೆ ದೇವಸ್ಥಾನ ಕಟ್ಟಲು ಭೂಮಿ ನೀಡಿದರೆ, ಇಲ್ಲಿನ ಪ್ರಜೆಗಳಾದ ಅಲ್ಪಸಂಖ್ಯಾತ ಮುಸಲ್ಮಾನರಿಗೆ ಮಸೀದಿ ಕಟ್ಟಲು ಯಾಕೆ ಮೋದಿ ಭೂಮಿ ಕೊಡಬಾರದು? ದುಬೈ ರಾಜಕುಮಾರನನ್ನು ಕೊಂಡಾಡಿದ ಮೋದಿ ಅಯೋಧ್ಯೆಯಲ್ಲಿದೆ ಎನ್ನಲಾದ ರಾಮ ಜನ್ಮ ಭೂಮಿಯಲ್ಲೇ ಯಾಕೆ ಮುಸಲ್ಮಾನರಿಗೆ ಮಸೀದಿ ಕಟ್ಟಿಸಿಕೊಡಬಾರದು? ಯಾಕೆ ಬಾಬ್ರಿ ಮಸೀದಿಯನ್ನು ಪುನರ್ ನಿರ್ಮಿಸಿ ಅಲ್ಪಸಂಖ್ಯಾತರಿಗೆ ಅರ್ಪಿಸಬಾರದು?

ಮೋದಿಯ ಮತ್ತು ಆತನ ಸಂಘಪರಿವಾರಿಗಳ ಬಂಡವಾಳ ಬಹಿರಂಗಗೊಳ್ಳುವುದೇ ಇಂತಹ ಬೂಟಾಟಿಕೆಗಳಿಂದ.

* * *

ಮೋದಿಯ ದುಬೈ ಭಾಷಣವನ್ನು ಆತನ ಭಕ್ತರು ಕೊಂಡಾಡಿದ್ದೇ ಕೊಂಡಾಡಿದ್ದು. ಆದರೆ ವಾಸ್ತವವಾಗಿ ಅದು ಆತ ಈ ಹಿಂದೆ ಅಮೆರಿಕದಲ್ಲಿ, ಚೀನಾದಲ್ಲಿ ಮತ್ತು ಆಸ್ಟ್ರೇಲಿಯಾದಲ್ಲಿ ಮಾಡಿದ ಭಾಷಣಗಳ ಪುನರಾವರ್ತನೆ ಆಗಿತ್ತೇ ವಿನಃ ಅದರಲ್ಲಿ ಒಂದಂಶವೂ ಹೊಸದಿರಲಿಲ್ಲ. ಯಥಾಪ್ರಕಾರ ಅದೇ ಎನ್‌ಆರ್‌ಐಗಳ ಓಲೈಕೆ. ನಿಮ್ಮದು ಭಾರತಕ್ಕೆ ಮಿಡಿಯುವ ಹೃದಯ ಎನ್ನುತ್ತಾ ಅವರು ತಮ್ಮ ಮಾತೃ ದೇಶವನ್ನು ತ್ಯಜಿಸಿದ ಪಾಪಕ್ಕೆ ಒಂದು ತರಹದ ಪ್ರಾಯಶ್ಚಿತ್ತದ ಮುಲಾಮು ಹಚ್ಚುವಿಕೆ. ನಿಮ್ಮ ಸಾಧನೆಗಳಿಂದಾಗಿ ಇವತ್ತು ಭಾರತವನ್ನು ಜಗತ್ತು ನೋಡುವ ದೃಷ್ಟಿಕೋನವೇ ಬದಲಾಗಿದೆ ಎಂದು ಹೇಳುತ್ತಾ ತಾನು ಭಾರತಕ್ಕೆ ಹೊಸ ಇಮೇಜ್ ತಂದುಕೊಂಡಿದ್ದೇನೆ ಎಂಬ ಕೊಚ್ಚಿಕೊಳ್ಳುವಿಕೆ. ನ್ಯೂಯಾರ್ಕ್‌ನಲ್ಲಿ "ಭಾರತ ಯುವ ದೇಶ. ಯಾಕೆಂದರೆ ಅಲ್ಲಿನ ಜನಸಂಖ್ಯೆಯಲ್ಲಿ ಶೇ. 65 ಜನರು 35 ವರ್ಷಕ್ಕಿಂತ ಕಿರಿಯರು" ಎಂದದ್ದು, ಸಿಡ್ನಿಯಲ್ಲಿ "ಭಾರತಮಾತೆಯಲ್ಲಿ 250 ಕೋಟಿ ಕೈಗಳಿವೆ. ಅವುಗಳಲ್ಲಿ 200 ಕೋಟಿ ಕೈಗಳ ವಯಸ್ಸು 35ಕ್ಕಿಂತ ಕಡಿಮೆ" ಆಗುತ್ತದೆ. ಹಾಗೆಯೇ ದುಬೈನಲ್ಲಿ ಅದೇ ಸಾಲು "ಭಾರತ ಅತ್ಯಂತ ಅವಕಾಶಗಳಿರುವ ದೇಶ. ಯಾಕೆಂದರೆ ಅಲ್ಲಿನ ಶೇ. 65 ಜನರ ವಯಸ್ಸು 35ಕ್ಕಿಂತ ಕಡಿಮೆ" ಎಂದಾಗುತ್ತದೆ. ಅಂದರೆ, ಅದೇ ದೋಸೆಯನ್ನು ಮತ್ತೆಮತ್ತೆ ತಿರುವುಹಾಕಿದಂತಿವೆ ಮೋದಿಯ ವಿದೇಶಿ ಭಾಷಣಗಳು.

ಅದೆಲ್ಲಕ್ಕಿಂತ ಅಸಹ್ಯಕರವಾದದ್ದು ಯಾವುದೆಂದರೆ ಮೋದಿ ತಾನೊಬ್ಬ ಮಾನವೀಯ ಮನುಷ್ಯ ಎಂಬಂತೆ ಪೋಸು ಕೊಡುವುದು. ದುಬೈನಲ್ಲಿ "ಧರ್ಮದ ಹೆಸರಲ್ಲಿ ಅಮಾಯಕರನ್ನು ಬಲಿಕೊಡಲಾಗುತ್ತಿದೆ" ಎಂದು ಅನುಕಂಪ ವ್ಯಕ್ತಪಡಿಸಿದ ಮೋದಿ ತಾನು ಗುಜರಾತಿನಲ್ಲಿ ಎಷ್ಟು ಜನ ಅಮಾಯಕರನ್ನು ಬಲಿ ತೆಗೆದುಕೊಂಡೆ ಎಂಬುದನ್ನು ಮರೆತಿದ್ದಾನೆ. ಅವರನ್ನೆಲ್ಲ ಕುನ್ನಿಗಳು ಎಂದು ತಾನು ಕರೆದದ್ದನ್ನೂ ಮರೆಮಾಚುತ್ತಾನೆ. ಥೂ, ನಾಚಿಕೆ ಆಗಬೇಕು ಅವನಿಗೆ ಮತ್ತು ಅವನನ್ನು ಮೆಚ್ಚಿ ಚಪ್ಪಾಳೆ ಹೊಡೆಯುವ ಜನರಿಗೆ.

* * *

ಕೆಲ ತಿಂಗಳುಗಳ ಹಿಂದೆ ಮದ್ರಾಸ್ ಹೈಕೋರ್ಟ್ ಅತ್ಯಾಚಾರಿಯೊಬ್ಬನಿಗೆ ತಾನು ಹಾಳುಮಾಡಿದ ಮಹಿಳೆಯೊಂದಿಗೆ ಮಾತುಕತೆ ನಡೆಸಿ ಪ್ರಕರಣವನ್ನು ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡುವ ಮೂಲಕ ದೊಡ್ಡ ವಿವಾದವನ್ನು ಹುಟ್ಟುಹಾಕಿತ್ತು. ಎಲ್ಲೆಡೆಯಿಂದ ಅತ್ಯಾಚಾರಿಗೆ ಈ ಅನುಕೂಲ ಮಾಡಿಕೊಟ್ಟದ್ದಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಆ ಅನುಮತಿಯನ್ನು ವಾಪಸ್ ತೆಗೆದುಕೊಂಡು ಅತ್ಯಾಚಾರಿಗೆ ಕಾನೂನುಬದ್ಧ ಶಿಕ್ಷೆಯನ್ನು ವಿಧಿಸಿತ್ತು. ಈಗ ಅದೇ ನ್ಯಾಯಾಲಯ ಮತ್ತೊಂದು ವಿವಾದಾಸ್ಪದ ತೀರ್ಪನ್ನು ನೀಡಿದೆ. ಅದೇನೆಂದರೆ ವಿಚ್ಛೇದನೆ ಮಾಡಿರುವ ಮಹಿಳೆ ತನ್ನ ಮಾಜಿ ಗಂಡನಿಂದ ಜೀವನಾಂಶ ಪಡೆಯಬೇಕಿದ್ದರೆ ಆಕೆ 'ಶುದ್ಧ'ವಾಗಿದ್ದು ಬೇರೆ ಪುರುಷನೊಂದಿಗೆ ದೈಹಿಕ ಸಂಬಂಧ ಇಟ್ಟುಕೊಂಡಿರಬಾರದು ಎಂಬ ತೀರ್ಪು.

ಸರ್ಕಾರಿ ನೌಕರನೊಬ್ಬ ತನ್ನ ಪತ್ನಿ ವ್ಯಭಿಚಾರಿಣಿ ಎಂಬ ಕಾರಣಕ್ಕೆ ಆಕೆಯಿಂದ ವಿಚ್ಛೇದನೆ ಪಡೆದಿದ್ದ. ಆದರೆ ಆತನಿಗೆ ವಿಚ್ಛೇದನೆ ನೀಡಿದ್ದ ಕೋರ್ಟ್ ಆತನ ತಿಂಗಳ ಸಂಬಳವಾದ ಹತ್ತು ಸಾವಿರ ರೂಪಾಯಿಗಳಲ್ಲಿ ಪ್ರತಿತಿಂಗಳು ಆಕೆಗೆ ಒಂದು ಸಾವಿರ ರೂಪಾಯಿಗಳ ಮಾಸಾಂಶವನ್ನು ಕೊಡಬೇಕೆಂದು ಆದೇಶಿಸಿತ್ತು.

ಆ ತೀರ್ಪನ್ನು ಪ್ರಶ್ನಿಸಿ ಆತ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿದ್ದ. ಮೊನ್ನೆ ಆತನ ಮೊರೆಯನ್ನು ಕುರಿತು ತೀರ್ಪು ನೀಡಿದ ನ್ಯಾಯಾಧೀಶ ಎಸ್ ನಾಗಮುತ್ತು ಅವರು "ವಿಚ್ಛೇದನೆಯ ನಂತರ ಪತ್ನಿ ಮತ್ತು ಮಕ್ಕಳು ನಿರ್ಗತಿಕರಾಗಬಾರದು ಎಂಬ ಕಾರಣಕ್ಕೇ ಕಾನೂನು ಮಾಸಾಂಶವನ್ನು ನೀಡಬೇಕೆಂದು ಹೇಳುತ್ತದೆ. ಅದರ ಪ್ರಕಾರ ಮಾಜಿ ಪತಿಯು ಪ್ರತಿತಿಂಗಳು ತನ್ನ ಮಾಜಿ ಪತ್ನಿಗೆ ಮಾಸಾಂಶವನ್ನು ಕೊಡಬೇಕೆಂಬ ಕಟ್ಟುಪಾಡು ಇದೆ. ಆದರೆ ಆ ಮಹಿಳೆಯೂ ಬೇರೆ ಪುರುಷನೊಂದಿಗೆ ದೈಹಿಕ ಸಂಬಂಧ ಇಟ್ಟುಕೊಂಡಿರಬಾರದು ಎಂಬ ಕಟ್ಟುಪಾಡಿಗೆ ಬದ್ಧಳಾಗಬೇಕಿರುತ್ತದೆ. ಹಾಗೊಮ್ಮೆ ಆಕೆ ಈ ಕಟ್ಟುಪಾಡನ್ನು ಉಲ್ಲಂಘಿಸಿದರೆ ಆಕೆ ಮಾಸಾಂಶಕ್ಕೆ ಅನರ್ಹಳಾಗುತ್ತಾಳೆ. ಆಕೆ ಬೇರೆ ಪುರುಷನೊಂದಿಗಿದ್ದರೆ ಆತನೇ ಆಕೆಗೆ ಮಾಸಾಂಶವನ್ನು ಕೊಡಬೇಕೆ ಹೊರತು ಮಾಜಿ ಪತಿಯಲ್ಲ" ಎಂದಿದ್ದಾರೆ.

ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮದುವೆಯಾಗದೆ ದೀರ್ಘ ಕಾಲದ 'ಲಿವ್ ಇನ್' ಸಂಬಂಧದಲ್ಲಿರುವ ಮಹಿಳೆಗೆ ಪತ್ನಿಗೆ ಇರುವಷ್ಟೆ ಹಕ್ಕುಗಳಿರುತ್ತವೆ ಎಂದಿತ್ತು. ಅಂದರೆ ವಿವಾಹವಾಗದಿದ್ದರೂ ಪುರುಷನ ಆಸ್ತಿಯಲ್ಲಿ 'ಲಿವ್ ಇನ್' ಮಹಿಳೆಗೆ ಹಕ್ಕು ಇರುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿತ್ತು. ಆ ತೀರ್ಪನ್ನು ಎಲ್ಲರೂ ಸ್ವಾಗತಿಸಿದ್ದರು.

ಇನ್ನೊಂದು ಮುಖ್ಯ ಅಂಶ ಯಾವುದೆಂದರೆ ನಮ್ಮ ಕಾನೂನಿನ ಪ್ರಕಾರ ವಿಚ್ಛೇದಿತ ಮಹಿಳೆ ಇನ್ನೊಂದು ಮದುವೆಯಾದರೆ ಆಕೆ ತನ್ನ ಮಾಜಿ ಪತಿಯಿಂದ ಪಡೆಯುತ್ತಿದ್ದ ಮಾಸಾಂಶವನ್ನು ಕಳೆದುಕೊಳ್ಳುತ್ತಾಳೆ. ಈ ಎರಡೂ ಅಂಶಗಳ ಹಿನ್ನೆಲೆಯಲ್ಲಿ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಗಮನಿಸಿದರೆ ಅದು ತರ್ಕಬದ್ಧವಾಗಿದೆ ಎಂದೆನಿಸುತ್ತದೆ.

ಆದರೆ ಸಮಸ್ಯೆ ಇರುವುದು ತರ್ಕದಲ್ಲಲ್ಲ, ಬದಲಾಗಿ ಹೆಣ್ಣನ್ನು ಮತ್ತು ಪುರುಷ-ಮಹಿಳೆ ನಡುವಿನ ಸಂಬಂಧವನ್ನು ನೋಡುವ ರೀತಿಯಲ್ಲಿ. ಮೊದಲನೆಯದಾಗಿ, ಯಾವ ಪುರುಷನೊಂದಿಗೆ ಮಹಿಳೆ ದೈಹಿಕ ಸಂಬಂಧ ಹೊಂದಿದ್ದಾಳೋ ಆತನಿಂದಲೇ ಆಕೆ ಹಣವನ್ನು ಪಡೆಯಬೇಕು ಎಂದು ಹೇಳಿದರೆ ಮಹಿಳೆಯರನ್ನು ವೇಶ್ಯೆಯರಿಗೆ ಸಮವಾಗಿಸಿದಂತಲ್ಲವೇ? ಎರಡನೆಯದಾಗಿ, ದೈಹಿಕ ಸಂಬಂಧವನ್ನು ಹಣದೊಂದಿಗೆ ತಾಳೆ ಹಾಕಿದರೆ ಮಹಿಳೆಯರನ್ನು ಕೇವಲ ಲೈಂಗಿಕ ವಸ್ತುವಾಗಿಸಿದಂತಲ್ಲವೇ? ಮೂರನೆಯದಾಗಿ, ವಿಚ್ಛೇದನೆ ಪಡೆದ ನಂತರ ಮಾಸಾಂಶ ಪಡೆಯಲು ಮಹಿಳೆ 'ಶುದ್ಧ'ವಾಗಿರಬೇಕು, 'ನೈತಿಕತೆ' ಕಾಪಾಡಬೇಕು ಎಂದು ಹೇಳುವುದು ಎಷ್ಟು ಸರಿಯಾಗುತ್ತದೆ? ●

ಕಂಡಹಾಗೆ



● ಗೌರಿ ಲಂಕೇಶ್
editorlankesh@gmail.com

ಹಿಂದೂತ್ವದ ಹುಚ್ಚರು ಮತ್ತು ಮಿಥ್ಯೆಗಳು

ಹಿಂದೂತ್ವದ ಹುಚ್ಚರು ಇತಿಹಾಸವನ್ನು ತಿರುಚುತ್ತಾರೆ ಮಾತ್ರವಲ್ಲ, ಕಾಲ್ಪನಿಕ ಇತಿಹಾಸವನ್ನು ಸೃಷ್ಟಿಸಿ ಅದನ್ನು ಪ್ರಚುರಪಡಿಸುವಲ್ಲೂ ಅವರು ಎತ್ತಿದ ಕೈಗಳು. ಅವರು ಸತ್ಯವೆಂದು ಹೇಳುವ ಹಲವು ಕಾಲ್ಪನಿಕ ಇತಿಹಾಸಗಳನ್ನು ಇಲ್ಲಿ ಬೆತ್ತಲು ಮಾಡಲಾಗಿದೆ.

ರಾಣಿ ಪದ್ಮಿನಿಯ ಕಟ್ಟುಕತೆ

ದೆಹಲಿಯ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿ 1303ರಲ್ಲಿ ಚಿತ್ತೂರಿನ ರಜಪೂತರನ್ನು ಸೋಲಿಸಿ ಅವರ ರಾಷ್ಟ್ರವನ್ನು ವಶಪಡಿಸಿಕೊಂಡ. ಇದಾದ 237 ವರ್ಷಗಳ ನಂತರ ಮಲಿಕ್ ಮೊಹಮ್ಮದ್ ಎಂಬ ಅವಧ್‌ನ ಕವಿ ಚಿತ್ತೂರಿನ ಪತನ ಕುರಿತು 'ಪದ್ಮವತ್' ಎಂಬ ಕಾವ್ಯವನ್ನು ರಚಿಸಿದ. ಅದಾದ ನಂತರ ಇನ್ನೂ ಹಲವರು ಚಿತ್ತೂರು ಸಂಸ್ಥಾನ ಮತ್ತು ರಾಣಿ ಪದ್ಮಿನಿಯ ಬಗ್ಗೆ ಸಾಹಿತ್ಯಗಳನ್ನು ರಚಿಸಿದರು.

ಅವರು ಸೃಷ್ಟಿಸಿದ ಸಾಹಿತ್ಯಿಕ ಇತಿಹಾಸದ ಪ್ರಕಾರ ಮೇವಾರ್‌ನ ರಾಜ ರತನ್ ಸಿಂಗ್ ಮಾಂತ್ರಿಕನೊಬ್ಬನನ್ನು ತನ್ನ ಸಂಸ್ಥಾನದಿಂದ ಒದ್ದೋಡಿಸಿದ. ಆ ಮಾಂತ್ರಿಕ ದೆಹಲಿಗೆ ಬಂದು ಖಿಲ್ಜಿಯ ಕಿವಿಗಳಿಗೆ ರಾಣಿ ಪದ್ಮಾವತಿಯ ಸೌಂದರ್ಯದ ಬಗ್ಗೆ ಚುಚ್ಚಿದ. ಕದ್ದುಮುಚ್ಚಿ ಪದ್ಮಿನಿಯ ಮುಖ ನೋಡಿದ ಖಿಲ್ಜಿ ಮಾರುಹೋದ. ಅವನು ಸಂಚು ರೂಪಿಸಿ ರತನ್‌ಸಿಂಗ್‌ನನ್ನು ಬಂಧಿಸಿದ. ಪದ್ಮಿನಿಯನ್ನು ತನಗೆ ಕೊಟ್ಟರೆ ರಾಜನನ್ನು ಬಿಡುಗಡೆಗೊಳಿಸುವುದಾಗಿ ಹೇಳಿದ. ರಜಪೂತರು ತಮ್ಮ ರಾಜನನ್ನು ವಾಪಸ್ ಪಡೆಯಲು ಪ್ರತಿತಂತ್ರ ರೂಪಿಸಿದರಾದರೂ ಅವರು ಬಹಳಷ್ಟು ಯೋಧರನ್ನು ಕಳೆದುಕೊಂಡರು. ಹೀಗೆ ದುರ್ಬಲಗೊಂಡಿದ್ದ ಮೇವಾರ್ ಸೈನ್ಯವನ್ನು ಖಿಲ್ಜಿ ಸೋಲಿಸಿದನಾದರೂ ರಾಣಿ ಪದ್ಮಿನಿ ಸೇರಿದಂತೆ ಎಲ್ಲ ಮಹಿಳೆಯರು ಸತಿಪದ್ಧತಿಯ ಪ್ರಕಾರ ಸಾವನ್ನಪ್ಪಿದ್ದರು.

ವಾಸ್ತವವಾಗಿ ರಾಣಿ ಪದ್ಮಿನಿ ಕುರಿತು ಯಾವ ಇತಿಹಾಸ ಕೃತಿಯಲ್ಲೂ ಪ್ರಸ್ತಾಪವೇ ಇಲ್ಲ. ಭಾರತದ ಇತಿಹಾಸದಲ್ಲಿ ಶ್ರೇಷ್ಠ ಯೋಧನಾಗಿದ್ದ ಖಿಲ್ಜಿಗೆ ಚಿತ್ತೂರನ್ನು ಸೋಲಿಸಲು ಕುತಂತ್ರ ರೂಪಿಸುವ ಅವಶ್ಯಕತೆ ಇರಲಿಲ್ಲ, ಯಾಕೆಂದರೆ ಆತನೇ ಖಿಲ್ಜಿ ಮಂಗೋಲಿಯಾದಿಂದ ಬಂದ ದಾಳಿಕೋರರನ್ನು ಹಿಮ್ಮೆಟ್ಟಿಸಿ ರಾಜಸ್ತಾನ ಮತ್ತು ಗುಜರಾತನ್ನು ಆಕ್ರಮಿಸಿದ್ದ. ಆದರೂ ಪದ್ಮಿನಿಯ ಕಾಲ್ಪನಿಕ ಕತೆಯಿಂದಾಗಿ ಖಿಲ್ಜಿ ಕಾಮುಕ ಕುತಂತ್ರಿ ಆಗಿದ್ದ ಎಂದೂ, ರಾಜಪೂತರು ವೀರರಾಗಿದ್ದರು ಎಂದೂ ಜನರಲ್ಲಿ ತಪ್ಪು ನಂಬಿಕೆಯನ್ನು ಬಿತ್ತಿದ್ದಾರೆ.

ಪೃಥ್ವಿರಾಜ್ ಚೌಹಾಣ್ ವೀರ ಎಂಬ ಮಿಥ್ಯೆ

ಪೃಥ್ವಿರಾಜ್ ಚೌಹಾಣ್ ಕ್ರಿ.ಶ 12 ನೇ ಶತಮಾನದಲ್ಲಿ ದೆಹಲಿಯನ್ನು ಆಳಿದ್ದ. 1191 ರಲ್ಲಿ ಅಫಘಾನ್‌ನಿಂದ ಬಂದ ಮಹಮ್ಮದ್ ಘೋರಿ ಪೃಥ್ವಿರಾಜನ ಸಾಮ್ರಾಜ್ಯದ ಗಡಿಯಲ್ಲಿದ್ದ ಭಟಿಂಡ ಕೋಟೆಯನ್ನು ಆಕ್ರಮಿಸಿದ. ಪೃಥ್ವಿರಾಜ್ ಘೋರಿ ವಿರುದ್ಧ ದಂಡೆತ್ತಿ ಹೋಗಿ ತರೇನ್ ಹತ್ತಿರ ಆತನನ್ನು ಸೋಲಿಸಿದ. ಆದರೆ ಅದಾದ ಮುಂದಿನ ವರ್ಷ ಪ್ರಬಲ ಸೈನ್ಯದೊಂದಿಗೆ ಮತ್ತೆ ದಾಳಿ ಮಾಡಿದ ಘೋರಿ ಪೃಥ್ವಿರಾಜನನ್ನು ಸೋಲಿಸಿದನಲ್ಲದೆ ಆತನನ್ನು ಕೊಂದು ಹಾಕಿದ.

ಆದರೆ ಪೃಥ್ವಿರಾಜನ ಆಸ್ಥಾನದಲ್ಲಿದ್ದ ಕವಿ ಚಂದ್ ಬರ್ದಾಯಿ ಮತ್ತು ಇತರೆ ಲೇಖಕರು ಪೃಥ್ವಿರಾಜ ಕತೆಗೆ ಮಸಾಲೆ ಬೆರೆಸಿದ್ದಾರೆ. ಅವರು ಸೃಷ್ಟಿಸಿರುವ ಇತಿಹಾಸದ ಪ್ರಕಾರ ಪೃಥ್ವಿರಾಜ ಘೋರಿಯನ್ನು ಸೋಲಿಸಿದರೂ ಉದಾರಿಯಾಗಿ ಆತನನ್ನು ಬಿಡುಗಡೆ ಮಾಡಿದ್ದ. ಆದರೆ ಘೋರಿ ವಾಪಸ್ಸು ಬಂದು ರಾತ್ರಿ ವೇಳೆಯಲ್ಲಿ ದಾಳಿ ಮಾಡಿ ರಜಪೂತ ರಾಜ ಪೃಥ್ವಿಯನ್ನು ಬಂಧಿಸಿದನಲ್ಲದೆ, ಆತನ ಕಣ್ಣುಗಳನ್ನು ಕಿತ್ತುಹಾಕಿಸಿ ಆತನನ್ನು ತನ್ನ ರಾಜಧಾನಿಗೆ ಕರೆದುಕೊಂಡು ಹೋದ. ಪೃಥ್ವಿಯ ಜೊತೆಗಿದ್ದ ಒಬ್ಬ ರಜಪೂತ ರಾಜನ ಬಿಲ್ಲು ಕೌಶಲ್ಯವನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡಬೇಕೆಂದು ಘೋರಿಯನ್ನು ಕೋರಿದ. ಘೋರಿ ಅಂತಹ ಅವಕಾಶವನ್ನು ಕೊಟ್ಟಾಗ ಪೃಥ್ವಿರಾಜ್ ಘೋರಿಯನ್ನೇ ಕೊಂದು ಆಮೇಲೆ ಆತ್ಮಹತ್ಯೆ ಮಾಡಿಕೊಂಡ.

ಅಮರ ಚಿತ್ರ ಕಥಾದಲ್ಲೂ ಪೃಥ್ವಿರಾಜನ ಕುರಿತು ಇಂತಹದ್ದೇ ಕಪೋಲಕಲ್ಪಿತ ಕತೆಗಳಿರುವುದರಿಂದ ನಾನೂ ಕೂಡ ಇದನ್ನು ನಂಬಿದ್ದೆ.

ಸಂಸ್ಕೃತ ಪುರಾತನದ್ದು ಎಂಬ ಕಲ್ಪನೆ

ಸಂಸ್ಕೃತದಲ್ಲಿ ಉತ್ತಮವಾದ ಕವನಗಳು, ತಾತ್ವಿಕ ಧ್ಯಾನಗಳು, ಮಹಾಕಾವ್ಯಗಳು, ನಾಟಕಗಳು ಮತ್ತು ಪ್ರಬಂಧಗಳು ರಚಿತವಾಗಿವೆ. ಇದು ವಿಶ್ವದಲ್ಲಿರುವ ಮಹತ್ವಪೂರ್ಣವಾದ ಭಾಷೆಗಳಲ್ಲಿ ಒಂದು ಎಂಬುದರ ಬಗ್ಗೆ ಯಾವ ಅನುಮಾನವೂ ಬೇಡ. ಅಂದಮಾತ್ರಕ್ಕೆ ಸಂಸ್ಕೃತ ಎಲ್ಲಾ ಭಾಷೆಗಳಿಗೂ ಮಾತೃ ಭಾಷೆ ಎಂಬ ತಪ್ಪು ಕಲ್ಪನೆ ಬೇಡ. 1786ರಲ್ಲಿ ಪ್ರಥಮ ಬಾರಿಗೆ ವಿಲಿಯಂ ಜೋನ್ಸ್ ಎಂಬಾತ "ಸಂಸ್ಕೃತ, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳು ಒಂದೇ ಮೂಲದಿಂದ ಜನಿಸಿವೆ ಎನಿಸುತ್ತೆ. ಆದರೆ ಅದೀಗ ಅಸ್ತಿತ್ವದಲ್ಲಿ ಇಲ್ಲ" ಎಂದಿದ್ದ. ಅದನ್ನು ಈಗ ಪ್ರೋಟೋ-ಇಂಡೋ-ಯುರೋಪಿಯನ್ ಮೂಲ ಎಂದು ಗುರುತಿಸಲಾಗಿದ್ದು ಸುಮಾರು 6000 ವರ್ಷಗಳ ಹಿಂದೆ ಕಪ್ಪು ಸಮುದ್ರ ಇರುವ ಪ್ರದೇಶದಲ್ಲಿ ಆ ಭಾಷೆಯಲ್ಲಿ ಜನ ಮಾತನಾಡುತ್ತಿದ್ದರು ಎಂದು ಅಂದಾಜಿಸಲಾಗಿದೆ.

ಆದರೆ ಹಿಂದೂತ್ವವಾದಿಗಳಿಗೆ ಅದು ಬೇಕಿಲ್ಲ. ಯಾಕೆಂದರೆ ಅದನ್ನು ಒಪ್ಪಿಕೊಂಡರೆ ತಮ್ಮ ಸಂಸ್ಕೃತ ಭಾಷೆಯು ಈಗಿರುವ ಟರ್ಕಿ ಮತ್ತು ಯುಕ್ರೇನ್ ಪ್ರದೇಶದ ಗ್ರಾಮೀಣ ಅಲೆಮಾರಿಗಳ ಭಾಷೆಯಾಗಿತ್ತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

5,000 ವರ್ಷಗಳ ನಾಗರಿಕತೆಯ ಮಿಥ್ಯೆ

ಭಗವದ್ಗೀತೆ ಐದು ಸಾವಿರ ವರ್ಷಗಳ ಹಿಂದಿನದ್ದು ಎಂಬುದೂ ಹಿಂದೂತ್ವದ ಹುಚ್ಚರು ಕಲ್ಪಿಸಿರುವ ಮಿಥ್ಯೆ. ಸಾಮಾನ್ಯವಾಗಿ ಈ ಹುಚ್ಚರು ಹಿಂದೂ ಸಂಸ್ಕೃತಿಗೆ ಸಂಬಂಧಿಸಿದ್ದೆಲ್ಲವೂ ಐದು ಸಾವಿರ ವರ್ಷಗಳದ್ದು ಎಂದೇ ಪ್ರತಿಪಾದಿಸುತ್ತಾರೆ. ವೇದಗಳು- ಕನಿಷ್ಠ ಐದು ಸಾವಿರ ವರ್ಷಗಳಷ್ಟು ಹಳೆಯದು. ಆಯುರ್ವೇದ- ಅದೂ ಐದು ಸಾವಿರ ವರ್ಷಗಳಷ್ಟು ಹಳೆಯದು. ಯೋಗ- ಅದಕ್ಕೂ ಐದು ಸಾವಿರ ವರ್ಷಗಳ ಇತಿಹಾಸವಿದೆ. ಭಾರತೀಯ ಕಲೆ- 5,000 ವರ್ಷ. ಗಣಿತಶಾಸ್ತ್ರ, ಖಗೋಳ ವಿಜ್ಞಾನ, ವ್ಯಾಕರಣ... ಏನನ್ನು ಬೇಕಾದರೂ ಹೆಸರಿಸಿ, ಎಲ್ಲದಕ್ಕೂ ಐದು ಸಾವಿರ ವರ್ಷ ಎನ್ನುತ್ತಾರೆ ಅವರು.

ಸತ್ಯ ಏನೆಂದರೆ ಭಾರತದಲ್ಲಿರುವ ಯಾವುದಕ್ಕೂ ಐದು ಸಾವಿರ ವರ್ಷಗಳ ಇತಿಹಾಸವಿಲ್ಲ. ಹರಪ್ಪನ್ ನಾಗರಿಕತೆಯ ಅವಶೇಷಗಳೇ ಇಲ್ಲಿ ಅತಿ ಪ್ರಾಚೀನವಾದದ್ದು. ಅಲ್ಲಿ ಸಿಕ್ಕಿರುವ ಮಡಕೆ ಚೂರುಗಳು ಹೆಚ್ಚೆಂದರೆ ಕ್ರಿ.ಪೂ. 2500 ಗಿಂತ ಹಿಂದಿನದ್ದಲ್ಲ. ಇಲ್ಲಿ ರಚಿತಗೊಂಡ ಸಾಹಿತ್ಯ ಕೂಡ 3,500 ವರ್ಷಗಳಿಗಿಂತ ಪುರಾತನದ್ದಲ್ಲ. ಇನ್ನು ಕ್ರಿ.ಪೂ. 500ಕ್ಕೆ ಮುಂಚೆ ಇಲ್ಲಿ ಯಾವ ಕಲೆಯೂ ಇರಲಿಲ್ಲ. ಗಣಿತಶಾಸ್ತ್ರಕ್ಕೆ ಭಾರತದ ಕೊಡುಗೆ ಸಿಕ್ಕಿದ್ದು ಕೂಡ ಮಧ್ಯಯುಗದಲ್ಲಿ. ಹಾಗೆಯೇ ಯೋಗ ಕೂಡ ಶುರುವಾಗಿದ್ದು ಒಂದು ಶತಮಾನದ ಹಿಂದೆ.

ನಮ್ಮದು ಐದು ಸಾವಿರ ವರ್ಷಗಳ ನಾಗರಿಕತೆ ಎಂದು ಕೊಚ್ಚಿಕೊಳ್ಳುವ ಹಿಂದೂತ್ವವಾದಿಗಳ ಪ್ರಕಾರ ಭಾರತದಲ್ಲಿ ಸುವರ್ಣಯುಗವಿತ್ತು. ಆದರೆ ಯಾವಾಗ ಇಲ್ಲಿಗೆ ಕಲಿಯುಗ/ ಮುಸಲ್ಮಾನ ದಾಳಿಕೋರರು/ ಬ್ರಿಟಿಷರು (ಯಾವುದನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಿ) ಕಾಲಿಟ್ಟರೋ ಆಗ ಕೇಡುಗಾಲವೂ ಶುರುವಾಯಿತು.

● ಗಿರೀಶ್ ಶತಾನೆ

ಪತ್ನಿಪೀಡಕ ಪಿಎಸ್‌ಐ ಉದ್ದಪ್ಪನ ರಕ್ಷಕರ್ಯಾರು?


ಉದ್ದಪ್ಪ ಪ್ರತಿಮಾ ದಂಪತಿ ಮಗಳೊಂದಿಗೆ....


ಇದು ದಲಿತ ಹೆಣ್ಣೊಬ್ಬಳ ಹೇಳತೀರದ ಗೋಳು; ಅಂತರ್ಜಾತಿ ದಾಂಪತ್ಯವನ್ನು ಜಾತಿಯತೆ ಭೂತ ಭಗ್ನಗೊಳಿಸಿದ ಕ್ರೌರ್ಯದ ಕತೆ! ಈ ಕಥಾನಕದ ಖಳನಾಯಕ ಒಬ್ಬ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್. ಖಾಕಿ ತೊಟ್ಟು ಕಾನೂನಿಗೆ, ನೈತಿಕತೆಗೆ ಸದಾ ಬದ್ಧನಾಗಿರಬೇಕಾದ ಆರಕ್ಷಕ. ಈತನ ಹೆಸರು ಉದ್ದಪ್ಪ ಭರಮಪ್ಪ ಕಟ್ಟೀಕರ್. ಬೆಳಗಾವಿಯ ಉದ್ಯಮ ಭಾಗ ಪೊಲೀಸ್ ಠಾಣೆಯ ಪಿಎಸ್‌ಐ ಆಗಿರುವ ಉದ್ದಪ್ಪ ಮನೆತನದ ಜಾತಿಪ್ರತಿಷ್ಠೆ ಕಾಪಾಡಲು ಕಟ್ಟಿಕೊಂಡ ಹೆಂಡತಿಗೇ ಹೊಡೆದು-ಬಡಿದು ಹೊರಹಾಕಿದ್ದಾನೆ. ತಾಯಿ ಮತ್ತು ತಂಗಿಯನ್ನು ಜತೆಗಿಟ್ಟುಕೊಂಡು ಹೆಂಡತಿ ದಲಿತಳೆಂಬ ಒಂದೇ ಕಾರಣಕ್ಕೆ ಕೊಡಬಾರದ ಹಿಂಸೆ ನೀಡಿದ ಉದ್ದಪ್ಪ ತಂಗಿ ಮಗಳೊಂದಿಗೆ ಅಕ್ರಮ ಕೂಡಿಕೆ ನಡೆಸಿದ್ದಾನೆ.

ಉದ್ದಪ್ಪ ನೋಡಲು ಎಷ್ಟು ಮುದ್ದಾಗಿದ್ದಾನೋ ಅಷ್ಟೇ ಖತರ್‌ನಾಕ್ ಆಸಾಮಿ; ಖಾಕಿ ಅಧಿಕಾರಿ ಎಂಬ ಅಮಲೇರಿಸಿಕೊಂಡಿರುವ ಈತ ಅಂಕೋಲೆಯ ಬಡ ದಲಿತರ ಮನೆಯ ಅಮಾಯಕ ಹುಡುಗಿ ಪ್ರತಿಮಾ ಆಗೇರ ಪಾಲಿಗೆ ಪಕ್ಕಾ ಕಿರಾತಕನಂತಾಗಿದ್ದಾನೆ. ಉದ್ದಪ್ಪ ಬೆಳಗಾವಿ ಜಿಲ್ಲೆಯ ರಾಯಭಾಗದ ಪ್ರಬಲ ಕುರುಬರ ಮನೆತನದ ಕುಲಕಂಠೀರವ. ಸಾಕಷ್ಟು ಸ್ಥಿತಿವಂತ ಕುಟುಂಬ ಆತನದು. ಒಬ್ಬ ಅಣ್ಣ ಸಾಫ್ಟ್‌ವೇರ್ ಇಂಜಿನಿಯರ್‌ನಾದರೆ ಮತ್ತೊಬ್ಬ ಫ್ರೆಡ್ ಎಂಬ ಎನ್‌ಜಿಓದ ಅಧ್ಯಕ್ಷನಾಗಿದ್ದವ. ಉದ್ಧಟತನವೇ ಮೈವೆತ್ತಂತಿರುವ ಉದ್ದಪ್ಪ ಜಾತಿ ಲಾಬಿ ಬಳಸಿಯೇ ಪಿಎಸ್‌ಐ ನೌಕರಿ ಗಿಟ್ಟಿಸಿರುವಾತ.

ರಾಯಭಾಗದಲ್ಲಿ ಅಂಗವಿಕಲರ ಕ್ಷೇಮಾಭಿವೃದ್ಧಿ ಹೆಸರಲ್ಲಿ ನಡೆಯುತ್ತಿರುವ ನಾನ್ ಗವರ್ನಮೆಂಟ್ ಆರ್ಗನೈಜೇಷನ್ ಫ್ರೆಡ್‌ನ ಸಕಲ ಪಾರುಪತ್ಯ ಉದ್ದಪ್ಪನ ಅಣ್ಣ ಲಕ್ಕಪ್ಪ ಕಟ್ಟೀಕರ್ ಯಾನೆ ಲಖನ್‌ದು! ಈ ಸಂಸ್ಥೆಯಲ್ಲಿ ಅಂಕೋಲಾದ 'ಆಗೇರ' ಸಮುದಾಯದ ಪ್ರತಿಮಾ ನೌಕರಿಗೆ ಸೇರಿಕೊಂಡಿದ್ದು 2000 ದಶಕದ ಅಂತ್ಯದಲ್ಲಿ. ಅಲ್ಲಾಕೆ ಎನ್‌ಟಿಸಿ ಕೋರ್ಸಿನ ಶಿಕ್ಷಕಿಯಾಗಿ ಮತ್ತು ಫ್ರೆಡ್‌ನ ಕಾರ್ಯಕರ್ತೆಯಾಗಿ ಚಾಕರಿ ಮಾಡುತ್ತಿದ್ದಳು. ಅಣ್ಣನ ಆಡಳಿತದಲ್ಲಿದ್ದ ಫ್ರೆಡ್‌ಗೆ ಆಗಾಗ ಉದ್ದಪ್ಪ ವಕ್ಕರಿಸುತ್ತಿರುತ್ತಿದ್ದ. ಅಲ್ಲಿದ್ದ ಅಸಹಾಯಕ-ಅಮಾಯಕ ಹುಡುಗಿಯರೊಂದಿಗೆ ಲಲ್ಲೆಗರೆಯುವುದು ಆತನ ನಿತ್ಯ ಕರ್ಮವಾಗಿತ್ತು.

ಉದ್ದಪ್ಪನ ಮೋಡಿ ಮಾಡುವ ಮಾತುಗಾರಿಕೆ, ನಕಲಿ ಸಜ್ಜನಿಕೆಗೆ ಪ್ರತಿಮಾ ಬಲಿ ಬೀಳುವುದಕ್ಕೆ ತಡವೇನೂ ಆಗುವುದಿಲ್ಲ. ಉದ್ದಪ್ಪ-ಪ್ರತಿಮಾರ ಪರಿಚಯ ಬಲುಬೇಗ ಪ್ರಣಯವಾಗಿ ಮಾರ್ಪಡುತ್ತದೆ. ಮದುವೆ ಆಗುವುದಾಗಿ ಉದ್ದಪ್ಪ ಹೇಳಿದಾಗ ರಾಯಭಾಗದ ಕಡೆಯ ಕುರುಬರ ಪಾಳೇಗಾರಿಕೆಯ ಅರಿವಿದ್ದ ಪ್ರತಿಮಾ ತಾನು 'ದಲಿತ'ಳೆಂಬ ಸತ್ಯ ಹೇಳುತ್ತಾಳೆ. ಜಾತಿ ಹಂಗು ತನಗಿಲ್ಲ ಎಂಬ ಕ್ರಾಂತಿಕಾರಿ ಮಾತಾಡಿದ ಉದ್ದಪ್ಪನನ್ನು ಪ್ರತಿಮಾ ನಂಬುತ್ತಾಳೆ. ಪ್ರಣಯ ಮುಂದುವರಿಯುತ್ತದೆ. ಆ ಹೊತ್ತಿಗೆ ಪ್ರತಿಮಾಳಿಗೆ ಊರಿನ ಹತ್ತಿರದ ಬೊಬ್ರುವಾಡದ ಶಾಲೆಯೊಂದರಲ್ಲಿ ಕೆಲಸ ಸಿಗುತ್ತದೆ. ವಯಸ್ಸಾದ ತಾಯಿ ಒಬ್ಬಳೇ ಇರುವುದರಿಂದ ಆಕೆ ಅಂಕೋಲೆಗೆ ಬರಲು ತೀರ್ಮಾನಿಸುತ್ತಾಳೆ. ಇದಕ್ಕೆ ಉದ್ದಪ್ಪನ ಒಪ್ಪಿಗೆಯೂ ಸಿಗುತ್ತದೆ.

ಪ್ರತಿಮಾ ಅಂಕೋಲೆಗೆ ಮರಳಿದಾಗ ಉದ್ದಪ್ಪ ಸಬ್‌ಇನ್ಸ್‌ಪೆಕ್ಟರ್ ಆಗಿ ಆಯ್ಕೆಯಾಗುತ್ತಾನೆ. ಟ್ರೈನಿಂಗ್ ಮುಗಿಸಿದ ಉದ್ದಪ್ಪನಿಗೆ ಕಲಬುರುಗಿಗೆ ಪ್ರೊಬೇಷನರಿಯಾಗಿ ನೇಮಕವಾಗುತ್ತದೆ. ಆದರೆ ಮನದನ್ನೆಯ ಊರಿನ ಸಮೀಪದ ಶಿರಸಿಗೆ ಆತ ವರ್ಗಾಯಿಸಿಕೊಂಡು ಬರುತ್ತಾನೆ. ಪ್ರೊಬೇಷನರಿ ಮುಗಿಸಿದ ಉದ್ದಪ್ಪನಿಗೆ ಬನಹಟ್ಟಿಗೆ ಪಿಎಸ್‌ಐ ಎಂದು ವರ್ಗವಾಗುತ್ತದೆ. ಅಲ್ಲಿ ಉದ್ದಪ್ಪ-ಪ್ರತಿಮಾರ ವಿವಾಹ ನೆರವೇರುತ್ತದೆ. 10.12.2010 ರಂದು ಎರಡೂ ಕಡೆಯವರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ.


ಮಾಧವ ನಾಯ್ಕ್ ಜೊತೆಗೂಡಿ ಓಂಪ್ರಕಾಶ್ ಅವರಿಗೆ ಮನವಿ ಕೊಡುತ್ತಿರುವ ಪ್ರತಿಮಾ

ಮದುವೆ ಮುಗಿದನಂತರದ ಮೂರ್ನಾಲ್ಕು ತಿಂಗಳು ಸಂಸಾರ ಸುಖವಾಗಿಯೇ ನಡೆಯಿತು. ಪ್ರತಿಮಾಳಿಗೆ ನರಕ ಎಂಬುದು ದರ್ಶನವಾಗಿದ್ದು ಉದ್ದಪ್ಪನ ತಾಯಿ ಲಕ್ಷ್ಮೀಬಾಯಿ ಮಗನ ದಾಂಪತ್ಯದಲ್ಲಿ ಮೂಗು ತೂರಿಸಿದಾಗ. ಲಕ್ಷ್ಮೀಬಾಯಿಗೆ ಪ್ರತಿಮಾ 'ಅಸ್ಪೃಶ್ಯ' ಜಾತಿಯವಳೆಂಬುದು ಮೊದಲು ತಿಳಿದಿರಲಿಲ್ಲ. ಇದು ಗೊತ್ತಾದರೆ ತಾಯಿ ಮದುವೆಗೆ ಅಡ್ಡಿ ಮಾಡುತ್ತಾಳೆಂದು ಉದ್ದಪ್ಪ ಮತ್ತವನ ಅಣ್ಣ ಲಖನ್‌ಗೆ ಗೊತ್ತಿತ್ತು. ಹೀಗಾಗಿ ಜಾತಿ ಅಡಗಿಸಿಟ್ಟಿದ್ದರು. ಆದರೆ ಅದು ಹೇಗೋ ಲಕ್ಷ್ಮೀಬಾಯಿಗೆ ಸೊಸೆ ಆಗೇರ ಕುಲದವಳೆಂಬುದು ಗೊತ್ತಾಗಿ ಬಿಡುತ್ತದೆ. ಆಗಾಕೆಯ ಕ್ರೌರ್ಯ-ಕಿರುಕುಳ-ಕುಹಕ ಶುರುವಾಗುತ್ತದೆ.

ಆರಂಭದಲ್ಲಿ ಪ್ರಗತಿಪರನಂತಿದ್ದ ಉದ್ದಪ್ಪನ ತಲೆಯಲ್ಲೂ ಜಾತಿ ಪಿಶಾಚಿ ಹೊಕ್ಕಿತ್ತು. ಸ್ವ-ಜಾತಿ ಹುಡುಗಿಯನ್ನು ಮದುವೆಯಾದರೆ ಲಕ್ಷ-ಲಕ್ಷ ವರದಕ್ಷಿಣೆ ಸಿಗುತ್ತದೆಂಬ ದುರಾಸೆ ಶುರುವಾಗಿತ್ತು. ಹೆತ್ತವಳ ಜಾತಿಯತೆ ಈಗೋ ತಣಿಸಲು ಈ ಠಿಕ್ಕಲು ಉದ್ದಪ್ಪ ಹೆಂಡತಿಗೆ ಪೀಡಿಸಲು ಶುರು ಹಚ್ಚಿಕೊಂಡ. ಪಿಎಸ್‌ಐ ದಲಿತರ ಹೆಣ್ಣನ್ನು ಹೆಂಡತಿಯಂತೆ ಇಟ್ಟುಕೊಳ್ಳೋದು ಜಾತಿಯವರ ನಡುವೆ ಆತನಿಗೆ ಒಂಥರಾ ಮುಜುಗರ-ಅವಮಾನವಾಗಿ ಬಾಧಿಸತೊಡಗಿತು. ದುರ್ಬಲ ಮನಸ್ಥಿತಿಯ ಹುಂಬ ಉದ್ದಪ್ಪ ಕೈಹಿಡಿದ ಹೆಂಡತಿಯನ್ನು ರಾಕ್ಷಸನಂತೆ ಕಾಡತೊಡಗಿದ.

ಉದ್ದಪ್ಪನಿಗೆ ತಾಯಿ ಜಾತಿ ಹುಡುಗಿಯ ಕಟ್ಟಲು ಸ್ಕೆಚ್ ಹಾಕಿದ್ದಳು. ಗಂಡನ ಮನೆ ಬಿಟ್ಟು ತವರು ಸೇರಿಕೊಂಡಿದ್ದ ಉದ್ದಪ್ಪನ ತಂಗಿ ಮಾಯಾಳ ಮಗಳು ಲಕ್ಷ್ಮೀಯೇ ತನ್ನ ಖಾಕಿ ದಿರಿಸಿನ ಎಸ್‌ಐ ಸಾಹೇಬ ಪುತ್ರರತ್ನನಿಗೆ ಯೋಗ್ಯ ಹೆಂಡತಿ ಎಂಬುದು ಲಕ್ಷ್ಮೀಬಾಯಿಯ ತೀರ್ಮಾನವಾಗಿತ್ತು. ತಾಯಿ ಲಕ್ಷ್ಮೀಬಾಯಿ-ತಂಗಿ ಮಾಯಾ ಮತ್ತು ಆಕೆಯ ಮಗಳು ಲಕ್ಷ್ಮೀ ಜತೆ ಸೇರಿಕೊಂಡು ಉದ್ದಪ್ಪ ಪ್ರತಿಮಾಳ ಮೇಲೆ ಪ್ರತಿದಿನವೂ ಹಲ್ಲೆ ಮಾಡತೊಡಗಿದ. ತಂಗಿ ಮಗಳನ್ನು ಮನೆಗೇ ತಂದಿಟ್ಟುಕೊಂಡು 'ಮಜಾ' ಮಾಡಹತ್ತಿದ; ಈತ ಅದೆಂಥ ಘಟಿಂಗನೆಂದರೆ ವಿಷಮ ದಾಂಪತ್ಯದ ನಡುವೆಯೂ ಪ್ರತಿಮಾಳ ಜತೆ ಲೈಂಗಿಕ ಸಂಪರ್ಕ ಮುಂದುವರಿಸಿದ್ದ. 3.12.2011ರಂದು ಆಕೆಗೆ ಹೆಣ್ಣು ಮಗುವನ್ನು ಉದ್ದಪ್ಪ ಕರುಣಿಸಿದ್ದ.

ಚೊಚ್ಚಲು ಬಾಣಂತನಕ್ಕೆಂದು ತವರಿಗೆ ಬಂದಿದ್ದ ಪ್ರತಿಮಾಳಿಗೆ ದೊಡ್ಡ ಆಘಾತ ಕಾದಿತ್ತು. ಹೆಣ್ಣು ಮಗು ಜನಿಸಿದ ದಿನವೇ ಅಂಕೋಲೆಗೆ ಬಂದಿದ್ದ ಉದ್ದಪ್ಪ ಹೆಂಡತಿ ದಾಖಲಾಗಿದ್ದ ಆಸ್ಪತ್ರೆಗೆ ಹೋಗಿ ಒಂದೇ ಸಮನೆ ಬೈದು ಎಗರಾಡಿದ್ದಾನೆ. "ನೀನು ಮೊದಲೇ ಕೀಳು ಜಾತಿಯವಳು.... ಈಗ ಹೆಣ್ಣು ಬೇರೆ ಹೆತ್ತಿದ್ದೀಯಾ... ಇವಳನ್ನು ನಾಳೆ ಯಾರು ಮದ್ವೆ ಆಗ್ತಾರೆ.... ನೀನು-ನಿನ್ನ ಮಗಳು ಇಲ್ಲೇ ಸಾಯ್ರಿ...." ಎಂದು ಮೂದಲಿಸಿ ಬೆಳಗಾವಿಗೆ ಹೋಗಿದ್ದಾನೆ. ಹಸಿ ಬಾಣಂತಿ ಪ್ರತಿಮಾ ಗಂಡನ ಈ ಅಮಾನುಷ ವರ್ತನೆಗೆ ಜರ್ಜರಿತಳಾಗಿ ಹೋಗಿದ್ದಾಳೆ.

ಹೆಣ್ಣು ಮಗು ಜನಿಸುವ ಮೊದಲೇ ಎರಡು-ಮೂರು ಬಾರಿ ಮನೆಯಿಂದ ಹೆಂಡತಿಯನ್ನು ಓಡಿಸಿದ್ದ ಉದ್ದಪ್ಪ ಹೆರಿಗೆ ನಂತರ ಆಕೆಯನ್ನು ಮನೆಗೆ ಸೇರಿಸಿಕೊಳ್ಳಲು ಬಿಲ್‌ಕುಲ್ ಒಪ್ಪಲೇ ಇಲ್ಲ. ಆತನ ತಾಯಿಯಂತೂ ಹೆಮ್ಮಾರಿಯಂತಾಗಿ ಪ್ರತಿಮಾ ಬಾರದಂತೆ ಅಡ್ಡ ನಿಂತಿದ್ದಳು. ಆದರೂ ಆಕೆ ತಾಯಿ-ಸೋದರತ್ತೆಯ ಕರೆದುಕೊಂಡು ಗಂಡನಿದ್ದ ಬೆಳಗಾವಿಯ ಸಿಟಿಲೈನ್ ಪೊಲೀಸ್ ವಸತಿಗೃಹಕ್ಕೆ ಹೋದಳು. ಅಲ್ಲಿ ಉದ್ದಪ್ಪನ ತಾಯಿಯೂ ಇದ್ದಳು. ತಾಯಿ-ಮಗ ಕೂಡಿ ಪ್ರತಿಮಾಗೆ ಹೊಡೆದರು. ಬೆದರಿದ ಪ್ರತಿಮಾಳ ತಾಯಿ ಮಗಳನ್ನು ತವರಿಗೆ ಕರೆದುಕೊಂಡು ಬಂದಳು.

ಆಗಾಕೆಗೆ ಪೊಲೀಸ್ ಠಾಣೆಯ ಮೆಟ್ಟಿಲೇರದೇ ಬೇರೆ ದಾರಿಯೇ ಇರಲಿಲ್ಲ. ಸಂಸಾರದ ಗುಟ್ಟು ರಟ್ಟಾಗಬಾರದೆಂ[...] ಆಕೆ ಅವಡುಗಚ್ಚಿ ಒತ್ತಿ ಹಿಡಿದಿದ್ದ ಸಹನೆ ಆಸ್ಫೋಟಿಸಿತ್[...] ಇಂದಲ್ಲ-ನಾಳೆ ಗಂಡ ಸರಿ ಹೋಗಬಹುದು, ತನ್ನ ದಾಂಪ[...] ಹಳಿಗೇರಬಹುದೆಂದು ಪ್ರತಿಮಾ ಇಟ್ಟಿದ್ದ ನಿರಿ[...] ಹುಸಿಯಾಗಿತ್ತು. ಪ್ರತಿಮಾ ಅನಿವಾರ್ಯವಾಗಿ ಅಂಕೋ[...] ಠಾಣೆಯಲ್ಲಿ ಗಂಡನ ಮನೆಯ ದೌರ್ಜನ್ಯದ ಬಗ್ಗೆ ಕಂಪ್ಲೇಂ[...] ಕೊಡುತ್ತಾಳೆ. ಆ ಹೊತ್ತಲ್ಲಿ ಅಲ್ಲಿದ್ದ ಪೊಲೀಸ್ ಇನ್ಸ್‌ಪೆಕ್[...] ಛಲವಾದಿ ಎಂಬಾತ ಪೊಲೀಸ್ ಸಂತಾನದ ಮ[...] ಹರಾಜಾಗೋದು ಬೇಡವೆಂದು ಕಂಪ್ಲೇಟು ರಿಜಿಸ್[...] ಮಾಡದೆ ಉದ್ದಪ್ಪನನ್ನು ರಹಸ್ಯವಾಗಿ ಕರೆಸಿ "ರಾ[...] ಮಾಡಿಸುತ್ತಾರೆ. ಉದ್ದಪ್ಪ ಒಲ್ಲದ ಮನಸ್ಸಿಂದ ಹೆಂಡತಿಯ[...] ಕರೆದೊಯ್ಯುತ್ತಾನೆ. ಕಾನೂನಿಗೆ ಹೆದರಿದ ಉದ್ದಪ್ಪನ ತಾ[...] ಸೊಸೆಯನ್ನು ಮನೆ ಸೇರಿಸಿಕೊಳ್ಳುತ್ತಾಳಾದರೂ ಕಿರುಕ[...] ಮಾತ್ರ ನಿಲ್ಲಿಸುವುದಿಲ್ಲ!!

ಹಿಂಸೆಯೆಂಬುದು ವಿಪರೀತವಾಗುತ್ತದೆ. ಉದ್ದ[...] ತಾಯಿ ಲಕ್ಷ್ಮೀಬಾಯಿ ಮಾತುಮಾತಿಗೆ "ನೀನು ಕೀ[...] ಕುಲದವಳು.... ನನ್ನ ಮಗನ ತಲೆ ಕೆಡಿಸಿ ಮದ[...] ಆದವಳು.... ನನ್ನ ಪಿಎಸ್‌ಐ ಮಗನಿಗೆ ಲಕ್ಷಾಂತರ [...] ವರದಕ್ಷಿಣೆ ನಿನ್ನಿಂದ ತಪ್ಪಿಹೋಯ್ತು..... ನೀನು ಒಂ[...] ಬಿಲ್ಲಿ ತಂದಿಲ್ಲ.... ಮನೆಯಿಂದ ತೊಲಗು..... ನಿನ್ನ ಅ[...] ಮಗಳನ್ನು ಕರೆದುಕೊಂಡು ಹೋಗು....." ಎಂ[...] ಸತಾಯಿಸುತ್ತಾಳೆ. ತಂಗಿ ಮಾಯಾಳ ಮಗಳು ಲ[...] ಎಂಬ ಕಾಲೇಜು ವಿದ್ಯಾರ್ಥಿನಿಯನ್ನು ಉದ್ದಪ್ಪ [...] ಕ್ವಾಟ್ರರ್ಸ್‌ಗೆ ತಂದು ಇಟ್ಟುಕೊಳ್ಳುತ್ತಾನೆ. ಹೆಂಡತಿ ಎದ[...]





ಆಕೆಯೊಂದಿಗೆ ಚಕ್ಕಂದ ಆಡುತ್ತಾನೆ. ಇದೆಂಥ [...] ಎಂದು ಹೆಂಡತಿ ಆಕ್ಷೇಪಿಸಿದರೆ, "....ಆಕಿ ನನ್ನ [...] ಆದಾಳು.... ಬೇಕಿದ್ರ ನೀ ಆಕಿ ಜತೆಗೇ ಕಸವ[...] ತಿಕ್ಕೊಂತ ಬಾಳ್ವೆ ಮಾಡಬೇಕು" ಎಂದು ಗುಟುರು ಹಾ[...] ಪಿಎಸ್‌ಐ ಉದ್ದಪ್ಪ!


ಪ್ರತಿಮಾಳನ್ನು ಹೇಗಾದರೂ ಮಾಡಿ ಓಡಿಸಬೇ[...] ಹಠಕ್ಕೆ ಬಿದ್ದಿದ್ದ ಉದ್ದಪ್ಪನ ತಾಯಿ-ತಂಗಿ ಆಗಾಗ [...] ಬೆಳಗಾವಿಯ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ [...] ಹೂಡುತ್ತಾರೆ. ಆಗೆಲ್ಲ ಉದ್ದಪ್ಪ ತಾಯಿ ಲಕ್ಷ್ಮೀಬ[...] ತಂಗಿ ಮಾಯಾ ಮತ್ತು ಲಕ್ಷ್ಮೀ ಒಟ್ಟಾಗಿ ಪ್ರತಿ[...] ಮೇಲೆ ಮುಗಿಬಿದ್ದು ಹರಿದು ಮುಕ್ಕುತ್ತಿದ್ದರು [...] ದೈಹಿಕ-ಮಾನಸಿಕ ದಾಳಿಯ ನಡುವೆಯೇ ಪ್ರತಿಮಾ[...] ಬಸುರಿಯಾಗುತ್ತಾಳೆ! ಗರ್ಭಿಣಿ ಎಂದೂ ನೋಡ[...] ಪಾಪಿಗಳು ಅಸಹಾಯಕ ಹೆಂಗಸು ಪ್ರತಿಮಾಳ [...] ಬರ್ಬರ ಹಲ್ಲೆ ಮಾಡುವುದು ಮಾಮೂಲಾಗಿಹೋ[...] ಆಕೆಯ ಹೊಟ್ಟೆಯ ಮೇಲೆ ಒದೆಯುವುದು, [...] ಹಿಸುಕುವುದು, ಮೊದಲ ಮಗುವನ್ನು ಥಳಿಸುವುದು [...]


ಪ್ರತಿಮಾ ತನ್ನ ಮಗಳು ಮತ್ತು ತಾಯಿಯೊಂದಿಗೆ

ಎಂಬಂತೆ ನಡೆಯುತ್ತಿತ್ತು.







ಪ್ರತಿಮಾ ಬೆಳಗಾವಿ ಪೊಲೀಸ್ ಕಮೀಷನರ್‌ಗೆ ದೂರು ಕೊಡಲು ಹೋದರೆ, ಅಲ್ಲಾಕೆ ಒಳಗೇ ಹೋಗಲಾಗದಂತೆ ಉದ್ದಪ್ಪ ವ್ಯವಸ್ಥೆ ಮಾಡಿದ್ದ! ಅಷ್ಟೇ ಅಲ್ಲ, ಗತಿಯಿಲ್ಲದೆ ಮನೆಗೆ ಬಂದ ಪ್ರತಿಮಾಳಿಗೆ ಉದ್ದಪ್ಪ ರಕ್ಕಸನಂತೆ ಬಡಿಯುತ್ತಾನೆ. ತವರಿಗೆ ಹೋಗುವಂತೆ ಹೆದರಿಸುತ್ತಾನೆ. ಮಗಳಿಗೂ ಹೊಡೆಯುತ್ತಾನೆ. ಈ ಕ್ರೌರ್ಯ ತಾಳಲು ಪ್ರತಿಮಾಳಿಂದ ಆಗುವುದಿಲ್ಲ. ಆಕೆ ವಿಧಿಯಿಲ್ಲದೆ ತವರಿಗೆ ಬರುತ್ತಾಳೆ. ದಿಕ್ಕು ತೋಚದೆ ಆಕೆ ದಿಗಿಲುಬಿದ್ದು ಕುಂತಿದ್ದಾಳೆ. ಪೊಲೀಸರಿಗೆ ದೂರು ಕೊಡಲು ಧೈರ್ಯ, ನಂಬಿಕೆ ಬರುತ್ತಿಲ್ಲ. ಸಮಾಜ ಕಲ್ಯಾಣ ಇಲಾಖಾಧಿಕಾರಿಗಳಿಗೆ ಗೋಳು ಹೇಳಿಕೊಂಡಿದ್ದಾಳೆ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ನೋಟಿಸ್ ನೀಡಿದ್ದಾರೆ. ಆದರೆ ಉದ್ದಪ್ಪ ಕುರುಬರ ಲಾಬಿ ಪ್ರಯೋಗಿಸಿ ತಲೆ ತಪ್ಪಿಸಿಕೊಳ್ಳುತ್ತಿದ್ದಾನೆ.

ಈಗ ಪ್ರತಿಮಾ ಎಂಟು ತಿಂಗಳ ತುಂಬು ಗರ್ಭಿಣಿ! ತಂದೆ, ಅಣ್ಣ, ತಮ್ಮ ಇಲ್ಲದ ಆಕೆಗೆ ತಾಯಿಯೊಬ್ಬಳೇ ದಿಕ್ಕು. ಬಿಎಸ್‌ಎನ್‌ಎಲ್‌ನಲ್ಲಿದ್ದ ಈಕೆಯ ತಂದೆ ಗತಿಸಿ ಹಲವು ವರ್ಷವಾಗಿದೆ. ಈಕೆಯ ತಾಯಿ ಧಾರವಾಡ ಕಡೆಯ ಬ್ರಾಹ್ಮಣರ ಹೆಂಗಸು. ದಲಿತನ ಮದುವೆಯಾಗಿದ್ದಕ್ಕೆ ಆಕೆಯನ್ನು ತವರಿನವರು ಹಚ್ಚಿಕೊಳ್ಳುವುದಿಲ್ಲ. ಪ್ರತಿಮಾಳ ಅಪ್ಪನಿಗೆ ಇನ್ನಿಬ್ಬರು ಹೆಂಡರಿದ್ದರು. ಹೀಗಾಗಿ ಪುರಲಕ್ಕಿಬೇಣದ ಮೂಲ ಆಸ್ತಿಯಲ್ಲಿ ಆಕೆಯ ತಾಯಿಗೆ ಗೇಣು ಪಾಲೂ ಸಿಕ್ಕಿಲ್ಲ. ಶಿಕ್ಷಣಾಧಿಕಾರಿ ಕಚೇರಿಯಲ್ಲಿ ದಿನಗೂಲಿಯಾಗಿ ಆಯಾ ಚಾಕರಿ ಮಾಡುವ ಪ್ರತಿಮಾಳ ತಾಯಿ ಗರ್ಭಿಣಿ ಮಗಳು, ಮೊಮ್ಮಗಳನ್ನು ಕಟ್ಟಿಕೊಂಡು ಬಾಡಿಗೆ ಮನೆಯಲ್ಲಿ ಬದುಕುತ್ತಿದ್ದಾಳೆ.

ಪ್ರತಿಮಾಳ ಗೋಳು ಹೇಳತೀರದು.. ಆಕೆಗೆ ಹೇಳೋರು, ಕೇಳೋರು ಯಾರೂ ಇಲ್ಲವೆಂಬುದೇ ಉದ್ಧಟ ಉದ್ದಪ್ಪನ ಸೈತಾನಶಕ್ತಿಯ ರಹಸ್ಯ! ಸಿಎಮ್ಮೇ ನಮ್ಮ ಜಾತಿಯೋರು. ನಂಗೆ ಯಾರಿಂದಲೂ ಏನೂ ಮಾಡಲಿಕ್ಕಾಗದು ಎಂದು ಹಾರಾಡುವ ಉದ್ದಪ್ಪನ ಹಿಂದೆ ಕುರುಬರ ಪ್ರಭಾವಿಗಳ ಗ್ಯಾಂಗ್ ಇರೋದು ಖರೆ. ಯಾರಿದ್ದರೇನಂತೆ ಆತನೇನೂ ಈ ನೆಲದ ಕಾನೂನಿಗೆ ಅತೀತನೇ ನಲ್ಲವಲ್ಲ?! ಈತನ ಮೇಲೆ, ಆತನ ತಾಯಿ, ತಂಗಿ ಮತ್ತು ಅಕ್ರಮ ಹೆಂಡತಿ ಲಕ್ಷ್ಮೀ ಮೇಲೆ ದಲಿತ ನಿಂದನೆ, ವರದಕ್ಷಿಣೆ ಪೀಡನೆ ಕೇಸು ದಾಖಲಾಗಿದೆ. ಕಳೆದ ವಾರ ಕಾರವಾರಕ್ಕೆ ಬಂದಿದ್ದ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ ಕೈಗೇ ಆಕೆ ಪಿಎಸ್‌ಐ ಉದ್ದಪ್ಪನ ದೌರ್ಜನ್ಯ ಕಾಂಡದ ಕತೆ ಬರೆದು ಕೊಟ್ಟಿದ್ದಾಳೆ.

ಅನಾಥ ಪ್ರತಿಮಾಳ ಬೆನ್ನಿಗೀಗ ನಿಂತಿರುವುದು ಕಾರವಾರದ "ಜನಶಕ್ತಿ ವೇದಿಕೆ". ಅದರ ಅಧ್ಯಕ್ಷ ಮಾಧವ ನಾಯ್ಕ ರಿಸ್ಕ್ ತೆಗೆದುಕೊಂಡು ಪ್ರತಿಮಾಳ ಸಂಸಾರ ಸರಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆತನೇ ಮುಂದಾಗಿ ಡಿಜಿ ಓಂಪ್ರಕಾಶ್ ಬಳಿ ಪ್ರತಿಮಾಳನ್ನು ಕರೆದೊಯ್ದಿದ್ದು; ಅಂಕೋಲಾ ಠಾಣೆಯಲ್ಲಿ ಉದ್ದಪ್ಪ ಮತ್ತವನ ಕುಟುಂಬದ ಪಾತಕಿಗಳ ಮೇಲೆ ಕೇಸು ದಾಖಲಾಗುವಂತೆ ಮಾಧವ ನಾಯ್ಕ ನೋಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ಅಂಕೋಲೆಯ ಆರ್ಯ ಮೆಡಿಕಲ್ ಸೆಂಟರ್ ಆಸ್ಪತ್ರೆಯಲ್ಲಿ ಅಸಹಾಯಕ ಪ್ರತಿಮಾಳಿಗೆ ಹೆರಿಗೆ ಆಗೋತನಕ ಫ್ರೀ ಟ್ರೀಟ್‌ಮೆಂಟ್ ಕೊಡುವಂತೆ ಅಲ್ಲಿನ ವೈದ್ಯ ತಿನೇಕರ್‌ಗೆ ಕೇಳಿಕೊಂಡಿದ್ದಾರೆ. ಇದಕ್ಕೆ ವೈದ್ಯರು ಒಪ್ಪಿದ್ದಾರೆ. ಮಾಧವ ನಾಯ್ಕ ಮತ್ತು ಡಾ. ತಿನೇಕರ್ ಕರುಣೆಯಿಂದ ನೋವಿನಲ್ಲೂ ಒಂಚೂರು ಪ್ರತಿಮಾ ನಗುವಂತಾಗಿದೆ.

ಈಗ ಪಿಎಸ್‌ಐ ಉದ್ದಪ್ಪ ಕಂಗಾಲಾಗಿದ್ದಾನೆ. ಡ್ಯೂಟಿಗೆ ರಜಾ ಹಾಕಿ ಬಚಾವಾಗಲು ತಲೆಮರೆಸಿಕೊಂಡು ಅಂಡಲೆಯುತ್ತಿದ್ದಾನೆ. ಸ್ವಜಾತಿ ಲೀಡರ್‌ಗಳ ಹಿಡಿದುಕೊಂಡು ಪ್ರತಿಮಾ ಹಾಕಿರುವ ಪತ್ನಿ ಪೀಡನೆ ಕೇಸ್ ಹಳ್ಳ ಹಿಡಿಸಲು ಹವಣಿಸುತ್ತಿದ್ದಾನೆ. ಒಂದು ಸುದ್ದಿಯಂತೆ ಸಿಎಂ ಆಫೀಸಿಂದಲೇ ಉದ್ದಪ್ಪನ ರಕ್ಷಣೆಗೆ ಆದೇಶಗಳು ಬರುತ್ತಿವೆಯಂತೆ. ಹೀಗಾಗಿ ಸಾಕ್ಷಾತ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಓಮಿ ಸಾಹೇಬರಿಗೇ ಪ್ರತಿಮಾ ದೂರು ಕೊಟ್ಟರೂ ಪ್ರಯೋಜನವಾಗಲಿಲ್ಲ. ಉತ್ತರ ಕನ್ನಡ ಎಸ್ಪಿಯಂತೂ ತಬಲಾ ಬಾರಿಸೋದರಲ್ಲಿ, ರಿಚುಸ್ವಾ ಸ್ವಾಮಿ ರಾಘುನ ರಕ್ಷಿಸೋದರಲ್ಲಿ ಬಿಜಿಯಾಗಿರ್ತಾರೆ. ಪ್ರತಿಮಾಳಂಥ ಬಡ ದಲಿತರಿಗಾಗುವ ಅನ್ಯಾಯ ಬ್ರಾಹ್ಮಣ ಎಸ್ಪಿ ದಿಲೀಪ್‌ಗೆ ಅರ್ಥವಾಗೋದಿಲ್ಲ ಬಿಡಿ. ಬೆಳಗಾವಿ ಕಮೀಷನರ್ ಎಸ್. ರವಿಗಾದರೂ ಉದ್ದಪ್ಪನನ್ನು ಮಟ್ಟಹಾಕಲಾದೀತಾ?

ಹಾಗಿದ್ದರೆ ಪ್ರತಿಮಾಳ ಕಣ್ಣೀರು ಒರೆಸೋರ್‍ಯಾರು? ಮಹಿಳಾ ಪರ ಸಂಘಟನೆಗಳು, ಹೋರಾಟಗಾರ್ತಿಯರು ಇತ್ತ ಗಮನ ಹರಿಸಿಯಾರಾ? ಮಹಿಳಾ ಮಂತ್ರಿ ಉಮಾಶ್ರೀ ತಕ್ಷಣ ಎಚ್ಚೆತ್ತುಕೊಂಡು ಪ್ರತಿಮಾಳಿಗೆ ಹೊಸ ಬದುಕು ರೂಪಿಸುವರಾ? ನಿಷ್ಕಾರಣ ಪ್ರತಿಮಾಳ ಬದುಕು ಬರ್ಬಾದ್ ಮಾಡಿರುವ ಪಿಎಸ್‌ಐ ಉದ್ದಪ್ಪನಿಗೆ ಕಾನೂನಿನ ಪಾಠ ಮಾಡಿ ಅನಾಥ ಪ್ರತಿಮಾಗೆ ಸಾಂತ್ವನ ಹೇಳುವ ಹೊಣೆಯಂತೂ ಆಳುವವರಿಗಿದೆ!

■ ನಹುಷ

ರೈತರ ಕಷ್ಟ ನಿನಿಗೇನು ಗೊತ್ತು

ಥೂತ್ತೇರಿ

ಖಾಹೂ

ಮಾತುಗಾರ ಮನುಷ್ಯನ ಮಾತುಗಳನ್ನು ಮೆಚ್ಚಿಕೊಂಡು ಹೊಗಳಿದರೆ ಆತ ಮೆಚ್ಚುಗೆ ಮಾತನಾಡುವುದನ್ನೇ ಒಂದು ಖಯಾಲಿ ಮಾಡಿಕೊಳ್ಳುತ್ತಾನೆ. ಆದರೆ ಮಾತುಗಾರನೆಂದೂ ಕೆಲಸಗಾರನಲ್ಲ. ಅದರಂತೆ ಮಾತಿನ ಚಟಕ್ಕೆ ಬಿದ್ದ ಮೋದಿ ದುಬೈಗೆ ಹೋಗಿ ನಮ್ಮ ಸಿ.ಎಂ. ಇಬ್ರಾಹಿಂನನ್ನು ಮೀರಿಸುವಂತೆ ಮಾತನಾಡಿದ್ದನ್ನು ಚೆಡ್ಡಿ ಪತ್ರಕರ್ತರು ಚೆಡ್ಡಿ ಒದ್ದೆಯಾಗುವಷ್ಟು ಹೊಗಳುತ್ತಿವೆಯಂತಲ್ಲಾ. ಹೀನ ಮನಸ್ಸಿನ ಮಾನವರು ಎಲ್ಲೇ ಹೋದರೂ ಇತರರ ಮಾನ ಹರಾಜು ಹಾಕುವುದರಲ್ಲೇ ಕಾಲ ಕಳೆಯುತ್ತಾರಂತೆ. ಹಾಗೆಯೇ ಈ ಮೋದಿ ಹೋದಲ್ಲೆಲ್ಲಾ ಭಾರತದ ವಿರೋಧ ಪಕ್ಷ ಮತ್ತು ಈ ಹಿಂದೆ ಆಳಿದ ನಾಯಕರ ತೇಜೋವಧೆ ಮಾಡುವುದನ್ನೇ ಘನಕಾರ್ಯವೆಂದು ಭಾವಿಸಿದ್ದಾನೆ. ಈತ ದೇಶದಿಂದ ಹೊರಗೋದ ಕೂಡಲೇ ಇಡೀ ದೇಶವನ್ನು ಪ್ರತಿನಿಧಿಸುತ್ತೇನೆ ಎಂಬುದನ್ನೇ ಮರೆತು ಕೂತಿದ್ದಾನಲ್ಲಾ, ಥೂತ್ತೇರಿ.


* * *

ಹಾಲಿ ಪ್ರಧಾನಿಯವರದು ಈ ಕತೆಯಾದರೆ, ಇನ್ನ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರು ಬೆಂಗಳೂರು ಬಡಾವಣೆಯ ಗಲ್ಲಿಗಳಲ್ಲಿ ಸುತ್ತುತ್ತಾ ಘನ ಘೋರವಾಗಿ ಅಳುತ್ತಾ ಬಿಕ್ಕಳಿಸಿಕೊಂಡೇ ತಿರುಗಾಡುತ್ತಿದ್ದಾರಂತಲ್ಲಾ. "ಯಾಕೆ ಸಾರ್ ಇಂತಹ ಕಡಿದುಃಖ?" ಎಂದು ಕೇಳಿದರೆ, "ನೋಡಿ ನನಗೆ ಪಾರ್ಟಿ ಕಚೇರಿಯಿಲ್ಲ, ಆದ್ದರಿಂದ ಶೆಡ್ ಹಾಕಿಕೊಂಡು ಅದರಲ್ಲೇ ಕುಳಿತಿದ್ದೇನೆ. ಕುರ್ಚಿಯಿಲ್ಲ, ಟೇಬಲ್ ಇಲ್ಲ, ಬಂದವರಿಗೆ ಕಾಫಿ ತರಿಸಿಕೊಡೋಣವೆಂದರೆ ಒಂದು ಫ್ಲಾಸ್ಕ್ ಇಲ್ಲ, ಶೆಡ್ ಕಚೇರಿಗೆ ಗುಮಾಸ್ತರನ್ನು ನೇಮಿಸಿಕೊಳ್ಳೋಣವೆಂದರೆ, ಅವರಿಗೆ ಸಂಬಳ ಕೊಡಲು ಹಣವಿಲ್ಲ, ಕೆಲ ವರ್ಷಗಳ ಹಿಂದೆ ನಾನು ಪ್ರಧಾನಿಯಾಗಿದ್ದೆ, ನನ್ನ ಮಗ ಮುಖ್ಯಮಂತ್ರಿಯಾಗಿದ್ದ. ಈಗ ಬೀದಿಯಲ್ಲಿದ್ದೇವೆ. ಇದನ್ನೆಲ್ಲಾ ನೋಡಿಕೊಂಡು ಸುಮ್ಮನಿದ್ದೀರಲ್ಲಾ ಇದು ಸರಿಯೇ?" ಎಂದು ಕೇಳಿದರಂತಲ್ಲಾ. ಕಕ್ಕಾಬಿಕ್ಕಿಯಾದ ಬೆಂಗಳೂರು ಬಡಾವಣೆ ಜನ "ಸರಿ ನಾವೇನು ಮಾಡಬೇಕು ಹೇಳಿ ಸಾರ್?" ಎಂದಾಗ ಗೌಡರು ಅಳು ನಿಲ್ಲಿಸಿ "ನಾವು ಕಳೆದುಕೊಂಡಿದ್ದನ್ನು ಮರಳಿ ಕೊಡುವ ಶಕ್ತಿ ನಿಮಗಿದೆ" ಎಂದರಂತಲ್ಲಾ, ಥೂತ್ತೇರಿ!

* * *

ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತು. ರಾಜ್ಯಾಡಳಿತವೂ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳದೆ ಆ, ಊ, ಆಯ್ತು, ಅಂಗೆ ಮಾಡನ, ಅದ್ಯಂಗಾಯ್ತದೇ, ನೋಡನ ನಡಿರಿ, ಎಂಬ ಮಾತಿನ ರಾಜಕಾರಣ ರೇಜಿಗೆ ಹುಟ್ಟಿಸುವಷ್ಟರಲ್ಲಿ, ರೈತರ ಆತ್ಮಹತ್ಯೆಗಳು ಪ್ರಾರಂಭಗೊಂಡವು. ಕರ್ನಾಟಕದ ನೂರಾರು ತಾಲೂಕುಗಳು ಬರಗಾಲಕ್ಕೆ ತುತ್ತಾದವು. ಈಗೇನು ಮಾಡುವುದೆಂಬ ಗಾಢಚಿಂತನೆಯಲ್ಲಿರುವಾಗ ಹಾಳು ಫೋನು ರಿಂಗಾಯ್ತು:

"ಹಲೋ ಯಾರು?"



"ಹಲೋ ಪುಟ್ಟಣ್ಣಯ್ಯನವರ?"

ಓಹೊ, ರೈತ ನಾಯಕ ಪುಟ್ಟಣ್ಣಯ್ಯನವರ ಫೋನು ನನಗೆ ಬಂದಿದ್ದರಿಂದ, ಯಾರೋ ಅಸಹಾಯಕ ರೈತನಿರಬೇಕೆಂದು ಆಪ್ತ ಮಾತಿನಲ್ಲಿ ಮಾತನಾಡಿಸಬೇಕೆನಿಸಿತು.

"ಏನೇಳಪ್ಪ, ಪುಟ್ಟಣಯ್ಯ ನಾವ್ಯಲ್ಲ ಒಂದೆ."

"ತೊಂದ್ರೆಲಿರೊ ರೈತರು ಫೋನು ಮಾಡಿ ಅಂದಿದ್ರು. ಅದ್ಕೆ ಮಾಡಿದೆ ಸಾರ್. ಅವ್ರುರ ಜೊತೆ ಮಾತಾಡಬೇಕಾಗಿತ್ತು."

"ಏನು ಮಾತಾಡಬೇಕಾಗಿತ್ತು?"

"ಏನಿಲ್ಲ, ಎರಡೆಕರೆಗೆ ಕಬ್ಬಾಕಿದ್ದೆ ಸಾರ್."

"ಸಾಲ ಮಾಡಿಕೊಂಡಿದ್ದಿಯಾ?"

"ಮಾಡ್ಬೇಕಲ್ಲ ಸಾರ್. ಬೀಜ ಗೊಬ್ಬರ ಕೂಲಿಯಾಳಿಗೆ ದುಡ್ಡೆಲ್ಲಿಂದ ತರಲಿ?"

"ಎಷ್ಟು ಸಾಲ ಮಾಡಿದ್ದಿರಿ?"

"ಎರಡು ಲಕ್ಷ ಸಾರ್."

"ಎಕರಿಗೊಂದು ಲಕ್ಷ ಬೀಳ್ತೆ"

"ಹೌದು ಸಾರ್."

"ಅಂತೂ ಎರಡೆಕರೆ ಕಬ್ಬಿನ ದುಡ್ಡಲ್ಲೆ ನಿಮ್ಮ ಯಲ್ಲ ವ್ಯವಹಾರನೂ ನೆಡಿಬೇಕು."

"ಹೌದು ಸಾರ್."

"ಉಪ್ಪು ಮೆಣಸಾದಿಯಾಗಿ, ಅಕ್ಕಿ, ಬೇಳೆ ಸಮೇತ ಕಬ್ಬಿನ ದುಡ್ಡಲ್ಲೇ ಖರೀದಿಯಾಗಬೇಕು."

"ಬೇರೆ ದಾರೀನೆ ಇಲ್ಲವಲ್ಲ ಸಾರ್."

"ಇತ್ತು ಕಣಪ್ಪ"

"ಅದ್ಯಂಗೆ ಸಾರ್?"

"ಸಾಗರದ ಕಡೆ ಹವ್ಯಕರು ಅಂತ ಇದಾರೆ. ರಾಘವೇಶ್ವರ ಸ್ವಾಮಿ ಅಂತ ಕೇಳಿದ್ದಿಯಾ?"

"ಹೌದು ಸಾರ್. ರಾಮನ ಕತೆ ಹೇಳೊ ಪ್ರೇಮಲತಾ ಅವರನ್ನ ರಾವಣನ ತರ ಹೊಡಗಂಡೋಗಿದ್ನಂತಲ್ಲಾ ಅವ್ರುನಲ್ಲವೆ?"

"ಹಂಡ್ರೆಡ್ ಪರಸೆಂಟ್ ಕರಟ್ಟು. ಪರವಾಗಿಲ್ಲ, ನಿನಿಗೂ ಇಂಥಾ ಸುದ್ದಿ ಗೊತ್ತದೆ."

"ಸ್ವಾಮಿಗಳ ಸುದ್ದಿ ಅಲವ ಸಾರ್. ಅವು ನಮಿಗೆ ತುಂಬ ಇಷ್ಟ."

"ಇರ್ಲಿ, ಆ ಸ್ವಾಮಿ ಕಡೆ ಜನ ಒಂದೆಕರೆ ಅಡಕೆ ತೋಟದಲ್ಲಿ ನುಗ್ಗೆ, ನಿಂಬೆ, ಕರಿಬೇವು, ಬಣ್ಣದ ಸೌತೆ, ನೆಲ್ಲಿ ಯಲ್ಲಾನು ಬೆಳದಿರತನೆ. ಮಾವಿನ ಮರನೂ ಇರತ್ತೆ, ಅವನ ಬದುಕಿಗೆ ಅಗತ್ಯವಾದ ಯಲ್ಲಾನು ಬೆಳಕೊಂಡು ಈ ಬದುಕನ್ನೇ ಕಲೆ ಮಾಡಿಕೊಂಡಿರತರೆ."

"ಅಂಗರೆ ವಳ್ಳೆ ಇವ್ರುರೆಯ ಸಾರ್ ಅವ್ರುರು."

"ಅದೇ ನಮ್ಮ ಶೂದ್ರ ಜನ ಕೊಡೋರತ್ರ ಅಡಕೆ ತೋಟ ಕೊಳ್ತಾ ಹೋಯ್ತವೆ. ಒಂದು ತ್ವಾಟನೂ ಚನ್ನಾಗಿರದಿಲ್ಲ, ಸಾಲ ಮಾಡಿ ತೋಟಕೊಂಡು ಸಾಲ ತೀರಸಕ್ಕಾಗದ ಒತ್ತಡದಲ್ಲಿ ಕುಡುದೂ ಕುಡ್ದೂ ಡಂ ಅಂದೊಯ್ತರೆ."

"ಈಗ ನಮ್ದು ಅಂಗೆ ಆಗ್ಯದೆ ಸಾರ್."

"ನೀನು ಒಂದೆಕರೆಲಿ ಕಬ್ಬು ಬೆಳದು ಇನ್ನೊಂದೆಕರೆಲಿ ಕಿರ ದಿನಸಿ ಬೆಳಿಬಹುದಿತ್ತು."

"ಕಿರ ದಿನಸಿ ಅಂದ್ರೆ?"

"ಅವ್ರುರೆ, ಉಳ್ಳಿ, ತೊಗರಿ, ಎಳ್ಳು, ಹೆಸರು,.ಈರುಳ್ಳಿ, ಬೆಳ್ಳುಳ್ಳಿ, ಹಾಗಲಕಾಯಿ ಹಿಂಗೆ ಸಂತಿಗೋಗಿ ನೀನು ಏನೇನು ಕೊಂಡಕಂಡ ಬತ್ತೀಯೋ ಅದನ್ಯಲ್ಲ ನಿನ್ನ ಜಮೀನಲ್ಲೇ ಬ್ಯಳಕಬಹುದಿತ್ತು."

"ಬ್ಯಳಿಬಹುದಿತ್ತು ಸಾರ್."

"ಇರೋ ಜಮೀನಿಗೆಲ್ಲಾ ಕಬ್ಬಾಕು ಅಂತ ಯಾರೇಳಿದ್ರು?"

"ಯಲ್ಲ ಹಾಕಿದರಲ್ಲ, ನಾನೂ ಹಾಕಿದೆ."

"ಅದೇ ಕಣಪ್ಪ ಇವತ್ತು ಆಗಿರೊ ಅನಾಹುತ."

"ಅಂಗಂತಿರಾ?"

"ಊ ಮತ್ತೆ, ಸರಕಾರಿ ನೌಕರ ತನ್ನ ಸಂಬಳದಲ್ಲೇ ಸಕಲಿಸ್ಟನ್ನೂ ಕೊಳ್ಳೊತರ, ಬರೀ ಕಬ್ಬು ಅಥವಾ ಬತ್ತ ಬೆಳೆದ ರೈತ ಯಲ್ಲಾನು ಆ ಬೆಳೆ ದುಡ್ಡಲ್ಲೇ ಕೊಳ್ಳದೇಕಾಗ್ಯಾದೆ ರೈತ ಸಂತಿಗೋಗಿ ತರಕಾರಿ ತತ್ತನೆ ಅಂದ್ರೆ ಅದಕಿಂತ ದುರಂತ ಇನ್ನೊಂದಿದಿಯಾ."

"ಅಂದ್ರೆ, ನಾವೆ ಬೆಳಕೋಬೇಕಾಗಿತ್ತೆ."

"ಅದ್ಕೆ ಅಲವ ನಿನಿಗೆ ಸಾಗರದ ಹವ್ಯಕನ ಉದಾಹರಣೆ ಹೇಳಿದ್ದು. ಬರೀ ಕಬ್ಬು ಬತ್ತನೆ ಈ ನಾಡನ್ನ ಸಾಕ್ತಾಯಿಲ್ಲ. ಮಂಡ್ಯ ಜಿಲ್ಲೆಯವರು ಬಳಸೊ ಕನ್ನಂಬಾಡಿ ನೀರಿನಿಂದ ಅರ್ಧ ಕರ್ನಾಟಕ ಸಾಕಬಹುದು."

"ಅದ್ಯಂಗೆ ಸಾರ್?"

"ರಾಗಿ, ಸಜ್ಜೆ ನವಣೆ, ಗೋಧಿಗೆ, ಬತ್ತಕ್ಕೆ ಬೇಕಾಗೊವಷ್ಟು ನೀರು ಬ್ಯಾಡ. ಶ್ರಮನೂ ಬೇಡ. ದುಡ್ಡು ಬೇಡ ಗೊತ್ತೆ."


"ಸ್ವಾಮಿ ಒಂದು ಮಾತೇಳ್ತಿನಿ ಕೇಳ್ತಿರಾ."

"ಹೇಳಪ್ಪ"

"ಯವಸಾಯ ಕುರ್ಚಿಮ್ಯಾಲೆ ಕುತಗಂಡು ಮಾತಾಡೊವಷ್ಟು ಸುಲಭ ಅಲ್ಲ, ನಾವು ನೋಡ್ತಾಯಿದ್ವಿ. ಎಲ್ಲಾರು ಸಲಹೆ ಕೊಡೋರೆಯ. ಲೇಖನ ಬರಿಯೋರೆಯ. ತಿಗ ಮ್ಯಾಕ್ಕೆ ಮಾಡಿಕೊಂಡು ಒಂದಿನ ಗದ್ದೆ ನಾಟಿ ಮಾಡಿ ಬನ್ನಿ ಗೊತ್ತಾಯ್ತದೆ."

"ಥೂತ್ತೇರಿ!!!" ■

ಸುಬ್ರಹ್ಮಣ್ಯನಗರ: ಚೋರ ಅಶ್ವತ್ಥಗೆ ಚಾಂಡಾಳ ಶಿವರಾಜ


ಅಶ್ವತ್ಥ ನಾರಾಯಣ

ಮಲ್ಲೇಶ್ವರಂ ಅಸೆಂಬ್ಲಿ ಕ್ಷೇತ್ರದ ಎಂಟು ವಾರ್ಡುಗಳ ಪೈಕಿ ಬಿಜೆಪಿ ಶಾಸಕ ಅಶ್ವತ್ಥನಾರಾಯಣರ ಪಾಲಿಗೆ ಅತೀ ದೊಡ್ಡ ತಲೆನೋವು ಅಂತಿದ್ದರೆ ಅದು 66ನೇ ಸುಬ್ರಹ್ಮಣ್ಯನಗರ ವಾರ್ಡು. ಬಹುತೇಕ ಬಿಜೆಪಿ ಕಾರ್ಯಕರ್ತರಿಲ್ಲಿ ಲೆಕ್ಕಕ್ಕುಂಟಾದರೂ ಆಟಕ್ಕಿಲ್ಲ. ಏಕೆಂದರೆ ಶಾಸಕ ಅಶ್ವತ್ಥ ನಾರಾಯಣರ ದರ್ಪ, ದೌಲತ್ತು, ತುಘಲಕ್ ದರ್ಬಾರ್ ಕಂಡೇ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರೆಲ್ಲ ಅಸಹ್ಯ ಪಟ್ಟುಕೊಳ್ಳುವಂತಾಗಿದೆ.

ನಿನ್ನೆಮೊನ್ನೆಯ ತನಕ ಸುಬ್ರಹ್ಮಣ್ಯನಗರ ವಾರ್ಡಿಗೆ ಬಿಜೆಪಿ ಕೌನ್ಸಿಲರ್ ಆಗಿದ್ದದ್ದು ಕೃಷ್ಣೇಗೌಡರ ಪತ್ನಿ ಶಶಿಕಲಾ. ನಾಮಕಾವಸ್ತೆಗಷ್ಟೇ ಶಶಿಕಲಾ ಕೃಷ್ಣೇಗೌಡ ಪಾಲಿಕೆ ಸದಸ್ಯರಾಗಿದ್ದು ಬಿಟ್ಟರೆ ಕಳೆದೈದೂ ವರ್ಷಗಳ ಕಾಲ ವಾರ್ಡನ್ನಾಳಿದ್ದು ಎಮ್ಮೆಲ್ಲೇ ಸಾಹೇಬರೆ. ಪ್ರತಿಯೊಂದು ಕಾಮಗಾರಿಯಲ್ಲೂ ಎಮ್ಮೆಲ್ಲೇ ಹಸ್ತಕ್ಷೇಪ, ದೊಡ್ಡ ಮೊತ್ತದ ಕಾಮಗಾರಿಗಳೆಲ್ಲವನ್ನೂ ತನ್ನ ರಕ್ತಸಂಬಂಧಿಗಳಿಗೇ ಕೊಡಬೇಕು, ಕೌನ್ಸಿಲರ್ ಏನಿದ್ದರೂ ತಾನು ಹೇಳಿದಲ್ಲಿ ಸಹಿ ಹಾಕಲು ಮಾತ್ರ ಎಂಬಂತೆ ಮೆರೆದ ಅಶ್ವತ್ಥನಾರಾಯಣರ ಆರ್ಭಟಕ್ಕೆ ಕೌನ್ಸಿಲರಮ್ಮ ಬದುಕಿದ್ದೂ ಸತ್ತಂತಿರಬೇಕಾಯಿತು.

ಮೋರಿಗಳ ಆಧುನೀಕರಣದ ಹೆಸರಲ್ಲಿ ಇಡೀ ಸುಬ್ರಹ್ಮಣ್ಯನಗರದ ಕಾಮಗಾರಿಗಳನ್ನೆಲ್ಲ ತನ್ನ ರಕ್ತಸಂಬಂಧಿಗಳಿಗೇ ವಹಿಸಿಕೊಟ್ಟು ಅವರು ತಿಂದು ಬಿಟ್ಟ ಮೂಳೆ ಚಕ್ಕಳಗಳನ್ನಷ್ಟೇ ಕೌನ್ಸಿಲರ್ ಪಾಲಿಗೊಪ್ಪಿಸಿದ ಎಮ್ಮೆಲ್ಲೇ ವಿರುದ್ಧ ಒಳಗೊಳಗೇ ಕೌನ್ಸಿಲರ್‌ಗಳು ಹಿಡಿಶಾಪ ಹಾಕುವಂತಾಯ್ತು. ಬಿಜೆಪಿ ಅವಧಿಯಲ್ಲಿ ಬಿಬಿಎಂಪಿಯಲ್ಲಿ ನಡೆದ 1538 ಕೋಟಿ ರೂಪಾಯಿಗಳ ಬೋಗಸ್ ಬಿಲ್ ಹಗರಣದ ರೂವಾರಿಯೂ ಅಶ್ವತ್ಥ ನಾರಾಯಣರೆ. ವಾರ್ಡಿನ ಬಹುತೇಕ ಆಸ್‌ಫಾಲ್ಟಿಂಗ್ ಕಾಮಗಾರಿಗಳೂ ಶಾಸಕರ ಸಹೋದರನ ಪಾಲಾಯಿತು. ಒಂದಾನೊಂದು ಕಾಲಕ್ಕೆ ಬೆಂಗಳೂರಿನ ಸ್ವಚ್ಛ ಬಡಾವಣೆಗಳಲ್ಲೊಂದು ಎಂದು ಖ್ಯಾತಿಗಳಿಸಿದ್ದ ಸುಬ್ರಹ್ಮಣ್ಯನಗರ ಎಮ್ಮೆಲ್ಲೇ ದುರಾಶೆಯ ಕಾರಣದಿಂದಾಗಿ ಕಸದ ತಿಪ್ಪೆಯಾಗಿ ಬದಲಾದ ಕೀರ್ತಿಯೂ ಬಿಜೆಪಿಗೇ ಸಲ್ಲುವಂತಾಯ್ತು.


ಈಗ ಮೀಸಲಾತಿಯ ಕಾರಣಕ್ಕೆ ಶಶಿಕಲಾ ಕೃಷ್ಣೇಗೌಡರಿಗೆ ಅವಕಾಶ ತಪ್ಪಿ ಡಿ. ಶಿವರಾಜಮೂರ್ತಿ ಬಿಜೆಪಿ ಅಭ್ಯರ್ಥಿಯಾಗಿ ಅಖಾಡಕ್ಕಿಳಿದಿದ್ದಾರೆ ನಿಜ. ಕಾಂಗ್ರೆಸ್ ಅಭ್ಯರ್ಥಿ ಜಿ. ಮಂಜುನಾಥ್ ಕಳೆದ ಇಪ್ಪತ್ತಾರು ವರ್ಷಗಳಿಂದ ಇದೇ ಬಡಾವಣೆಯಲ್ಲಿದ್ದು ನಿರಂತರ ಸಮಾಜಸೇವೆ ಮಾಡಿಕೊಂಡು ಬಂದ ಪ್ರಾಮಾಣಿಕ ವ್ಯಕ್ತಿ ಎಂಬ ಬಗ್ಗೆಯೂ ಎರಡು ಮಾತಿಲ್ಲ. ಆದರೆ ಬಹುತೇಕ ಬಿಜೆಪಿ ಕಾರ್ಯಕರ್ತರ ಪ್ರಶ್ನೆಯೆಂದರೆ ಅಷ್ಟೊಂದು ಮಂದಿ ನಿಷ್ಠಾವಂತ ಕಾರ್ಯಕರ್ತರಿದ್ದೂ ಪಕ್ಷಕ್ಕಾಗಿ ಏನೆಲ್ಲಾ ತ್ಯಾಗ ಮಾಡಿದವರಿದ್ದೂ ನಿನ್ನೆಮೊನ್ನೆಯ ತನಕ ಕಾಂಗ್ರೆಸ್ಸಿನಲ್ಲಿದ್ದ ಶಿವರಾಜಮೂರ್ತಿಗೇ ಬಿಜೆಪಿ ಟಿಕೆಟ್ ಕೊಡಿಸಿದ್ದೇಕೆ?


ಅಷ್ಟಕ್ಕೂ ಈ ಶಿವರಾಜಮೂರ್ತಿ ಇಲ್ಲಿಗೆ ಮೂರು ವರ್ಷದ ಹಿಂದೆ ಕಾಂಗ್ರೆಸ್ ಪಾಳಯದಲ್ಲಿದ್ದ ಆಸಾಮಿ. ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಕೃಷ್ಣೇಗೌಡರು ಪ್ರಚಾರಕ್ಕೆಂದು ಬಂದರೆ ಇದೇ ಶಿವರಾಜಮೂರ್ತಿ ನಡುರಸ್ತೆಯಲ್ಲಿ ಅವರನ್ನು ಹಿಡಿದು ಬಡಿದಿದ್ದ. ಶಿವರಾಜನ ಗೂಂಡಾಗಿರಿ ವಿರುದ್ಧ ಇನ್ನೇನು ಕೃಷ್ಣೇಗೌಡರು ಪೊಲೀಸ್ ಠಾಣೆ ಮೆಟ್ಟಿಲು ಹತ್ತಬೇಕೆನ್ನುವಾಗ ಮಾಜಿ ಮೇಯರ್ ಹುಚ್ಚಪ್ಪನವರು ಬಂದಿದ್ದೇ ಕೃಷ್ಣೇಗೌಡರಿಗೆ ಕೈಮುಗಿಯಬೇಕಾಯ್ತು. ಕಾಲಕ್ರಮೇಣ ಹುಚ್ಚಪ್ಪನವರಿಗೂ ಈತನ ಬಗ್ಗೆ ಅಸಹ್ಯ ಹುಟ್ಟಿದ ಫಲವೇ ಶಿವರಾಜ ಎಮ್ಮೆಲ್ಲೇ ಪಟಾಲಮ್ಮಿಗೆ ಸೇರಿಕೊಂಡು ಬೋಗಸ್ ಬಿಲ್ ಕಾಂಟ್ರಾಕ್ಟ್ ದಂಧೆಗೆ ಬಿದ್ದ.

ಒಂದು ಮೂಲದ ಪ್ರಕಾರ ಬಿಜೆಪಿ ಟಿಕೆಟ್ಟಿಗೆಂದೇ ಶಿವರಾಜ ಎಮ್ಮೆಲ್ಲೇಗೆ ಕೊಟ್ಟ ಮೊತ್ತ ಬರೋಬ್ಬರಿ ಎರಡು ಕೋಟಿ!

ದುಡ್ಡು ಕೊಟ್ಟರೆ ಸಾಕು ಎಂಥ ದಕಾಯಿತನಿಗೂ ಬಿಜೆಪಿ ಟಿಕೆಟ್ಟು ಗ್ಯಾರಂಟಿ ಎಂಬುದಕ್ಕೆ ಸದ್ಯ ಶಿವರಾಜನ ಮೇಲೆ ನೆಲಮಂಗಲ, ಮಾಗಡಿ ಮತ್ತು ಅತ್ತಿಬೆಲೆ ಪೊಲೀಸ್ ಠಾಣೆಗಳಲ್ಲಿರುವ ವಂಚನೆ ಕೇಸುಗಳೇ ಸಾಕ್ಷಿ. ಈ ಹಿಂದೆ ಮಲ್ಲೇಶ್ವರದ ಸುಬ್ರಹ್ಮಣ್ಯ ಡೆವಲಪರ್ಸ್ ಧಣಿ ಸುಬ್ರಹ್ಮಣ್ಯ ಅಯ್ಯರ್ ಬಳಿ ಆಫೀಸ್ ಬಾಯ್ ಕೆಲಸಕ್ಕಿದ್ದ ಶಿವರಾಜ ರಿಯಲ್ ಎಸ್ಟೇಟ್ ವ್ಯವಹಾರವೊಂದರಲ್ಲಿ ಸುಬ್ರಹ್ಮಣ್ಯರಿಗೆ 40 ಕೋಟಿಗೆ ನಾಮ ಇಟ್ಟ. ಮಾಡಿದ ಮೋಸಕ್ಕೆ ಮನೆ ಮಠ ಮಾರಿಕೊಂಡು ಬೀದಿಗೆ ಬಿದ್ದ ಸುಬ್ರಹ್ಮಣ್ಯಂ ಅಯ್ಯರ್ ಅದೇ ಕೊರಗಿಗೆ ಬಿದ್ದು ಸತ್ತೇ ಹೋದರು.

ಆವತ್ತಿನಿಂದ ರಿಯಲ್ ಎಸ್ಟೇಟ್ ವಂಚನೆಯನ್ನೇ ತನ್ನ ಕಾಯಕ ಮಾಡಿಕೊಂಡ ಶಿವರಾಜ್ ಒಂದೇ ಸೈಟನ್ನು ಮೂರ್ನಾಲ್ಕು ಮಂದಿಗೆ ಮಾರುವುದನ್ನೇ ದಂಧೆಯಾಗಿಸಿಕೊಂಡ. ಮತ್ತೊಬ್ಬ ಒಕ್ಕಲಿಗ ತಲೆ ಎತ್ತುವುದು ಶಾಸಕ ಅಶ್ವತ್ಥ ನಾರಾಯಣರಿಗೆ ಇಷ್ಟವಿಲ್ಲ. ಹೀಗಾಗಿ ಶಿವರಾಜನಂಥವರನ್ನು ಸಾಕುತ್ತಿದ್ದಾರೆ. ಸಾಕಿದ ಸರ್ಪ ಯಾವತ್ತಿದ್ದರೂ ಅಪಾಯವೆ. ಇಡೀ ಸುಬ್ರಹ್ಮಣ್ಯನಗರ ವಾರ್ಡಿನುದ್ದಕ್ಕೂ ಬಿಜೆಪಿ ಕಾರ್ಯಕರ್ತರು ಕಾಟಾಚಾರಕ್ಕಷ್ಟೇ ಪಕ್ಷದ ಪರ ಓಡಾಡಿಕೊಂಡಿದ್ದಾರೆಯೇ ಹೊರತು ಮನಸ್ಪೂರ್ತಿ ಓಟು ಕೇಳುತ್ತಿಲ್ಲ. ಸ್ವತಃ ಮಾಜಿ ಕೌನ್ಸಿಲರ್ ಶಶಿಕಲಾರೇ ಮನೆ ಬಿಟ್ಟು ಹೊರಬರುತ್ತಿಲ್ಲ. ತನ್ನ ಗಂಡನನ್ನೇ ನಡುರಸ್ತೆಯಲ್ಲಿ ಕತ್ತಿನಪಟ್ಟಿ ಹಿಡಿದು ಅಟ್ಟಾಡಿಸಿದವನ ಪರವಾಗಿ ಓಟು ಕೇಳಲು ಮನಸ್ಸಾದರೂ ಹೇಗೆ ಸಾಧ್ಯ?


ಡಿ. ಶಿವರಾಜಮೂರ್ತಿ


ಜಿ. ಮಂಜುನಾಥ್

ಹೀಗಾಗಿ ಬೇಕಾಬಿಟ್ಟ ದುಡ್ಡು ಸುರಿದಾದರೂ ಓಟು ಖರೀದಿಸಲೇಬೇಕಾದ ದುರ್ಗತಿ ಶಿವರಾಜನದ್ದು. ಮನೆಮನೆಗೂ ಸೀರೆ, ಜೊತೆಗೊಂದು ಬೆಳ್ಳಿ ನಾಣ್ಯ ಸಾಲದೆಂಬಂತೆ ತಲಾ ಓಟೊಂದಕ್ಕೆ ಶಿವರಾಜ್ ಒಂದೂವರೆ ಸಾವಿರ ರೂಪಾಯಿ ಕಾಸೆಣಿಸುತ್ತಿದ್ದಾನೆ. ಬೋಗಸ್ ಬಿಲ್ಲು ರಿಯಲ್ ಎಸ್ಟೇಟ್ ದುಡ್ಡು. ಚೋರ ಶಾಸಕನಿಗೊಬ್ಬ ಚಾಂಡಾಲ ಶಿಷ್ಯ ಎಂಬಂತೆ ಕಳೆದೆರಡು ಬಾರಿಯಿಂದ ಮಲ್ಲೇಶ್ವರವನ್ನಾಳುತ್ತಿರುವ ಅಶ್ವತ್ಥ ನಾರಾಯಣರಿಗೆ ಸಭ್ಯರು ಪ್ರಾಮಾಣಿಕರು, ಪಕ್ಷನಿಷ್ಠರು ತಾನೇ ಹೇಗೆ ಕಣ್ಣಿಗೆ ಬೀಳಲು ಸಾಧ್ಯ?

- ರಾ. ಸೋಮನಾಥ್

ಎಮ್ಮೆಲ್ಲೇ ಅಶ್ವತ್ಥ ನಾರಾಯಣರ ಬ್ರಿಗೇಡ್ ಭೋಜನಂ

ಇಡೀ ಸುಬ್ರಹ್ಮಣ್ಯನಗರವನ್ನೇ ನುಂಗುವಂತೆ ಆಕಾಶದೆತ್ತರ ಚಾಚಿನಿಂತ ಬ್ರಿಗೇಡ್ ಅಪಾರ್ಟ್‌ಮೆಂಟ್‌ನ ಆಳ ಅಗಲ ಕೆದಕಹೊರಟರೆ ಅದು ಮಲ್ಲೇಶ್ವರಂ ಶಾಸಕ ಅಶ್ವತ್ಥ ನಾರಾಯಣರ ಮತ್ತೊಂದು ಮುಖವಾಡ ಕಳಚಿಡುತ್ತದೆ.

ಸದ್ಯ ಸುಬ್ರಹ್ಮಣ್ಯನಗರದ ಜೀವಾಳದಂತಿರುವುದು ಕೆಂಪೇಗೌಡ ಆಟದ ಮೈದಾನ ಮತ್ತು ಸಂಗೊಳ್ಳಿ ರಾಯಣ್ಣ ಉದ್ಯಾನವನ. ಬ್ರಿಗೇಡ್ ಟೌನ್‌ಶಿಪ್‌ನ ಹಿಂಭಾಗದಲ್ಲಿರುವ ಈ ಎರಡೂ ಪಾರ್ಕುಗಳ ನಿರ್ವಹಣೆಯ ಹೊಣೆಯನ್ನೂ ಬ್ರಿಗೇಡ್ ಗ್ರೂಪ್ ಧಣಿ ಜೈಶಂಕರ್ ವಹಿಸಿಕೊಂಡಿದ್ದಾರೆ. ರಾಜಾ ಕಾಲುವೆಯನ್ನೇ ಅತಿಕ್ರಮಿಸಿ ಪಾಲಿಕೆಯ ನಿಯಮಾವಳಿಗಳನ್ನೆಲ್ಲ ಉಲ್ಲಂಘಿಸಿ ಹೇಗೆ ತಾನೇ ಬ್ರಿಗೇಡ್ ಅಪಾರ್ಟ್‌ಮೆಂಟ್ ತಲೆಎತ್ತಲು ಸಾಧ್ಯ? ಎಂಬ ಪ್ರಶ್ನೆಗೆ ಉತ್ತರವೆಂಬಂತೆ ಮೂರು ನಿಗೂಢ ಫ್ಲಾಟುಗಳ ಕತೆಯಿದೆ.



ಬ್ರಿಗೇಡ್ ಟೌನ್‌ಶಿಪ್

ಬ್ರಿಗೇಡ್ ಟೌನ್‌ಶಿಪ್‌ನ ಈ ಮೂರು ಫ್ಲಾಟುಗಳು ಎಮ್ಮೆಲ್ಲೇ ಅಶ್ವತ್ಥ ನಾರಾಯಣರಿಗೆ ಬಳುವಳಿಯಾಗಿ ದಕ್ಕಿದವುಗಳೆ. ಈ ಪೈಕಿ ಒಂದು ಫ್ಲಾಟ್ ಶಾಸಕ ಅಶ್ವತ್ಥ ನಾರಾಯಣರ ಖಾಸಾ ತಮ್ಮ ಸತೀಶನ ಹೆಸರಲ್ಲಿದೆ. ಬ್ರಿಗೇಡ್ ಟವರ್ಸ್ ಧಣಿ ಜೈಶಂಕರ್‌ನನ್ನು ಬ್ಲ್ಯಾಕ್‌ಮೇಲ್ ಮಾಡಿಯೇ ಒಂದಲ್ಲ ಮೂರು ಫ್ಲಾಟುಗಳನ್ನು ಹೊಡೆದ ಎಮ್ಮೆಲ್ಲೇ ಸಾಹೇಬರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಇಡೀ ಅಪಾರ್ಟ್‌ಮೆಂಟ್ ಮೇಜುವಾನಿಕೆಯನ್ನು ತಮ್ಮ ಸತೀಶನಿಗೊಪ್ಪಿಸಬೇಕೆಂದು ಬ್ರಿಗೇಡ್ ಧಣಿಯನ್ನು ದಬಾಯಿಸಲಾರಂಭಿಸಿದರು.

ಪಾಪ ಬ್ರಿಗೇಡ್ ಧಣಿಯಾದರೂ ಎಷ್ಟು ಅಂತ ಸಹಿಸಲು ಸಾಧ್ಯ? ಇಡೀ ಅಪಾರ್ಟ್‌ಮೆಂಟ್‌ಗೆ ತನ್ನ ಚೇಲಾ ರಾಜಣ್ಣನೇ ಪೇಪರ್, ದಿನಪತ್ರಿಕೆಗಳನ್ನು ಹಾಕುತ್ತಾನೆಂದರೆ ಬ್ರಿಗೇಡ್ ಧಣಿ ಅದನ್ನೂ ಸಹಿಸಿಕೊಂಡ. ತನ್ನ ಕಡೆಯವರಿಗೇ ಹಾಲು ಹಾಕುವ ಏಜೆನ್ಸಿಯನ್ನೂ ಕೊಡಬೇಕೆಂದು ಹಠಕ್ಕೆ ಬಿದ್ದರೆ ಅದಕ್ಕೂ ಬ್ರಿಗೇಡ್ ಧಣಿ ಸಮ್ಮತಿಸಿದ. ಆದರೆ ಕೇಬಲ್ ದಂಧೆಯಿತ್ತಲ್ಲ, ಆ ಕಾಲದಿಂದಲೂ ಬಿಜೆಪಿಗೆ ನಿಷ್ಠನಾಗಿದ್ದ ಸುನೀಲ್‌ಗೆ ಕೇಬಲ್ ಕೊಡಿಸುತ್ತೇನೆಂದು ಮಾತು ಕೊಟ್ಟಿದ್ದ. ಸುನೀಲ್ ಎಮ್ಮೆಲ್ಲೇ ಸಾಹೇಬರ ಪಕ್ಕಾ ಶಿಷ್ಯ. ಇನ್ನೇನು ತನಗೇ ಸಾಹೇಬರು ಕೇಬಲ್ ಕೊಡಿಸುತ್ತಾರೆಂದು ಕನಸು ಕಂಡ ಸುನೀಲ್‌ಗೆ ಎಂಥಾ ಆಘಾತ ಕಾದಿತ್ತೆಂದರೆ ಕೊನೇ ಗಳಿಗೆಯಲ್ಲಿ ಕೇಬಲ್ ಎಮ್ಮೆಲ್ಲೇಯ ಮತ್ತೊಬ್ಬ ತಮ್ಮ ನಾಗೇಶನ ಪಾಲಾಗಿತ್ತು!

ಹೋಗಲಿ ಎಂಟೂ ವಾರ್ಡುಗಳ ಜಿಮ್ ನಿರ್ವಹಣೆಯನ್ನಾದರೂ ತನಗೆ ಬಿಟ್ಟು ಕೊಡಿ ಎಂದು ಸುನೀಲ ಕಣ್ಣೀರಿಟ್ಟ. ಮಲ್ಲೇಶ್ವರದ ಎಂಟು ವಾರ್ಡುಗಳ ಪೈಕಿ ಪ್ರತಿ ವಾರ್ಡಿಗೊಂದಂತೆ ತಲೆಎತ್ತಿದ ಪಾಲಿಕೆ ಜಿಮ್ಮುಗಳಿಂದ ಮಂತ್ಲಿ ವಸೂಲಿಯೇ ಲಕ್ಷದ ಲೆಕ್ಕದಲ್ಲಿದೆ. ಈ ಎಲ್ಲಾ ಜಿಮ್ಮುಗಳ ಎತ್ತುವಳಿಯನ್ನು ಶಾಸಕ ಅಶ್ವತ್ಥ ನಾರಾಯ ವಹಿಸಿರುವುದು ಜಗದೀಶ್ ಎಂಬ ಆಸಾಮಿಗೆ. ಈ ಜಗದೀಶ್ ಬೇರೆ ಯಾರೂ ಅಲ್ಲ ಅಶ್ವತ್ಥನಾರಾಯಣರ ಪತ್ನಿಯ ಕಜಿನ್.


ತನ್ನ ಸಂಬಂಧಿಗಳಿಗೇ ಕಾಂಟ್ರಾಕ್ಟು, ತನಗೇ ಒಂದಲ್ಲ ಮೂರು ಬ್ರಿಗೇಡ್ ಫ್ಲಾಟು, ತನ್ನ ತಮ್ಮನಿಗೇ ಕೇಬಲ್ಲು, ತ ನೆಂಟನಿಗೇ ಪಾಲಿಕೆ ಜಿಮ್ಮುಗಳು; ಇನ್ನು ಪಕ್ಷದ ಕಾರ್ಯಕರ್ತರಿಗೆಲ್ಲಿ ಸ್ಥಾನ, ಪಕ್ಷ ನಿಷ್ಠೆಗೆಲ್ಲಿ ಸಮ್ಮಾನ?

ಸುಬ್ರಹ್ಮಣ್ಯನಗರದ ಕೆಂಪೇಗೌಡ ಆಟದ ಮೈದಾನ ಮತ್ತು ಸಂಗೊಳ್ಳಿ ರಾಯಣ್ಣ ಉದ್ಯಾನವನದ ಅಷ್ಟದಿಕ್ಕುಗಳಿಗೂ ಬ್ರಿಗೇಡ್ ಗ್ರೂಪ್ ಬಿಲ್ಡರುಗಳ ಜಾಹಿರಾತು ಬೋರ್ಡುಗಳೇ ಕಣ್ಣು ಕುಕ್ಕುತ್ತವೆ. ಪಾರ್ಕ್ ದುಸ್ಥಿತಿ ಮತ್ತು ಮೈದಾನದ ದುರವಸ್ಥೆ ಕಂಡವರೆಲ್ಲ ಬ್ರಿಗೇಡ್ ಗ್ರೂಪ್ ಧಣಿಗೆ ಶಾಪ ಹಾಕುವುದು ಸಹಜ ತಾನೆ? ಆದರೆ ಬ್ರಿಗೇಡ್ ಮೂಲಗಳು ಕೊಡುವ ಲೆಕ್ಕಕ್ಕೆ ಎಂಥವರೂ ಬೆ ಬೀಳಲೇಬೇಕು. ಇವೆರಡರ ನಿರ್ವಹಣೆಗೆಂದು ಬ್ರಿಗೇಡ್ ಗ್ರೂಪ್ ಪಾಲಿಕೆಗೆ ತೆ ಮೊತ್ತ ಬರೋಬ್ಬರಿ 4 ಕೋಟಿ ರೂಪಾಯಿಗಳು. ಈ ಮೊತ್ತದಲ್ಲಿ ಒಂದಲ್ಲ ಹತ್ತು ಸಂಗೊಳ್ಳಿ ಪಾರ್ಕುಗಳನ್ನು ನಿರ್ವಹಿಸಬಹುದು.

ಹಾಗಿದ್ದೂ ಇಂಥಾ ದುರ್ಗತಿಗೆ ಕಾರಣ ಕೆದಕಹೊರಟರೆ ಬ್ರಿಗೇಡ್ ಧಣಿಗ ನಾಲ್ಕು ಕೋಟಿಯಲ್ಲಿ ಬರೋಬ್ಬರಿ ಮೂರು ಕೋಟಿ ಎಮ್ಮೆಲ್ಲೇ ಅಶ್ವತ್ಥ ನಾರಾಯಣ ಕೈಸೇರಿದರೆ ಮಿಕ್ಕ ಒಂದು ಕೋಟಿಯಷ್ಟೇ ಪಾರ್ಕ್ ಗುತ್ತಿಗೆದಾರನ ಜೇಬಿಗೆ ಬಿದ್ದಿದೆ

ಅಂದಹಾಗೆ ಪಾರ್ಕ್ ಗುತ್ತಿಗೆ ಹಿಡಿದವನೂ ಎಮ್ಮೆಲ್ಲೇ ಸಾಹೇಬ ಬೇನಾಮಿಯೇ...!


ಸಂಗೊಳ್ಳಿ ರಾಯಣ್ಣ ಪಾರ್ಕ್


ಕೆಂಪೇಗೌಡ ಸ್ಟೇಡಿಯಂ

ಗಾಯಿತ್ರಿನಗರ : ಕಳ್ಳನ ಮಡದಿಗೆ ಬಿಜೆಪಿ ಟಿಕೆಟ್



ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರ ರೊಚ್ಚಿಗೆ ಇನ್ನೂ ಒಂದು ಕಾರಣ ಇರುತಿದ್ದರೆ ಅದು ವಾರ್ಡ್ 76ರ ಗಾಯಿತ್ರಿನಗರದ ಅಭ್ಯರ್ಥಿ ಕೆ.ಎಂ. ಧೃತಿ ಅಲಿಯಾಸ್ ಧೃತಿ ನಾಗೇಶ್.

ಕಳೆದ ಬಾರಿ ಇದೇ ವಾರ್ಡಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಗೆದ್ದು ಈತನಕ ಯಾರೂ ಮಾಡದ ಅಭಿವೃದ್ಧಿಗೆ ಕಾರಣರಾದ ಚೇತನಾಗೌಡರನ್ನು ವಂಚಿಸಿ ಈ ಧೃತಿ ನಾಗೇಶ್‌ರನ್ನು ಬಿಜೆಪಿ ಕಾರ್ಯಕರ್ತರ ಮೇಲೆ ಹೇರಿದ ಶಾಸಕ ಅಶ್ವತ್ಥ ನಾರಾಯಣರ ದರ್ಪಕ್ಕೂ ಕಾರಣವಿದೆ. ಧೃತಿ ಬೇರೆ ಯಾರೂ ಅಲ್ಲ ಎಮ್ಮೆಲ್ಲೇ ಅಶ್ವತ್ಥ ನಾರಾಯಣರ ಮತ್ತೊಬ್ಬ ಸಂಬಂಧಿ ಖದೀಮ ಕಂಟ್ರಾಕ್ಟರ್ ನಾಗೇಶನ ಧರ್ಮಪತ್ನಿ.


ನಿನ್ನೆಮೊನ್ನೆಯತನಕ ಗಾಯಿತ್ರಿನಗರದ ಕೌನ್ಸಿಲರ್ ಆಗಿದ್ದ ಚೇತನಾ ಗೌಡ ಈ ಭಾಗದ ಜನಾನುರಾಗಿ ಪ್ರಫುಲ್ಲಚಂದ್ರರ ಮಡದಿ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಶ್ವತ್ಥ ನಾರಾಯಣರನ್ನು ಗೆಲ್ಲಿಸಲು ಇನ್ನಿಲ್ಲದಂತೆ ಹೆಣಗಾಡಿದ ಪ್ರಫುಲ್ಲರ ಪತ್ನಿಗೆ ಟಿಕೆಟ್ ತಪ್ಪಿಸಲು ಯಾವುದೇ ಕಾರಣವಿರಲಿಲ್ಲ. ಖುದ್ದು ಎಮ್ಮೆಲ್ಲೆಯೇ ಬಹುಕೋಟಿ ಕಾಮಗಾರಿ ಭ್ರಷ್ಟಾಚಾರದ ಆರೋಪಿ ಆದಾಗಲೂ ಇಡೀ ಗಾಯಿತ್ರಿನಗರದ ಒಂದೇ ಒಂದು ಕಾಮಗಾರಿಯಲ್ಲೂ ಮೋಸವಾಗದ ಹಾಗೆ ನೋಡಿಕೊಂಡ ಪ್ರಫುಲ್ಲರಿಗೆ ಟಾಂಗ್ ಕೊಟ್ಟು ತನ್ನ ಸಂಬಂಧಿ ನಾಗೇಶನ ಪತ್ನಿಯನ್ನು ಕೌನ್ಸಿಲರ್ ಮಾಡಹೊರಟ ಶಾಸಕರ ದುರಾಶೆಯ ಹಿಂದಿರುವುದೂ ಬಹುಕೋಟಿ ಲೂಟಿಯ ಹುನ್ನಾರವೆ.

ಧೃತಿಯ ಗಂಡ ಎಂ. ನಾಗೇಶ್ ಹೇಳಿಕೇಳಿ ಎಮ್ಮೆಲ್ಲೇ ಅಶ್ವತ್ಥ ನಾರಾಯಣರ ಸಂಬಂಧಿ ಮತ್ತು ಬೇನಾಮೀ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಹಿಂದಿದ್ದ ಚೇತನಾಗೌಡ ಜಾತಿಯಲ್ಲಿ ಒಕ್ಕಲಿಗರೇ ಆದರೂ ತನಗೆ ಸಂಬಂಧಿಯಲ್ಲ ಮತ್ತು ತನ್ನ ಬೋಗಸ್ ಬಿಲ್ ಲೂಟಿಗೆ ಸಹಕರಿಸುವುದಿಲ್ಲ ಎಂಬುದನ್ನು ಬಿಟ್ಟರೆ ಪ್ರಫುಲ್ಲರ ಪತ್ನಿಗೆ ಟಿಕೆಟ್ ತಪ್ಪಿಸಲು ಬೇರೆ ಯಾವುದೇ ಕಾರಣಗಳಿಲ್ಲ. ಅಷ್ಟಕ್ಕೂ ಬಿಜೆಪಿ ಅಭ್ಯರ್ಥಿಯಾದ ಧೃತಿ ಪತಿ ನಾಗೇಶ್ ಯಾರೆಂದು ತಲೆಕೆಡಿಸಿಕೊಂಡರೆ once again ಬಯಲಾಗುವುದು ಅಶ್ವತ್ಥ ನಾರಾಯಣರ ಬಹುಕೋಟಿ ಕಾಮಗಾರಿ ಲೂಟಿಯೇ.

2008-10ರ ಮಧ್ಯೆ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದ 1538 ಕೋಟಿ ರೂಪಾಯಿಗಳ ನಕಲಿ ಕಾಮಗಾರಿ ಹಗರಣದಲ್ಲಿ ಸರಿಸುಮಾರು 600 ಕೋಟಿಯಷ್ಟು ಲೂಟಿಗೆ ಕಾರಣವಾದದ್ದು ಮಲ್ಲೇಶ್ವರ. ಗಾಂಧಿನಗರ ಮತ್ತು ರಾಜರಾಜೇಶ್ವರಿನಗರ ಸೇರಿದಂತೆ ನಡೆದ ಬಹುಕೋಟಿ ಹಗರಣ ಬೆಳಕಿಗೆ ಬಂದಿದ್ದು 2011ರಲ್ಲಿ. ಆಗ ಬಿಬಿಎಂಪಿ ಆಗಿನ ಆಯುಕ್ತರಾಗಿದ್ದ ಬಿ.ಎಸ್. ಪಾಟೀಲ್ 2011ರ ನವೆಂಬರ್ 4ರಂದು ಪಾಲಿಕೆಯ ಬಿಎಂಟಿಎಫ್ ಪೊಲೀಸ್ ಠಾಣೆಗೆ ನೀಡಿದ ದೂರಿನ ಪ್ರಕಾರ ಹಲವಾರು ಕಾಮಗಾರಿಗಳ ಬಿಲ್ಲುಗಳನ್ನು ನಕಲಿಯಾಗಿ ಸೃಷ್ಟಿಸಿ ಅಪಾರವಾದ ಹಣವನ್ನು ಬಿಲ್ಲುಗಳ ಮೂಲಕ ಕ್ಲೇಮ್ ಮಾಡಿ ದೋಚಲಾಗಿದೆ. ಇದೇ ದೂರನ್ನು ಹಿಡಿದು ಸಿಐಡಿ ಅಧಿಕಾರಿಗಳು ವಿಚಾರಣೆಗಿಳಿದಾಗುತ್ತಿದ್ದಂತೆ ಒಟ್ಟು 31 ಮಂದಿ ಗುತ್ತಿಗೆದಾರರು ಮತ್ತು 33 ಇಂಜಿನಿಯರ್‌ಗಳನ್ನು ಆರೋಪಿಗಳನ್ನಾಗಿಸಿ ಸಿಐಡಿ ಚಾರ್ಜ್‌ಶೀಟ್ ಸಲ್ಲಿಸುತ್ತದೆ. ಆಗ ಸಿಐಡಿ ಪೊಲೀಸರಿಂದ ಬೋಗಸ್ ಬಿಲ್ ಕಾಮಗಾರಿ ಲೂಟಿ ಆರೋಪ ಹೊತ್ತು ಜೈಲು ಪಾಲಾದ ಮೊದಲ ವ್ಯಕ್ತಿ ಗಾಂಧಿನಗರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಇದೆಯಾ ವೆಂಡನ್ ಆದರೆ ಕಳ್ಳ ಕಂಟ್ರಾಕ್ಟರ್‌ಗಳ ಪೈಕಿ ಮೊದಲಿಗನೇ ನಾಗೇಶ.

ಗಾಂಧಿನಗರದ ನಕಲಿ ಟೆಂಡರ್ ದರೋಡೆಗಳ ಪೈಕಿ ರೂ. 19,37,133 ಮೊತ್ತದ ಲೂಟಿಗೆ ಸಂಬಂಧಪಟ್ಟಂತೆ ಸಿಐಡಿ ಸಲ್ಲಿಸಿದ ಚಾರ್ಜ್‌ಶೀಟ್ ನಂ. 1545/12ರಲ್ಲಿ ಇ.ಇ. ಇದೆಯಾ ವೆಂಡನ್ ಮೊದಲ ಆರೋಪಿಯಾದರೆ ಗುತ್ತಿಗೆದಾರ ಎಂ. ನಾಗೇಶ್ ಈ ಪ್ರಕರಣದ ಏಳನೇ ಆರೋಪಿ. ಚಾರ್ಜ್‌ಶೀಟ್ ನಂಬರ್ 4/2012ರಲ್ಲಿ ರೂ. 14,22,549ರಷ್ಟು ಅಕ್ರಮದಲ್ಲಿ ಮತ್ತೆ ಇದೇ ನಾಗೇಶನನ್ನು ಏಳನೇ ಆರೋಪಿಯಾಗಿಸಿ ಸಿಐಡಿ ಚಾರ್ಜ್‌ಶೀಟ್ ಹಾಕಿದೆ. ಮೇಲಿನ ಎರಡೂ ಪ್ರಕರಣಗಳು ಗಾಂಧಿನಗರಕ್ಕೆ ಸಂಬಂಧಪಟ್ಟುವುಗಳಾದರೆ ಚಾರ್ಜ್‌ಶೀಟ್ 11/2012ರ ಪ್ರಕರಣ ಸಂಖ್ಯೆ 19161/2012ರ ರೂ. 31,20,345ರ ವಂಚನೆಯಲ್ಲಿ ಇದೇ ನಾಗೇಶ್ ನಾಲ್ಕನೇ ಆರೋಪಿ. ಇದು ಮಲ್ಲೇಶ್ವರ ಕ್ಷೇತ್ರದ ಕಳ್ಳ ಕಾಮಗಾರಿಗಳ ಪೈಕಿ ಒಂದು.


ಮಲ್ಲೇಶ್ವರಕ್ಕೆ ಸಂಬಂಧಪಟ್ಟಂತೆ ಇಂಥ ಆರು ನಕಲಿ



ಕಾಮಗಾರಿಗಳ ಹಗರಣದಲ್ಲಿ ಚಾರ್ಜ್‌ಶೀಟ್ ಸಂಖ್ಯೆ 18921/2012ರ ಮತ್ತೊಂದು ಪ್ರಕರಣದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಪ್ರಕಾಶ್‌ಕುಮಾರ್, ಎಇಇ ಬೆಟ್ಟಸ್ವಾಮಯ್ಯ ಎಇ ಜಿ.ಆರ್. ಕುಮಾರ್ ಜೊತೆ ನಾಲ್ಕನೇ ಆರೋಪಿಯಾಗಿ ಎಂ. ನಾಗೇಶನ ಹೆಸರಿದೆ. ಇಲ್ಲಿ ಲೂಟಿಯಾದ ಒಟ್ಟು ಮೊತ್ತ 5,05,554 ರೂ.ಗಳು.

ಇದಲ್ಲದೆ ಗಾಂಧಿನಗರಕ್ಕೆ ಸಂಬಂಧಪಟ್ಟಂತೆ ಸಿಸಿ ನಂ. 24963/12 ರಲ್ಲಿ ಒಟ್ಟು ಹತ್ತು ಲಕ್ಷ ಲೂಟಿಗೆ ಸಂಬಂಧಪಟ್ಟಂತೆ ಗುತ್ತಿಗೆದಾರ ನಾಗೇಶ್ ನಾಲ್ಕನೇ ಆರೋಪಿಯಾದರೆ ಮೊದಲನೇ ಆರೋಪಿ ಇಇ ಇದೆಯಾ ವೆಂಡನ್. ಸಿಐಡಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸ್ ಮಹಾನಿರ್ದೇಶಕರು ದಿನಾಂಕ 10.03.2014ರಂದು ದಾಖಲಿಸಿದ ದೋಷಾರೋಪಣ ಪಟ್ಟಿಯಲ್ಲಿ ಒಟ್ಟು ಏಳು ಪ್ರಕರಣಗಳ ಪ್ರಮುಖ ಆರೋಪಿಯಾಗಿ ಜೈಲಿಗೂ ಹೋಗಿಬಂದ ಕಂಟ್ರಾಕ್ಟರ್ ನಾಗೇಶ್ ಸದ್ಯ ಜಾಮೀನಿನ ಮೇಲಿರುವ ಆರ್ಥಿಕ ಅಪರಾಧಿ ಕೂಡ. ಪಾಲಿಕೆ ಆಯುಕ್ತರು ಈತನನ್ನು ಕಪ್ಪು ಪಟ್ಟಿಗೆ ಸೇರಿಸಿರುವುದರಿಂದ ಇನ್ನು ಮುಂದೆ ಬೋಗಸ್ ಬಿಲ್ ಕಂಟ್ರಾಕ್ಟರಿಕೆ ಸಾಧ್ಯವಿಲ್ಲ. ಹೀಗಾಗಿ ತನ್ನ ಪತ್ನಿಯನ್ನು ಕೌನ್ಸಿಲರ್‌ಗಿರಿಗೇರಿಸಿ ಹಿಂಬಾಗಿಲಿನಿಂದ ಪಾಲಿಕೆ ಲೂಟಿ ಮಾಡುವ ಉದ್ದೇಶವಲ್ಲದೆ ಈತನಿಗೆ ಪತ್ನಿಯನ್ನು ರಾಜಕೀಯಕ್ಕಿಳಿಸಲು ಬೇರೆ ಯಾವುದೇ ಕಾರಣಗಳಿಲ್ಲ.

ಮಲ್ಲೇಶ್ವರಂ, ಗಾಂಧಿನಗರ ಮಾತ್ರವಲ್ಲದೆ ನಾಗೇಶ ಪಕ್ಕದ ದಾಸರಹಳ್ಳಿ, ರಾಜರಾಜೇಶ್ವರಿನಗರ ಇತ್ಯಾದಿ ಅಸೆಂಬ್ಲಿ ಕ್ಷೇತ್ರಗಳಲ್ಲೂ ಬೋಗಸ್ ಬಿಲ್ ಕೈಚಳಕ ತೋರಿದ್ದಾನೆ. ಅಷ್ಟಕ್ಕೂ ನಾಗೇಶನ ಲಕ್ಕು ಕುದುರಿದ್ದು ಅಶ್ವತ್ಥ ನಾರಾಯಣ ಮಲ್ಲೇಶ್ವರದಿಂದ ಗೆದ್ದ ನಂತರವೆ. 2006ರಲ್ಲಿ ಕೇವಲ 7 ಲಕ್ಷ ರೂಪಾಯಿ ಮೊತ್ತದ ಬಿಲ್ಲಿಗಾಗಿ ರಾಜಾಜಿನಗರದ ಶಾಸಕ ಸುರೇಶ್‌ಕುಮಾರ್ ಮನೆ ಮುಂದೆ ನಿಂತು ಗೋಳಾಡುತ್ತಿದ್ದ ನಾಗೇಶನಿಗೆ ಕೇವಲ 10 ಲಕ್ಷದ ಕಾಮಗಾರಿ ಮಾಡುವಷ್ಟೂ ತಾಕತ್ತಿರಲಿಲ್ಲ. ಅಶ್ವತ್ಥ ನಾರಾಯಣರ ಸಮೀಪದ ಸಂಬಂಧಿಯಾದ ಈತನಿಗೆ 2008-11ರ ಮಧ್ಯೆ





ಏಕಾಏಕಿ ಇನ್ನೂರು ಕೋಟಿಯಷ್ಟು ಕಾಮಗಾರಿ ನಡೆಸುವ ತಾಕತ್ತು ಬಂದಿದ್ದೇ ಚಿದಂಬರ ರಹಸ್ಯವಾಗಿತ್ತು.

ಎಮ್ಮೆಲ್ಲೇ ಅಶ್ವತ್ಥನಾರಾಯಣ ತನ್ನ ಬೋಗಸ್ ಬಿಲ್ ಲೂಟಿಗೆ ಅನುಕೂಲವಾಗಲೆಂದೇ ಪ್ರಕಾಶ್‌ಕುಮಾರ್‌ರನ್ನು ಮಲ್ಲೇಶ್ವರಕ್ಕೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಹಾಕಿಸಿಕೊಂಡರು. ಎಇಇಯಾಗಿ ಮುನಿರಾಜು, ಎಇ ಹುದ್ದೆಗೆ ಹರೀಶ್, ಮತ್ತೊಬ್ಬ ಎಇಇ ಆಗಿ ಬೆಟ್ಟಸ್ವಾಮಯ್ಯ ಇನ್ನೊಬ್ಬ ಎಇ ಜಿ.ಆರ್.ಕುಮಾರ್ ಹೀಗೆ ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಮಲ್ಲೇಶ್ವರಂ ವ್ಯಾಪ್ತಿಗೆ ಬಂದವರೆಲ್ಲರೂ ಬೋಗಸ್ ಬಿಲ್ ಪ್ರವೀಣರೇ.


ಮೋರಿ ಸಿಲ್ಟು ಮತ್ತು ಪ್ಯಾಚಪ್ ವರ್ಕ್‌ಗಳ ಹೆಸರಲ್ಲಿ ಕಾಡುಮಲ್ಲೇಶ್ವರ, ಅರಮನೆ ನಗರ, ಮತ್ತಿಕೆರೆ, ಮಲ್ಲೇಶ್ವರ ಮುಂತಾದ ವಾರ್ಡುಗಳಲ್ಲಿ ಬೇಕಾಬಿಟ್ಟಿ ಬಿಲ್ಲುಗಳನ್ನು ಹಾಕಲಾಯ್ತು. ತೆಗೆದ ಮೋರಿಯ ಸಿಲ್ಟನ್ನು ಎಲ್ಲಿ ಸುರಿದಿದ್ದಾರೆಂದು ಯಾರೂ ಕೇಳುವುದಿಲ್ಲ. ಯಾವ ಮೋರಿಗೆ ಹೊಸಕಲ್ಲು ಹಾಕಿದ್ದಾರೆಂದು ಅಗೆದು ನೋಡುವುದೂ ಸಾಧ್ಯವಿಲ್ಲ. ಮಲ್ಲೇಶ್ವರದ ವ್ಯಾಪ್ತಿಯಲ್ಲೇ ನಾಗೇಶ್ 300 ಕೋಟಿ ಮೊತ್ತದ ಕಾಮಗಾರಿ ನಡೆಸುತ್ತಾರೆಂದರೆ ಅದು ಶಾಸಕ ಅಶ್ವತ್ಥ ನಾರಾಯಣರ ಬೇನಾಮೀ ಕಾಂಟ್ರಾಕ್ಟರಿಕೆ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ.

ಇಲ್ಲಿನ ಧರ್ಮಸೂಕ್ಷ್ಮವೆಂದರೆ ಈ ರೀತಿ ಹಿಂದುಮುಂದಿಲ್ಲದ ಪುಡಿ ಪುಕ್ಕಾ ಕಾಂಟ್ರಾಕ್ಟರ್‌ಗಳನ್ನೇ ಬೇನಾಮಿಯಾಗಿಸಿಕೊಂಡು ಪಾಲಿಕೆ ಲೂಟಿಗಿಳಿದ ಅಶ್ವತ್ಥ ನಾರಾಯಣರಿಂದ ನಾಗೇಶನಂಥವರಿಗೆ ಆಗುವ ಲಾಭವೂ ಅಷ್ಟಕ್ಕಷ್ಟೆ. ಉದಾ: ಒಂದು ಕೋಟಿಯ ಕಾಮಗಾರಿಗೆಂದು ಪಾಲಿಕೆ 8 ಲಕ್ಷದಷ್ಟು ಗ್ಯಾರಂಟಿ ಮೊತ್ತವನ್ನು ಹಿಡಿದುಕೊಂಡಿದ್ದು ಗುತ್ತಿಗೆ ಪರತ್ತು ಮುಗಿದ ತಕ್ಷಣ ಅದನ್ನು ಗುತ್ತಿಗೆದಾರನಿಗೇ ವಾಪಸ್ಸು ಮಾಡುತ್ತದೆ. ಇಲ್ಲಿ ಬೇನಾಮಿಗೆ ಈ ಗ್ಯಾರಂಟಿ ಮೊತ್ತವೊಂದೇ ಗಟ್ಟಿ. ಅಂದರೆ 1 ಕೋಟಿಗೆ 8 ಪರ್ಸೆಂಟ್‌ನಷ್ಟು ಮಾತ್ರ ಬೇನಾಮಿಯ ಪಾಲಾಗುತ್ತದೆ. ನಾಗೇಶ್ ಶಾಸಕ ಅಶ್ವತ್ಥ ನಾರಾಯಣರ ಪಾಲಿಗೆ ಲೂಟಿ ದಂಧೆಯ ಬೇನಾಮಿಯೇ ಹೊರತು ವಾರ್ಡಿನ ಅಭಿವೃದ್ಧಿಯಾಗಲಿ, ಸಮಾಜ ಸೇವೆಯಾಗಲಿ ಆತನ ಉದ್ದೇಶವಲ್ಲ.

ಸದ್ಯ ಗಾಯಿತ್ರಿನಗರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಚಂದ್ರಕಲಾ ಗಿರೀಶ್ ಲಕ್ಕಣ್ಣ ರಾಜಾಜಿನಗರದ ಮಾಜಿ ಶಾಸಕ ಕೆ. ಲಕ್ಕಣ್ಣನವರ ಸೊಸೆ. ಲಕ್ಕಣ್ಣನವರ ಪುತ್ರ ಗಿರೀಶ್ ಸ್ಥಳೀಕ ಮತ್ತು ತಂದೆ ಕಾಲದಿಂದಲೂ ಕ್ಷೇತ್ರದ ಜನಸೇವೆಯಲ್ಲಿ ತೊಡಗಿಸಿಕೊಂಡಿರುವಾತ. ನಾಗೇಶನ ಪತ್ನಿ ಧೃತಿ ತನ್ನ ಜನ್ಮಾಪಿ ಗಾಯಿತ್ರಿ ನಗರದತ್ತ ತಲೆಹಾಕಿದವಳಲ್ಲ. ಲೂಟಿಯ ಹೊರತಾಗಿ ಬಿಜೆಪಿ ಅಭ್ಯರ್ಥಿಗಿಲ್ಲಿ ಬೇರೆ ಯಾವುದೇ ಉದ್ದೇಶವಿದ್ದಂತಿಲ್ಲ.

■ ರಾ. ಸೋಮನಾಥ್

ಮಲ್ಲೇಶ್ವರಂ : ಬಿಜೆಪಿ ವಿರುದ್ಧ ತಿರುಗಿಬಿದ್ದ ಬ್ರಾಹ್ಮಣರು



ಮಲ್ಲೇಶ್ವರದ ಬಿಜೆಪಿಯ ಓಟ್‌ಬ್ಯಾಂಕ್‌ನ ಫಿಕ್ಸೆಡ್ ಡಿಪಾಜಿಟ್ಟಿನಂತಿದ್ದ ಬ್ರಾಹ್ಮಣರಿಗೆ ಶಾಸಕ ಅಶ್ವತ್ಥನಾರಾಯಣರ ವಿರುದ್ಧ ಅಸಹ್ಯ ಹುಟ್ಟಿರುವುದರ ಸೂಚನೆಗಳು ದಿನೇದಿನೇ ನಿಚ್ಚಳಗೊಳ್ಳುತ್ತಿದೆ. ಬಿಬಿಎಂಪಿಯ 1538 ಕೋಟಿ ರೂಪಾಯಿಗಳ ನಕಲಿ ಕಾಮಗಾರಿ ಹಗರಣ, ಈ ಹಗರಣದ ಮುಖ್ಯ ಆರೋಪಿಗಳಲ್ಲೊಬ್ಬನಾದ ಕಂಟ್ರಾಕ್ಟರ್ ನಾಗೇಶನ ಪತ್ನಿಗೆ ಗಾಯತ್ರಿನಗರದ ಬಿಜೆಪಿ ಟಿಕೆಟ್ಟು, ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದ ಪುಪ್ಪುಲ್ಲಚಂದ್ರರ ಪತ್ನಿ ಮಾಜಿ ಕೌನ್ಸಿಲರ್ ಚೇತನಾಗೌಡರಿಗಾದ ಅನ್ಯಾಯ, ಟಿಕೆಟ್ ಹಂಚಿಕೆಯಲ್ಲಿ ಬ್ರಾಹ್ಮಣರ ನಿರ್ಲಕ್ಷ್ಯ, ತನ್ನ ರಕ್ತ ಸಂಬಂಧಿಗಳು ನೆಂಟರಿಷ್ಟರಿಗೆಲ್ಲ ಪಾರ್ಟಿ ಟಿಕೆಟ್ಟು, ಬಹುತೇಕ ಕಾಂಟ್ರಾಕ್ಟು, ಕಾಮಗಾರಿ ಗುತ್ತಿಗೆಗಳೆಲ್ಲ ತನ್ನ ಸಂಬಂಧಿಕರಿಗೆ, ಆದಾಯ ಬರುವ ಸಣ್ಣಪುಟ್ಟ ಅವಕಾಶಗಳೂ ತನ್ನ ನೆಂಟರಿಷ್ಟರಿಗೇ... ಹೀಗೆ ಅಶ್ವತ್ಥನಾರಾಯಣರನ್ನು ಬೆಂಬಲಿಸುವುದು ಎಂದರೆ ಬಿಜೆಪಿಗಿಂತಲೂ ಅವರ ಕುಟುಂಬದ ಉದ್ಧಾರಕ್ಕಷ್ಟೇ ಎಂಬ ನಿರ್ಧಾರಕ್ಕೆ ಮಲ್ಲೇಶ್ವರದ ಬ್ರಾಹ್ಮಣರು ಬಂದುಬಿಟ್ಟಿದ್ದಾರೆ.

ಅರಮನೆನಗರ, ಮತ್ತಿಕೆರೆ, ಮಲ್ಲೇಶ್ವರ, ರಾಜಮಹಲ್, ಕಾಡುಮಲ್ಲೇಶ್ವರ, ಸುಬ್ರಹ್ಮಣ್ಯನಗರ ಮತ್ತು ಗಾಯಿತ್ರಿನಗರ ಸೇರಿದಂತೆ ಮಲ್ಲೇಶ್ವರದ ಒಟ್ಟು ಏಳು ವಾರ್ಡುಗಳ ಪೈಕಿ ಕಳೆದ ಬಾರಿ ಬಿಜೆಪಿ ಆರರಲ್ಲಿ ಗೆದ್ದು ಒಂದನ್ನಷ್ಟೇ ಕಾಂಗ್ರೆಸ್ಸಿಗೆ ಬಿಟ್ಟುಕೊಟ್ಟಿತ್ತು. ವಿಪರ್ಯಾಸವೆಂದರೆ ಕಳೆದ ಬಾರಿ ಮಲ್ಲೇಶ್ವರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದು ಕೌನ್ಸಿಲರ್ ಆಗಿದ್ದ ಜಯಪಾಲ್ ರಾತ್ರೋರಾತ್ರಿ ಬಿಜೆಪಿಗೆ ಹಾರಿ ಸದ್ಯ ಬಿಜೆಪಿ ಅಭ್ಯರ್ಥಿಯಾಗಿ ಮತ್ತದೇ ಮಲ್ಲೇಶ್ವರಕ್ಕೆ ವಕ್ಕರಿಸುವುದಕ್ಕೂ ಕಾರಣವಿದೆ.

ಮಲ್ಲೇಶ್ವರದ ಕಾಂಗ್ರೆಸ್ ಕೌನ್ಸಿಲರ್ ಆಗಿದ್ದ ಜಯಪಾಲ್ ಮತ್ತು ಕಾಡುಮಲ್ಲೇಶ್ವರದ ಬಿಜೆಪಿ ಕೌನ್ಸಿಲರ್ ಮಂಜುನಾಥ್ ರಾಜು ಇಬ್ಬರೂ ರಿಯಲ್ ಎಸ್ಟೇಟ್ ಪಾರ್ಟ್‌ನರ್‌ಗಳಂತೆ!

ಕಳೆದ ಐದು ವರ್ಷಗಳ ಮಲ್ಲೇಶ್ವರ ವಾರ್ಡಿನಲ್ಲಿ ಬೋಗಸ್ ಬಿಲ್ ಲೂಟಿಯಲ್ಲೇ ಕೋಟಿಕೋಟಿ ಕಮಾಯಿಸಿದ ಜಯಪಾಲ್ ತನ್ನನ್ನು ಗೆಲ್ಲಿಸಿಕೊಟ್ಟ ಕಾಂಗ್ರೆಸ್‌ಗೆ ಕೈಕೊಟ್ಟು ಬಿಜೆಪಿಗೆ ಹಾರಿದ್ದು ದೋಚಿದ ಋಣ ತೀರಿಸುವುದಕ್ಕಲ್ಲದೆ ಮತ್ತೇನಕ್ಕೂ ಅಲ್ಲ ಎಂದು ಜನ ಕ್ಯಾಕರಿಸುತ್ತಿದ್ದಾರೆ.



ಶಾಸಕ ಅಶ್ವತ್ಥನಾರಾಯಣರ ಸ್ವಜನಪಕ್ಷಪಾತ, ಜಾತಿಬುದ್ಧಿ ಕುಟುಂಬ ವ್ಯಾಮೋಹಗಳ ಬಗ್ಗೆ ಮಲ್ಲೇಶ್ವರದುದ್ದಕ್ಕೂ ತರಹೇವಾರಿ ನಿದರ್ಶನಗಳು, ಕತೆಗಳು ಚಾಲ್ತಿಗೆ ಬಂದಿವೆ. ಈ ಪೈಕಿ ಗಾಯಿತ್ರಿ ನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಿರುವ ಕೆ.ಎಂ. ಧೃತಿ ಬೇರೆ ಯಾರೂ ಅಲ್ಲ ಅಶ್ವತ್ಥನಾರಾಯಣರ ಧರ್ಮಪತ್ನಿಯ ತಂಗಿ. ಈಕೆಯ ಗಂಡ ನಾಗೇಶ್ ಬಹುಕೋಟಿ ಲೂಟಿ ಕಾಮಗಾರಿ ಕರ್ಮಕಾಂಡದ ಪ್ರಮುಖ ಆರೋಪಿಯಾಗಿ ಏಳು ಕೇಸುಗಳಲ್ಲಿ ಸಿಕ್ಕಿಬಿದ್ದು ಜೈಲಿಗೂ ಹೋಗಿಬಂದ. ಇಂಥವನ ಪತ್ನಿಯನ್ನು ನಿಷ್ಠಾವಂತ ಕೌನ್ಸಿಲರ್‌ರನ್ನು ವಂಚಿಸಿ ಕಣಕ್ಕಿಳಿಸಿದರೆ ಯಾವ ಪಕ್ಷ ನಿಷ್ಠ ಬಿಜೆಪಿ ಕಾರ್ಯಕರ್ತನಾದರೂ ಯಾವ ಮುಖ ಹೊತ್ತು ಓಟು ಕೇಳಲು ಸಾಧ್ಯ?


ಕಳೆದ ಬಾರಿ ಮತ್ತಿಕೆರೆಗೆ ಬಿಜೆಪಿ ಕೌನ್ಸಿಲರ್ ಆಗಿದ್ದ ಮುನಿಸ್ವಾಮಿಗೌಡನೂ ಶಾಸಕ ಅಶ್ವತ್ಥನಾರಾಯಣರ ಸಂಬಂಧಿಯೇ. ವರಸೆಯಲ್ಲಿ ತಮ್ಮನಾಗಬೇಕು. ಈ ಬಾರಿ ಮುನಿಸ್ವಾಮಿಗೌಡನಿಗೆ ಬಿಜೆಪಿ ಟಿಕೆಟ್ ತಪ್ಪಿಸಲು ಯಾವುದೇ ಕಾರಣವಿಲ್ಲ, ಹಾಗಿದ್ದೂ ಮುನಿಸ್ವಾಮಿಗೌಡನನ್ನು ಬಾಯಿ ಮುಚ್ಚಿಸಿ ಜಯಪ್ರಕಾಶ್‌ಗೆ ಬಿಜೆಪಿ ಟಿಕೆಟ್ ಕೊಟ್ಟಿದ್ದಾರೆ ಶಾಸಕ ಅಶ್ವತ್ಥನಾರಾಯಣ. ಟಿಕೆಟ್ ವಂಚಿತ ಮುನಿಸ್ವಾಮಿ ಗೌಡರೇ ತಮ್ಮ ಪರಮಾಪ್ತರ ಬಳಿ ಹೇಳಿಕೊಂಡಿದ್ದೇನೆಂದರೆ, ಟಿಕೆಟ್ಟಿಗೆಂದು ಎಮ್ಮೆಲ್ಲೇ ಮೂರು ಕೋಟಿ ಕೇಳಿದ್ರು, ನಾನು ಕೊಟ್ಟಿಲ್ಲ, ಅದಕ್ಕೇ ನನಗೆ ಟಿಕೆಟ್ಟಿಲ್ಲ!


ಅಂದಹಾಗೆ ಮತ್ತಿಕೆರೆಗೆ ಸದ್ಯ ಬಿಜೆಪಿ ಅಭ್ಯರ್ಥಿಯಾದ ಜಯಪ್ರಕಾಶ್ ಕೂಡ ಶಾಸಕರ ರಕ್ತಸಂಬಂಧಿಯೇ. ಸುಬ್ರಹ್ಮಣ್ಯನಗರ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾಗಿರುವ ಶಿವರಾಜ ಮೂರ್ತಿಯೂ ಶಾಸಕ ಅಶ್ವತ್ಥನಾರಾಯಣರ ಬೇನಾಮಿಯೇ. ಕಾಡುಮಲ್ಲೇಶ್ವರದ ಬಿಜೆಪಿ ಅಭ್ಯರ್ಥಿ ಮಂಜುನಾಥ ರಾಜು ಶಾಸಕರ ರಿಯಲ್ ಎಸ್ಟೇಟ್ ದಂಧೆಯ ಪಾಲುದಾರನೆಂಬುದೂ ರಹಸ್ಯವಾಗುಳಿದಿಲ್ಲ. ಮಲ್ಲೇಶ್ವರದ ಬಿಜೆಪಿ ಅಭ್ಯರ್ಥಿ ಜಯಪಾಲ್ ಹೇಗಿದ್ದರೂ ಮಂಜುನಾಥರಾಜು ರಿಯಲ್ ಎಸ್ಟೇಟ್ ದಂಧೆಗೆ ಪಾಲುದಾರರಾಗಿರುವುದರಿಂದ ಪರೋಕ್ಷವಾಗಿ ಅವರೂ ಎಮ್ಮೆಲ್ಲೆಯ ಕಳ್ಳ ವ್ಯವಹಾರಗಳ ಬೇನಾಮಿಯಾದಂತಾಯ್ತು.

ಮಿಕ್ಕಂತೆ ಅರಮನೆ ನಗರದ ಬಿಜೆಪಿ ಅಭ್ಯರ್ಥಿ ಸುಮಂಗಳಾ ಕೇಶವ್ ಮತ್ತು ರಾಜಮಹಲ್ ವಾರ್ಡಿನ ಬಿಜೆಪಿ ಅಭ್ಯರ್ಥಿ ಹೇಮಲತಾ ಸೇಠ್ ಆರೆಸ್ಸೆಸ್ ಕಾರ್ಯಕರ್ತರ ಪತ್ನಿಯರೆಂಬುದನ್ನು ಬಿಟ್ಟರೆ ಮಲ್ಲೇಶ್ವರದ ಐದೂ ವಾರ್ಡುಗಳಿಂದ ಬಿಜೆಪಿಗೆ ನಿಂತವರೆಲ್ಲರೂ ಪ್ರತ್ಯಕ್ಷವೋ ಪರೋಕ್ಷವೋ ಎಮ್ಮೆಲ್ಲೇ ಅಶ್ವತ್ಥನಾರಾಯಣರ ಸಂಬಂಧಿಯೋ, ಬೇನಾಮಿಯೋ ಆಗಿರುವವರೇ.

ಮಲ್ಲೇಶ್ವರದ ಒಟ್ಟು ಮತದಾರರ ಪೈಕಿ ಮೂವತ್ತು ಸಾವಿರದಷ್ಟಿರುವ ಬ್ರಾಹ್ಮಣ ಮತದಾರರು ಆ ಕಾಲದಿಂದಲೂ ಬಿಜೆಪಿಯನ್ನು ಬೆಂಬಲಿಸಿಕೊಂಡೇ ಬಂದಿದ್ದಾರೆ. ಶುರುವಿನಲ್ಲಿ ಅಶ್ವತ್ಥನಾರಾಯಣ ಕೂಡ ಬ್ರಾಹ್ಮಣನೆಂದೇ ಲೆಕ್ಕಹಾಕಿದ ಮಂದಿಗೆ ಪ್ರತಿಯೊಂದಕ್ಕೂ ತನ್ನ ಜಾತಿಯ, ತನ್ನದೇ ಸಂಬಂಧಿಗಳನ್ನು ನೇಮಿಸುತ್ತಾ ಹೊರಟ ಎಮ್ಮೆಲ್ಲೇ ಜಾತಿಯಲ್ಲಿ ಒಕ್ಕಲಿಗನೆಂದೂ ಮಹಾನ್ ಜಾತಿವಾದಿಯೆಂದೂ ಗೊತ್ತಾಗಿ ಬಿಟ್ಟಿದೆ. ಕಳೆದ ಬಾರಿ ಒಂದೇ ಒಂದು ಕಾಂಗ್ರೆಸ್ ಗೆದ್ದು ಮಿಕ್ಕೆಲ್ಲವೂ ಬಿಜೆಪಿ ಪಾಲಾಗಲು ಕಾರಣವಿತ್ತು. ರಾಜಾಮಹಲ್ ವಾರ್ಡಿನಿಂದ ಕುಮಾರ್ ಪತ್ನಿ ಗೆದ್ದಿದ್ದು ಕೇವಲ 170 ಮತಗಳ ಅಂತರದಿಂದ. ಕಾಂಗ್ರೆಸ್ಸಿಗೆ ನಿಂತಿದ್ದ ಉಮಾಬಾಯಿ ವಿರುದ್ಧ ಪಕ್ಷೇತರಳಾಗಿ ನಿಂತಿದ್ದ ವೀಣಾ ವಿಶ್ವನಾಥ್‌ಗೆ ಎರಡೂವರೆ ಸಾವಿರದಷ್ಟು ಮತ ಬಂದಿತ್ತು. ಹುಷಾರಾದ ಬಿ.ಕೆ. ಶಿವರಾಮ್ ಈ ಬಾರಿ ವೀಣಾ ವಿಶ್ವನಾಥ್‌ರನ್ನೇ ಕಾಂಗ್ರೆಸ್‌ನಿಂದ ಕಣಕ್ಕಿಳಿಸಿದ್ದಾರೆ. 170 ಮತಗಳಿಂದ ಸೋತಿದ್ದ ಉಮಾಬಾಯಿಗೆ ಬಿದ್ದ ಕಾಂಗ್ರೆಸ್ ಮತಗಳು ಮತ್ತು ಪಕ್ಷೇತರ ಅಭ್ಯರ್ಥಿ ವೀಣಾ ವಿಶ್ವನಾಥ್‌ಗೆ ಬಿದ್ದ ಎರಡೂವರೆ ಸಾವಿರ ಮತಗಳು ಆ ಬಾರಿ ಒಟ್ಟುಗೂಡುವುದರಿಂದ ಏನೇ ತಿಪ್ಪರಲಾಗ ಹಾಕಿದರೂ ಬಿಜೆಪಿ ಗೆಲ್ಲುವುದು ಕಷ್ಟ.




ಅರಮನೆನಗರ ಕಳೆದ ಬಾರಿ ಬಿಜೆಪಿಯ ಡಾ. ಶಿವಪ್ರಕಾಶ್ ಪಾಲಾಗಲು ಮುಖ್ಯ ಕಾರಣ ಮಾಜಿ ಬಿಜೆಪಿ ನಾಯಕ ರಾಜೇಂದ್ರ ನಿಂತು ಎರಡು ಸಾವಿರಕ್ಕೂ ಅಧಿಕ ಮತಗಿಟ್ಟಿಸಿದ್ದರು. ಈಗ ಹಳೇ ಕಾಂಗ್ರೆಸ್ ಕಾರ್ಯಕರ್ತ ಗೋಪಿಯ ಪತ್ನಿ ಲತಾ ಕಾಂಗ್ರೆಸ್ಸಿನಿಂದ ನಿಂತಿದ್ದಾರೆ. ರಾಜೇಂದ್ರರಿಗೆ ಬಿದ್ದ ಅಷ್ಟೂ ಓಟು ಮತ್ತು ಕಾಂಗ್ರೆಸ್ಸಿಗೆ ಬಿದ್ದಿದ್ದ ಓಟುಗಳೆಲ್ಲ ಸೇರಿತಂದರೆ ಯಾವುದೇ ಕಾರಣಕ್ಕೂ ಇಲ್ಲಿ ಬಿಜೆಪಿ ಗೆಲ್ಲುವುದು ಸಾಧ್ಯವಿಲ್ಲ.

ಮಲ್ಲೇಶ್ವರಕ್ಕೆ ಜಯಪಾಲ್ ವಿರುದ್ಧ ಕಾಂಗ್ರೆಸ್ ಅಭ... ಡಾ. ರಾಜೇಶ್ ನಾಯ್ಡು ಈ ಭಾಗದ ಜನಪ್ರಿಯ ಮುಖ... ಮನ್ನಾರ್ ನಾಯ್ಡುರ ಮಗ. ಕೈಬಾಯಿ ಕೆಡಿಸಿಕೊ... ಜಯಪಾಲ್ ವಿರುದ್ಧ ರಾಜೇಶ್ ನಾಯ್ಡು ಬಿ... ಮಲ್ಲೇಶ್ವರದ ಜನಕ್ಕೆ ಬೇರೆ ಆಯ್ಕೆಯೇ ಇಲ್ಲ. ಮ... ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ ಹರೀಶ್ ಬೋಪಣ್ಣ... 20 ವರ್ಷಗಳಿಂದ ಸ್ಥಳೀಕರಾಗಿ ಜನಸೇವೆಗೆ ನಿಂತ... ಮಾಜಿ ಶಾಸಕ ಸೀತಾರಾಂಗೆ ಪರಮಾಪ್ತ. ಹರಿ... ಬೋಪಣ್ಣರನ್ನು ಗೆಲ್ಲಿಸಿಕೊಂಡೇ ಬರುತ್ತೇನೆಂದು ಎಮ... ಸೀತಾರಾಮ್ ಹಠಕ್ಕೆ ಬಿದ್ದಿರುವುದು ಬಿಜೆಪಿ ಸೋ... ಬಹುತೇಕ ಖಾತರಿಪಡಿಸಿದೆ. ಕಳೆದ ಬಾರಿ ಕೌನ್ಸಿಲರ... ಮುನಿಸ್ವಾಮಿ ಗೌಡನ ಲೂಟಿಯನ್ನೂ ಜನ ಮರೆತಿ...

ಹೀಗಾಗಿ ಈ ಬಾರಿ ಹೆಚ್ಚೆಂದರೆ ಬಿಜೆಪಿ ಬ... ಅಥವಾ ಎರಡು ವಾರ್ಡ್‌ಗಳಲ್ಲಷ್ಟೇ ಗೆಲ್ಲಲು ಸಾ... ಹೊರತು ಆರಕ್ಕೆ ಆರನ್ನೂ ಉಳಿಸಿಕೊಳ್ಳುವುದು ... ಎಲ್ಲಕ್ಕೂ ಮಿಗಿಲಾಗಿ ಬಿ.ಕೆ. ಶಿವರಾಂರಂಥ ನಿಷ್ಠಾ... ಪೊಲೀಸ್ ಅಧಿಕಾರಿಯನ್ನು ಸೋಲಿಸಿ ಸ್ವಜನ ಪಕ್ಷ... ಅಶ್ವತ್ಥನಾರಾಯಣರನ್ನು ಗೆಲ್ಲಿಸಿದ ಪಶ್ಚಾತ್ತಾಪವ... ಮಲ್ಲೇಶ್ವರದ ಮತದಾರರನ್ನು ಕಾಡುತ್ತಿದೆ. ಹಿಂದ... ಬಿಜೆಪಿಗೆ ಅಧಿಕಾರವಿತ್ತು, ದೋಚಿದ ದುಡ್ಡಿನ ಬಲ... ಈಗ ಹಾಗಿಲ್ಲ, ಕಾಲ ಬದಲಾಗಿದೆ.

■ ರಾ. ಸೋಮನಾ...

ಹೆಮ್ಮಿಗೆಪುರದ ರೈತ ಹೋರಾಟಗಾರ ಪಂಚಲಿಂಗಯ್ಯ




ಪಂಚಲಿಂಗಯ್ಯ ಎಂಬ ರೈತನಾಯಕ ನೈಸ್ ಕಂಪನಿ ಮತ್ತು ಖೇಣಿ ವಿರುದ್ಧ ಹೋರಾಡಿದ ತಪ್ಪಿಗೆ ಅನುಭವಿಸಿದ ಹಿಂಸೆ, ಕಷ್ಟನಷ್ಟಗಳು ಒಂದೆರಡಲ್ಲ. ನೈಸ್ ಕಂಪನಿ ವಿರುದ್ಧದ ಹೋರಾಟದಲ್ಲಿ ಪಂಚಲಿಂಗಯ್ಯನನ್ನು ಬೆಂಬಲಿಸಿದನೆಂಬ ಒಂದೇ ಕಾರಣಕ್ಕೆ ಹೆಮ್ಮಿಗೆಪುರದ ಸಿದ್ಲಿಂಗ ಪ್ರಭು ಎಂಬ ಯುವಕನನ್ನು ಬಿಜೆಪಿ ಗೂಂಡಾಗಳು ಕತ್ತರಿಸಿ ಕೊಂದರು. ಖೇಣಿ ಬಂಟ ರುದ್ರೇಶನನ್ನಾಗಲಿ, ಖೇಣಿಯನ್ನಾಗಲಿ ಇವತ್ತಿಗೂ ಕೊಲೆ ಆರೋಪಿಗಳನ್ನಾಗಿಸುವಲ್ಲಿ ಪಂಚಲಿಂಗಯ್ಯ ಹೆಣಗಾಡುತ್ತಲೇ ಇದ್ದಾರೆ.

ಒಂದೆಡೆ ದೈತ್ಯ ನೈಸ್ ಕಂಪನಿ ಮತ್ತೊಂದೆಡೆ ಬಿಜೆಪಿ ಗೂಂಡಾಪಡೆಯ ವಿರುದ್ಧ ಹೋರಾಡುತ್ತಲೇ ಹೈರಾಣಾದ ಪಂಚಲಿಂಗಯ್ಯ ಸದ್ಯ ಹೆಮ್ಮಿಗೆಪುರ ವಾರ್ಡಿಗೆ ಜೆಡಿಎಸ್ ಅಭ್ಯರ್ಥಿ. ಬಿಜೆಪಿಯಿಂದ ರಾಮಚಂದ್ರ ಮತ್ತು ಕಾಂಗ್ರೆಸ್‌ನ ಆರ್ಯ ಶ್ರೀನಿವಾಸ್ ಮಧ್ಯೆ ಅನಿವಾರ್ಯ ಆಯ್ಕೆಯಾಗಿ ಪಂಚಲಿಂಗಯ್ಯ ಹೊರಹೊಮ್ಮುವುದಕ್ಕೂ ಕಾರಣವಿದೆ. ಅದು ಅವರ ಹೋರಾಟದ ಹುಟ್ಟುಗುಣ ಮತ್ತು ಛಲ ಬಿಡದ ಪರಿಶ್ರಮ.

ಹೆಮ್ಮಿಗೆಪುರ, ಸೋಂಪುರ, ತಗಚಕುಪ್ಪೆ, ಭೀಮನಕುಪ್ಪೆ, ಬನ್ನಿಕುಪ್ಪೆ ಮುಂತಾದ ಕೆಂಗೇರಿ ಹೋಬಳಿಯ ನೈಸ್‌ಬಾಧಿತ ಗ್ರಾಮಗಳ ಬಡರೈತರ ಭೂಮಿಗೆ ನೈಸ್ ಖೇಣಿ ಮತ್ತಾತನ ಚೇಲಾ ರುದ್ರೇಶ ಕೈಹಾಕದೇ ಹೋಗಿದ್ದರೆ ಪಂಚಲಿಂಗಯ್ಯ ಬೀದಿಗಿಳಿಯುವ ಅನಿವಾರ್ಯತೆಯಿರುತ್ತಿರಲಿಲ್ಲ. ನೈಸ್ ರಸ್ತೆಗುಂಟ ಎಪ್ಪತ್ತು ದಿನಗಳ ಕಾಲ ರೈತರನ್ನು ಸಂಘಟಿಸಿ ಪಂಚಲಿಂಗಯ್ಯ ನಡೆಸಿದ ಹೋರಾಟಕ್ಕೆ ಯಡ್ಡಿ ಸರ್ಕಾರವೇ ನಡುಗಬೇಕಾಯಿತು. ಮಾಜಿ ಪ್ರಧಾನಿ ದೇವೇಗೌಡರೇ ರೈತರ ಜೊತೆ ಕೂತು ರಸ್ತೆ ಧರಣಿ ನಡೆಸಿದರೂ ಜಗ್ಗದ ಯಡ್ಡಿ ಸರ್ಕಾರದ ವಿರುದ್ಧ ಪಂಚಲಿಂಗಯ್ಯ ಪುರಭವನದೆದುರು ಏಳು ದಿನಗಳ ಕಾಲ ಆಮರಣಾಂತ ಉಪವಾಸ ಕೂತರು.

ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ, ರೈತ ನಾಯಕ ಕೋಡಿಹಳ್ಳಿ, ದಲಿತ ನಾಯಕ ಇಂದೂಧರ ಹೊನ್ನಾಪುರರಂಥ ಹೋರಾಟಗಾರರೇ ಪಂಚಲಿಂಗಯ್ಯರ ಆಮರಣ ಸತ್ಯಾಗ್ರಹಕ್ಕೆ ಬೆಂಬಲಿಸಿದ ಮೇಲೆ ಮಂತ್ರಿ ಸೋಮಣ್ಣನನ್ನು ಸಂಧಾನಕ್ಕೆ ಕಳಿಸಿದ ಮುಖ್ಯಮಂತ್ರಿ ಯಡ್ಡಿ ಕೊಟ್ಟ ಮಾತನ್ನು ಉಳಿಸಿಕೊಳ್ಳದೆ ವಂಚಿಸಿದ್ದೂ ಆಯಿತು. ಹಾಗಂತ ಪಂಚಲಿಂಗಯ್ಯ ತನ್ನ ಹೋರಾಟ ನಿಲ್ಲಿಸಲಿಲ್ಲ, ರೈತ ಹೋರಾಟದ ಮೂಲಕವೇ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಎಪಿಎಂಸಿಗೆ ನಿರ್ದೇಶಕರಾದರು. ಬೆಂಗಳೂರು ಡೈರಿಗೂ ಗೆದ್ದು ಡೈರೆಕ್ಟರಾದರು. ಚುನಾವಣೆಗೂ ಮುನ್ನ ಎಪಿಎಂಸಿ ಮಾಡುತ್ತೇವೆಂದು ಮಾತು ಕೊಟ್ಟು ಶಾಸಕ ಸೋಮಶೇಖರ್ ನಿರ್ಲಕ್ಷಿಸಿದ್ದಾರೆಂದು ಹಠಕ್ಕೆ ಬಿದ್ದ ಪಂಚಲಿಂಗಯ್ಯ ಅನಿವಾರ್ಯವಾಗಿ ಮತ್ತೆ ಜೆಡಿಎಸ್ ಅಪ್ಪಿಕೊಳ್ಳಬೇಕಾಯ್ತು.



ಸದ್ಯ ಹೆಮ್ಮಿಗೆಪುರದಲ್ಲಿ ಬಿಜೆಪಿ ಹರಿಸುತ್ತಿರುವ ಹಣ ಹೆಂಡದ ಹೊಳೆಯೆದುರು ಪಂಚಲಿಂಗಯ್ಯ ಪಣಕ್ಕಿಟ್ಟಿರುವುದು ತನ್ನ ಹೋರಾಟದ ಛಲ ಮತ್ತು ಜನಸೇವೆಯ ಪ್ರಾಮಾಣಿಕೆಯಷ್ಟನ್ನೇ. ಈ ಹಿಂದೆ ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯ್ತಿಗೆ ಪಂಚಲಿಂಗಯ್ಯ ಪತ್ನಿ ನರಸಮ್ಮ ಅಧ್ಯಕ್ಷರಾಗಿ ಹೆಮ್ಮಿಗೆಪುರದ ನೂರೈವತ್ತು ನಿರ್ಗತಿಕರಿಗೆ ಹಕ್ಕುಪತ್ರ ಕೊಟ್ಟು ಉಪಕರಿಸಿದ್ದನ್ನು ಜನ ಇವತ್ತಿಗೂ ಸ್ಮರಿಸುತ್ತಾರೆ. ಒಂದಲ್ಲ ಎರಡು ದೇವಸ್ಥಾನಗಳನ್ನು ತಾನೇ ನಿಂತು ಕಟ್ಟಿಸಿದ ಪಂಚಲಿಂಗಯ್ಯ ಹೆಮ್ಮಿಗೆಪುರಕ್ಕೆಂದೇ ಸರ್ಕಾರಿ ಶಾಲೆ ಕಟ್ಟಿಸಿಕೊಟ್ಟರು. ಹೆಮ್ಮಿಗೆಪುರದ ಪಂ... ಕಟ್ಟಡ ಅಂಗನವಾಡಿಯ ಅ... ಮನೆಯನ್ನೂ ತಮ್ಮ ದುಡಿಮೆ... ಕಟ್ಟಿಸಿಕೊಟ್ಟರು.



ಕೇವಲ ಹೆಮ್ಮಿಗೆಪುರಕ್ಕೆ... ಸೀಮಿತಗೊಳ್ಳದೆ ಪಂಚಲಿಂಗಯ್ಯ ... ಹಳ್ಳಿಗೆ ಸರ್ಕಾರಿ ಶಾಲೆ, ಸಿಮೆಂಟ್... ಕುಡಿಯುವ ನೀರು, ಚರಂಡಿ ವ್ಯವಸ್ಥೆ ... ಗೊಲ್ಲಹಳ್ಳಿಗೆ ಹಾಲಿನ ಡೈರಿ, ಸರ್ಕಾರಿ ಶಾಲೆ, ಸ... ರಸ್ತೆ ಕುವೆಂಪು ನಗರ ಮತ್ತು ಶಿವಕುಮಾರ ಸ್ವಾಮೀ... ಬಡಾವಣೆಗಳ ಸರ್ಕಾರಿ ಶಾಲೆಗಳಿಗೆ ಪೀಠೋಪ... ಕಾರಬೆಲೆಗೆ ಸೀಮೆಂಟ್ ರಸ್ತೆ ಸ್ಯಾನಿಟರಿ ವ್ಯವಸ್ಥೆ ಕೋಣ... ಗಾಣಕಲ್ಲು, ಸೋಮನಹಳ್ಳಿ, ಗೋಣಿಪುರ, ಚಿನ್ನ... ತಗಚಕುಪ್ಪೆ ಭೀಮನಕುಪ್ಪೆ, ತಾವರೆಕೆರೆ, ದೇವಮಾಚ... ತಿಪ್ಪಗೊಂಡನಹಳ್ಳಿ, ಮಾದಾಪಟ್ಟಣ, ಚೋಳನಾಯಕ... ಮುಂತಾದ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ... ಬೆಂಚುಗಳನ್ನು ಕಲ್ಪಿಸಿದ್ದೂ ಅಲ್ಲದೆ ಶಾಲಾ ಕಟ್ಟಡ... ಕಟ್ಟಿಸಿಕೊಟ್ಟ ಪಂಚಲಿಂಗಯ್ಯ ಕೇವಲ ಚುನಾವಣೆಯ... ಗುರಿಯಾಗಿಸಿಕೊಂಡ ಜನನಾಯಕನಲ್ಲ ಎಂ... ಯಾವತ್ತಿಗೋ ಜನಕೃರ್ತವಾಗಿದೆ.

ಪಂಚಲಿಂಗಯ್ಯ ಹೋರಾಟದೆದುರು ಎದುರಾ... ಠೇವಣಿ ಸಿಕ್ಕರೆ ಅದೇ ಪುಣ್ಯದಂತಾಗಿದೆ.

■ ರಾ. ಸೋಮನಾ...

ಬಿಜೆಪಿಗೆ ಕಾದಿದೆ ತಕ್ಕ ಶಾಸ್ತಿ


ಇನ್ನೇನು ಪಾಲಿಕೆ ಚುನಾವಣೆ ಸನ್ನಿಹಿತವಾಗುತ್ತಿದೆ. ಕಳೆದ ಬಾರಿ ರಾಜ್ಯದ ಅಧಿಕಾರ ಹಿಡಿದಿದ್ದ ಬಿಜೆಪಿ ತನ್ನ ಅಧಿಕಾರ ಬಲ, ಪೊಲೀಸ್ ಪಡೆ, ದೋಚಿದ ದುಡ್ಡನ್ನೇ ಬಳಸಿ ಪಾಲಿಕೆಯನ್ನಾಕ್ರಮಿಸಿತ್ತು. ಕಳೆದ ಎಂಟು ವರ್ಷಗಳ ಬಿಜೆಪಿ ದುರಾಡಳಿತದ ಫಲವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಿಪ್ಪೆಗುಂಡಿಯ ಕುಖ್ಯಾತಿಗೂ ಈಡಾದ ಬೆಂಗಳೂರಿನ ದುರ್ಗತಿಗೆ ತಕ್ಕಂತೆ ಪಾಲಿಕೆ ಹಗರಣಗಳ ಕೊಂಪೆಯಾಯಿತು. ನಡೆದ ಅಷ್ಟೂ ಹಗರಣಗಳ ಒಟ್ಟು ಮೊತ್ತವೇ 19 ಸಾವಿರ ಕೋಟಿ ರೂಪಾಯಿಗಳು. ಈಗ ಬಿಜೆಪಿ ಚುನಾವಣೆಯಲ್ಲಿ ಖರ್ಚು ಮಾಡುತ್ತಿರುವುದು ಇದೇ ಪಾಪದ ದುಡ್ಡನ್ನು. ಕಳೆದ ಬಾರಿ ನೂರು ಮಂದಿ ಕೌನ್ಸಿಲರ್‌ಗಳನ್ನು ಗೆಲ್ಲಿಸಿಕೊಂಡಿದ್ದ ಬಿಜೆಪಿಗೆ ಈ ಬಾರಿ ಐವತ್ತು ಸ್ಥಾನ ಗಿಟ್ಟುವುದೂ ಕಷ್ಟ. ಜೆಡಿಎಸ್ ಇಪ್ಪತ್ತರ ಆಸುಪಾಸು ಗಿರಕಿ ಸುತ್ತುತ್ತಿದೆ. ನಾಳೆ ಬಿಜೆಪಿಯೇನಾದರೂ ಪಾಲಿಕೆ ಹಿಡಿಯಿತೆಂದರೆ ಬೆಂಗಳೂರಿನ ಅಭಿವೃದ್ಧಿಗೆ ದುಡ್ಡು ಕೊಡಬೇಕಾದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ತಾನೇ ಎಂಬ ಕಾಮನ್‌ಸೆನ್ಸ್ ಮತದಾರರಲ್ಲಿ ಮನೆ ಮಾಡಿದೆ. ಹೀಗಾಗಿ ಕಾಂಗ್ರೆಸ್ ಈ ಬಾರಿ ನೂರರ ಗಡಿದಾಟಿ ಪಾಲಿಕೆಯನ್ನು ಹಿಡಿಯುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿದೆ.

ಬಿಬಿಎಂಪಿ ಕಣದಲ್ಲಿ ಕೆಲ ಅನಿವಾರ್ಯ ಮುಖಗಳು ಊರಕಾಯಲು ಉಳಿಯಲೇ ಬೇಕಾದವರು

ಕಳೆದ ಎಂಟು ವರ್ಷಗಳಿಂದ ಬಿಬಿಎಂಪಿಗೆ ವಕ್ಕರಿಸಿದ್ದ ಬಿಜೆಪಿ ಬೆಂಗಳೂರಿಗೆ ಮಾಡಿದ ಅನಾಹುತಗಳನ್ನು ಜನ ನೋಡಿದ್ದಾಯ್ತು, ಅನುಭವಿಸಿದ್ದೂ ಸಾಕು. ಸ್ವತಃ ಬಿಜೆಪಿಯ ಲಜ್ಜೆಗೆಟ್ಟ ಕೌನ್ಸಿಲರ್‌ಗಳೇ ನಾಚುವಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಊರಿನ ಮಾನ ಕಳೆದವರು, ರಿಯಲ್ ಎಸ್ಟೇಟ್ ಖದೀಮರು, ಖದೀಮ ಕಂಟ್ರಾಕ್ಟುದಾರರು, ರೌಡಿಗಳು ಮತ್ತೆ ಖಾದಿ ತೊಟ್ಟು ಪಾಲಿಕೆಯ ಅಂಗಳದಲ್ಲಿ ನಿಂತಿದ್ದಾರೆ. ಪತ್ರಿಕೆ ಕಳೆದೈದು ವರ್ಷಗಳಿಂದಲೂ ಪಾಲಿಕೆಯ ಹಗರಣಗಳನ್ನು ಕುರಿತಂತೆ ಬರೆದದ್ದನ್ನೇ ಕಲೆ ಹಾಕಿದರೆ ದೊಡ್ಡದೊಂದು ಪುಸ್ತಕವಾಗುವಷ್ಟಿದೆ.

ಬೆಂಗಳೂರಿನ ಜನಕ್ಕಿದು ಊರನ್ನು ಉಳಿಸಲು ಮತ್ತೊಂದು ಅವಕಾಶ. ನಾಡಿನ ರಾಜಧಾನಿಯ ಭವಿಷ್ಯ ಎಂಥವರ ಕೈಸೇರಬೇಕೆಂಬುದನ್ನು ನಿರ್ಧರಿಸಬೇಕಾದ ಈ ಘಳಿಗೆಯಲ್ಲಿ ಕಣದಲ್ಲಿರುವ ಕೆಲವರಾದರೂ ಸಜ್ಜನರನ್ನು ಗೆಲ್ಲಿಸಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಪತ್ರಿಕೆ ಕೆಲ ಆಯ್ದ ಮುಖಗಳನ್ನು ಈ ಮೂಲಕ ಪರಿಚಯಿಸುತ್ತಿದೆ.

ಎಂ. ಉದಯಶಂಕರ್-ಸಿದ್ದಾಪುರ



ಮಾವಳ್ಳಿ ಉದಯ ಶಂಕರ್ ಈ ಬಾರಿ ಗೆದ್ದರೆ ನಿರಂತರವಾಗಿ ಐದನೇ ಬಾರಿ ಗೆದ್ದಂತಾಗುತ್ತದೆ. ಅಂಥಾ ಬಿಜೆಪಿ ಅಲೆಯಿದ್ದಾಗಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿದ್ದಾಪುರ ವಾರ್ಡಿನಿಂದ ಭಾರೀ ಅಂತರದಿಂದ ಗೆದ್ದ ಉದಯಶಂಕರ್ ತೀರಾ ಪ್ರಾಮಾಣಿಕರಲ್ಲದೇ ಹೋದರೂ ಲೂಟಿಕೋರರಲ್ಲ. 2011ರಲ್ಲಿ ರಬ್ಬರ್‌ಸ್ಟ್ಯಾಂಪ್ ಶಾರದಮ್ಮನನ್ನು ಮೇಯರ್ ಗಾದಿಗೇರಿಸಿ ತೆರೆಮರೆಯಲ್ಲಿ ಬಿಜೆಪಿ ನಾಯಕರಾದ ಆರ್. ಅಶೋಕ್, ಮುನಿರಾಜು ಮೊದಲಾದವರು ನಡೆಸುತ್ತಿದ್ದ ಪಾಲಿಕೆ ಲೂಟಿಯನ್ನು ವಿರೋಧಿ ಕಾಂಗ್ರೆಸ್ ನಾಯಕನಾಗಿ ಬಯಲಿಗೆಳೆದವರು ಉದಯಶಂಕರ್. ಓಎಫ್‌ಸಿ ಕೇಬಲ್ ಹಗರಣ, ಸಾವಿರ ಕೋಟಿಯ ಜಾಹಿರಾತು ಹೋರ್ಡಿಂಗ್‌ಗಳ ಕರ್ಮಕಾಂಡ, ಸಾವಿರ ಕೋಟಿ ನುಂಗಿ ಹಾಕಿದ ರಾಜಕಾಲುವೆಗಳ ಒತ್ತುವರಿ ತೆರವು ಹಗರಣ- ಹೀಗೆ ಪಾಲಿಕೆಯ ವಿರೋಧಿ ನಾಯಕರಾಗಿ ಉದಯಶಂಕರ್ ಇವುಗಳನ್ನೆಲ್ಲ ಬಯಲಿಗೆಳೆಯದೇ ಹೋಗಿದ್ದರೆ ಹೊರಜಗತ್ತಿಗದು ಗೊತ್ತೇ ಆಗುತ್ತಿರಲಿಲ್ಲ.

ಉದಯಶಂಕರ್ ಬಯಲಿಗೆಳೆದ ಈ ಹಗರಣಗಳನ್ನೇ ಮುಂದೆ ಕಾರಿಯಾ ಸಮಿತಿ ತನ್ನ ವರದಿಯಲ್ಲಿ ಪ್ರಸ್ತಾಪಿಸಿತು. ಪಾಲಿಕೆ ಮಟ್ಟಿಗೆ ಈ ಬಾರಿ ಕಾಂಗ್ರೆಸ್ ಬಹುಮತ ಪಡೆಯಿತೆಂದರೆ ಮೇಯರ್ ಆಗುವ ಎಲ್ಲಾ ಸಾಮರ್ಥ್ಯವುಳ್ಳ ಉದಯಶಂಕರ್ ಬೆಂಗಳೂರಿನ ಹಿತದೃಷ್ಟಿಯಿಂದಾದರೂ ಗೆಲ್ಲಬೇಕಿದೆ.

ಕುರುಬರಹಳ್ಳಿ ನಾಗರಾಜ್-ನಂದಿನಿ ಲೇಔಟ್



ಈ ಪಾಲಿಕೆಯ ಇತಿಹಾಸದಲ್ಲಿ ಹಿಂದೆಂದೂ ಕಾಣದ ಹಗಲುಕೊಟ್ಟ ಲೂಟಿ ಎಂದೇ ಖ್ಯಾತ 1538 ಕೋಟಿ ರೂಪಾಯಿಗಳ ಹಗರಣವನ್ನು ಬಿಚ್ಚಿ ಹಾಕಲೆಂದೇ ಪಾಲಿಕೆ ಕಡತಗಳಿಗೆ ಬೆಂಕಿ ಹಚ್ಚಲಾಯಿತು. ಬೆಂಕಿ ಪ್ರಾಮಾಣಿಕ ತನಿಖಾದವರನ್ನೂ ಬಿಜೆಪಿ ಸರ್ಕಾರದಿಂದ ಪತ್ತೆ ಹಚ್ಚಲಾಗಲಿಲ್ಲ, ಅಂದರೆ ಬೆಂಕಿಯಿಟ್ಟವರ್ಯಾರೆಂಬುದು ಆ ಲೂಟಿಗೆ ನಿಂತಿದ್ದ ಬಿಜೆಪಿ ಧಣಿಗಳಿಗೇ ಗೊತ್ತು. ಇಲ್ಲದೇ ಹೋಗಿದ್ದರೆ ಬಿಜೆಪಿಯ ... ಮತ್ತು ರಾಜರಾಜೇಶ್ವರಿನಗರದ ಶಾಸಕರಿಬ್ಬರೂ ... ಜೈಲು ಪಾಲಾಗಬೇಕಿತ್ತು. ಮೂವರು ಶಾಸಕರ ಪಾಲಿಕೆ ಲೂಟಿಯನ್ನು ಬಯಲಿಗೆಳೆದವರು ಆಗ ವಿರೋಧಿ ಕಾಂಗ್ರೆಸ್ ನಾಯಕರಾಗಿದ್ದ ಎಂ. ನಾಗರಾಜ್. ಕುರುಬರಹಳ್ಳಿ ನಾಗರಾಜ್ ಎಂದೇ ಬೆಂಗಳೂರಿಗರ ಪ್ರೀತಿ ಗಳಿಸಿದ ನಾಗರಾಜ್ ಈಗ ನಂದಿನಿ ಲೇಔಟಿನ ಕಾಂಗ್ರೆಸ್ ಅಭ್ಯರ್ಥಿ.

ಒಮ್ಮೆ ಪತ್ನಿ ರುದ್ರಮ್ಮರನ್ನು ಗೆಲ್ಲಿಸಿದ ನಂದಿನಿ ಬಡಾವಣೆಯ ಜನ ಈ ಹಿಂದೆ ಎರಡು ಬಾರಿ ನಾಗರಾಜ್‌ರನ್ನು ಗೆಲ್ಲಿಸಿದ್ದಾರೆ. ಈ ಬಾರಿ ಗೆದ್ದರೆ ನಾಗರಾಜ್ ನಾಲ್ಕನೇ ಬಾರಿ ಗೆದ್ದಂತಾಗುತ್ತದೆ. 2010ರಲ್ಲಿ ಎಸ್.ಕೆ. ನಟರಾಜ್ ಮೇಯರಾಗಿದ್ದ ಸಂದರ್ಭದಲ್ಲಿ ರಾತ್ರೋರಾತ್ರಿ ಕಳ್ಳಬಿಲ್ಲು ಸೃಷ್ಟಿಸಿ ಸಾವಿರ ಕೋಟಿಯ ಲೂಟಿಗೆ ಕೈಯಿಟ್ಟ ಆರ್. ಅಶೋಕ್ ಪಟಾಲಮ್ಮಿನ ಷಡ್ಯಂತ್ರವನ್ನು ಬಯಲಿಗೆಳೆದದ್ದು, ಮಲ್ಲೇಶ್ವರದಲ್ಲಿ ಮಂತ್ರಿಮಾಲ್ ರಸ್ತೆ ಕಬಳಿಕೆ ವಿರುದ್ಧ ಹೋರಾಡಿದ್ದು, ಐತಿಹಾಸಿಕ ಪಾಲಿಕೆ ಆಸ್ತಿಗಳನ್ನೆಲ್ಲ ಸಾಲಕ್ಕೆ ಅಡವಿಕ್ಕಲು ಯತ್ನಿಸಿದ ಬಿಜೆಪಿ ದುರುಳರ ವಿರುದ್ಧ ಸೆಣಸಾಡಿದ್ದು ನಾಗರಾಜ್ ಬೆಂಗಳೂರು ಕಾಳಜಿಗೆ ಕೆಲ ಉದಾಹರಣೆಗಳಷ್ಟೆ. ನಂದಿನಿ ಬಡಾವಣೆಯ ಪ್ರಜ್ಞಾವಂತರೆಲ್ಲ ನಾಗರಾಜ್ ಬೆಂಬಲಕ್ಕೆ ನಿಲ್ಲಬೇಕಿದೆ. ಕನಿಷ್ಠ ಊರನ್ನು ಉಳಿಸಲಿಕ್ಕಾದರೂ...!

ಜಿ. ಪದ್ಮಾವತಿ-ಪ್ರಕಾಶ್‌ನಗರ



ಜಾತಿ ಮತ್ತು ಆಸ್ತಿ ಬಲವಿದ್ದಿದ್ದರೆ ಪದ್ಮಾವತಿ ಬೆಂಗಳೂರಿಗೆ ಮೇಯರ್ ಆಗಿ ಯಾವುದೋ ಕಾಲವಾಗಿರುತ್ತಿತ್ತು. ಮೊದಲ ನೋಟಕ್ಕೆ ಯಾರಿಗಾದರೂ ಅಕ್ಕನೋ ತಾಯಿಯೋ ಎನ್ನಿಸಬಹುದಾದ ವ್ಯಕ್ತಿತ್ವ ಪದ್ಮಾವತಿಯವರದ್ದು. ಊರಿಗೊಬ್ಬಳೇ ಪದ್ಮಾವತಿ ಎಂಬುದು ಕುಹಕವಿರಬಹುದು. ಆದರೆ ಬೆಂಗಳೂರಿಗೊಬ್ಬರೇ ಪದ್ಮಾವತಿಯೆಂಬುದು ಅಕ್ಷರಶಃ ಸತ್ಯ. ಈ ಹಿಂದೆ ಜನತಾದಳ ಸರ್ಕಾರವಿದ್ದಾಗ ಎರಡು ಬಾರಿ ರಾಮಮಂದಿರದಿಂದ ಮತ್ತು 2001ರಲ್ಲಿ ಪ್ರಕಾಶ್‌ನಗರ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದ ಪದ್ಮಾವತಿ ಕಳೆದ ಪಾಲಿಕೆ ಚುನಾವಣೆಯಲ್ಲಿ ಸೋತಿದ್ದು ಕೇವಲ 300 ಮತಗಳ ಅಂತರದಿಂದ.

ರಾಜಾಜಿನಗರಕ್ಕೆ ಮಂಜುಳಾ ನಾಯ್ಡು ವಲಸೆಯಾಗದೇ ಹೋಗಿದ್ದರೆ ಈ ಹೊತ್ತಿಗೆ ಎಮ್ಮೆಲ್ಲೆಯಾಗಿರುತ್ತಿದ್ದ ಪದ್ಮಾವತಿ 1989 ರಲ್ಲೇ ಬೆಂಗಳೂರಿಗೆ ಮೇಯರ್ ಆಗಬೇಕಿತ್ತು. ಎಲ್ಲಾ ಅರ್ಹತೆ, ಸಾಮರ್ಥ್ಯವಿದ್ದೂ ರಾಜಾಜಿನಗರದ ಪದ್ಮಾವತಿ ಬದಲಿಗೆ ದೇವೇಗೌಡರು ಮೇಯರ್ ಗಾದಿ ಗೇರಿಸಿದ್ದು ಪದ್ಮಾವತಿ ಗಂಗಾಧರಗೌಡರನ್ನು. ಬೆಂಗಳೂರಿನ ಅಭಿವೃದ್ಧಿಗಾಗಿ ತನ್ನದೇ ಕನಸಿಟ್ಟುಕೊಂಡು ನಾಯಕರ ಸ್ವಾರ್ಥಕ್ಕೆ ಬಲಿಯಾಗುತ್ತಲೇ ಕಣ್ಣೊರೆಸಿಕೊಳ್ಳುವ ಪದ್ಮಾವತಿಗೆ ಪ್ರಕಾಶ್‌ನಗರದ ಜನತೆ ಈ ಬಾರಿಯೂ ಕೈಕೊಟ್ಟರೆಂದರೆ ಅದು ಬೆಂಗಳೂರಿಗೆ ಬಗೆದ ದ್ರೋಹವೇ ಸರಿ.


ಹೇಮಲತಾ ಹರೀಶ್-ಶ್ರೀರಾಮಮಂದಿರ



ಮಂತ್ರಿ ಡಿ.ಕೆ. ಶಿವಕುಮಾರ್ ಬಹಿರಂಗ ವೇದಿಕೆಯೊಂದರಲ್ಲಿ ಆರ್.ವಿ. ಹರೀಶ್ ತನ್ನ ರಾಜಕೀಯ ಗುರುಗಳೆಂಬುದನ್ನು ಬಿಚ್ಚಿಟ್ಟಿದ್ದು ತೀರ ಇತ್ತೀಚೆಗೆ. ಆರ್.ವಿ. ಹರೀಶ್ ಬೆಂಗಳೂರು ಕಂಡ ಮೊಟ್ಟ ಮೊದಲ ಮತ್ತು ಕಟ್ಟಕಡೆಯ ವಿದ್ಯಾರ್ಥಿ ನಾಯಕ. ಎಂಥಾ ಪರಿಸ್ಥಿತಿಯಲ್ಲೂ ತಾಳ್ಮೆ ಕಳೆದುಕೊಳ್ಳದ ಸಹನೆ, ಯಾವ ಆಮಿಷಕ್ಕೂ ಬಲಿಯಾಗದ ನಿರ್ಲಿಪ್ತತೆ ಮತ್ತು ಎಂಥಾ ದ್ರೋಹಿಗಳನ್ನೂ ಕ್ಷಮಿಸುವ ದೊಡ್ಡಸ್ತಿಕೆಯೇ ಹರೀಶ್ ಪಾಲಿಗೆ ಮುಳುವಾಯಿತು. ಒಂದಲ್ಲ ಮೂರು ಬಾರಿ ರಾಜಾಜಿನಗರದಿಂದ ಸೋತರು. ಕಳೆದ ಬಾರಿ ಮಹಾಲಕ್ಷ್ಮಿ ಲೇಔಟ್‌ನಿಂದ ಕೂದಲೆಳೆಯಲ್ಲಿ ಸೋತರು. ಹರೀಶ್‌ಗೆ ಶಿಷ್ಯರಾಗಿದ್ದವರೆಲ್ಲ ಶಾಸಕರಾದರು ಮಂತ್ರಿಗಳಾದರು. ಆದರೆ ಹರೀಶ್ ದುರಂತ ನಾಯಕನಾಗೇ ಉಳಿದುಬಿಟ್ಟರು. ಹಾಗಂತ ಬೆಂಗಳೂರಿನ ಸಮಸ್ಯೆಗಳ ವಿರುದ್ಧ ಹರೀಶ್ ಯಾವತ್ತಿಗೂ ಕೈಕಟ್ಟಿ ಕೂತವರಲ್ಲ, ಕಷ್ಟ ಹೇಳಿಕೊಂಡು ಬಂದವರ್ಯಾರನ್ನೂ ಬರಿಗೈಯಲ್ಲಿ ಕಳಿಸಿದವರಲ್ಲ. ಸದ್ಯ ಹರೀಶ್ ಪತ್ನಿ ಹೇಮಲತಾ ರಾಜಾಜಿನಗರದ ರಾಮಮಂದಿರ ವಾರ್ಡಿಗೆ ಜೆಡಿಎಸ್ ಅಭ್ಯರ್ಥಿ.

ಬಹುಶಃ ಹರೀಶ್ ಪಾಲಿಗೆ ಇದೇ ಕೊನೆಯ ಚುನಾವಣೆಯೋ ಗೊತ್ತಿಲ್ಲ. ರಾಜಾಜಿನಗರದ ಜನ ಹರೀಶರನ್ನು ಪದೇ ಪದೇ ಸೋಲಿಸುತ್ತಲೇ ಬಂದರು. ಗಾಯದ ಮೇಲೆ ಮತ್ತೆ ಮತ್ತೆ ಬರೆ ಎಳೆಯುತ್ತಲೇ ಬಂದರು. ಊರಿನ ಜನಕ್ಕೆ ಪ್ರೀತಿ ಕೊಟ್ಟ ಹರೀಶ್‌ಗೆ ಜನ ಕೊಟ್ಟಿದ್ದು ಕೇವಲ ಸೋಲು, ನೋವು, ದುಃಖ, ಕಣ್ಣೀರು ಮಾತ್ರ. ಆ ತಪ್ಪಿಗಾದರೂ ರಾಜಾಜಿನಗರದ ಜನತೆ ಹರೀಶ್ ಪತ್ನಿ ಹೇಮಲತಾರನ್ನು ಗೆಲ್ಲಿಸಲೇಬೇಕಿದೆ. ಊರಿಗೆ ಉಪಕಾರಿಯಾದವನ ಋಣ ಇಟ್ಟುಕೊಳ್ಳಬಾರದಂತೆ.


ಡಾ. ಎಸ್. ರಾಜು-ಅತ್ತಿಗುಪ್ಪೆ



ಕಳೆದ ಪಾಲಿಕೆಯ ಕೌನ್ಸಿಲ್‌ನಲ್ಲಿ ನೂರು ಮಂದಿಯಷ್ಟಿದ್ದ ಬಿಜೆಪಿ ಕೌನ್ಸಿಲರ್‌ಗಳ ಪೈಕಿ ನಿಷ್ಕಳಂಕರ್ಯಾರೆಂದು ಹುಡುಕಹೊರಟವರಿಗೆ ಕಾಣುತ್ತಿದ್ದ ಏಕೈಕ ಮುಖವೇ ಡಾ. ಎಸ್. ರಾಜು. 2010ರಲ್ಲಿ ವಿಜಯನಗರದ ಹೊಸಹಳ್ಳಿ ವಾರ್ಡಿನಿಂದ ಗೆದ್ದ ರಾಜು ನಿಜಕ್ಕೂ ಕೆಸರಿನ ಕಮಲದಂತೆ ಕೈಬಾಯಿ ಕೆಡಿಸಿಕೊಳ್ಳಲಿಲ್ಲ, ಯಾವತ್ತಿಗೂ ಪುಂಡು ಪೋಕರಿಗಳನ್ನು ಬೆನ್ನಿಗಿಟ್ಟುಕೊಳ್ಳಲಿಲ್ಲ, ಒಂದೇ ಒಂದು ಹಗರಣಕ್ಕೂ ಕೈಹಾಕಲಿಲ್ಲ, ಅವಕಾಶ ಸಿಕ್ಕಾಗಲೆಲ್ಲ ಪಾಲಿಕೆ ಸಭೆಯಲ್ಲಿ ಜನರ ಆರೋಗ್ಯ ಆಸ್ಪತ್ರೆಗಳ ದುರವಸ್ಥೆ, ಪಾಲಿಕೆ ಆಸ್ತಿಪಾಸ್ತಿಗಳ ಪರಭಾರೆ, ಪಾರ್ಕ್‌ಗಳ ನಿರ್ವಹಣೆ ಕುರಿತಂತೆ ಅರ್ಥಪೂರ್ಣವಾಗಿ ಮಾತಾಡಿದ್ದು ಬಿಟ್ಟರೆ ಯಾವತ್ತಿಗೂ ದರ್ಪ, ದೌಲತ್ತಿಗೆ ಬಿದ್ದವರಲ್ಲ.


ಕಳೆದೈದು ವರ್ಷಗಳಿಂದ ರೌಡಿ ದೊಡ್ಡಣ್ಣನ ರಕ್ಕಸ ಪುತ್ರರು ಮತ್ತವರ ಗೂಂಡಾಪಡೆಯ ಅಟ್ಟಹಾಸ ಕಂಡೇ ಹೈರಾಣಾಗಿರುವ ಅತ್ತಿಗುಪ್ಪೆಯ ಜನಕ್ಕೆ ಡಾ. ರಾಜು ಅನಿವಾರ್ಯ ಆಯ್ಕೆ.

ಕೋಕಿಲಾ ಚಂದ್ರಶೇಖರ್-ಚಾಮರಾಜಪೇಟೆ



ಇಡೀ ಚಾಮರಾಜಪೇಟೆ ತಡಕಾಡಿದರೂ ಒಂದೇ ಒಂದು ಸಭ್ಯ ಮುಖ ಕಾಣಸಿಗದ ಪರಿಸ್ಥಿತಿಯಲ್ಲಿ ಆಶಾಕಿರಣದಂತೆ ಕಾಣುತ್ತಾರೆ ಕೋಕಿಲಾ ಚಂದ್ರಶೇಖರ್. ಪತಿ ಚಂದ್ರಶೇಖರ್‌ರನ್ನು ಜನ ಪ್ರೀತಿಯಿಂದ ಅಪ್ಪೋಡ ಎನ್ನುತ್ತಾರೆ. ಈ ಹಿಂದೆ ಮಾರ್ಕೆಟ್ ದೇವಿಯ ಗರಡಿಯಲ್ಲಿದ್ದೂ ಕಳಂಕದ ಕೊಳೆ ಅಂಟಿಸಿಕೊಳ್ಳದೆ ಹೊರಬಂದವರು ಅಪ್ಪೋಡ. ಅವರು ಈ ಭಾಗದ ಅನೇಕ ಸ್ಲಮ್ಮುಗಳ ಪಾಲಿಗೆ ಬಡವರ ರಕ್ಷಕ ಕೂಡ. ಆದರೆ ಪತ್ನಿ ಕೋಕಿಲಾ ಪತಿಗಿಂತಲೂ ಭಿನ್ನ ಜಾಯಮಾನದ ಹೆಣ್ಣುಮಗಳು. ವಿದ್ಯಾವಂತೆ, ಮಿತಭಾಷಿ. ಯಾರೇ ಬಂದರೂ ಪಕ್ಕ ಕೂರಿಸಿಕೊಂಡು ಕಷ್ಟ ಕೇಳುವ ತಾಳ್ಮೆಯೇ ಕೋಕಿಲಾರ ತಾಯಿ ಗುಣ. ಈ ಹಿಂದೆ ಇದೇ ವಾರ್ಡಿನಿಂದ ಗೆದ್ದು ಪಾಲಿಕೆ ಭ್ರಷ್ಟರ ಭೂತ ಬಿಡಿಸುತ್ತಿದ್ದ ಕೋಕಿಲಾ ಬೆಂಗಳೂರಿನ ಸಾಮಾನ್ಯ ಮಹಿಳೆಯರೆಲ್ಲರ ಪ್ರತಿನಿಧಿಯಾಗಬಲ್ಲರು. ಚಾಮರಾಜಪೇಟೆಯ ಜನ ಬಿಜೆಪಿಯ ಬಿ.ವಿ. ಗಣೇಶ್‌ನಂಥ ಗುಳ್ಳೆನರಿ ಬುದ್ಧಿಯನ್ನು ನೋಡಿದ್ದಾಗಿದೆ. ಕೋಕಿಲಾರನ್ನು ಊರಿನ ಆರೋಗ್ಯದ ಕಾರಣಕ್ಕಾದರೂ ಗೆಲ್ಲಿಸಬೇಕಿದೆ.

ಎಂ. ಶಿವರಾಜು-ಶಂಕರಮಠ




ಈ ಹಿಂದೆ ಕಮಲಾನಗರಕ್ಕೆ ಕೌನ್ಸಿಲರ್ ಆಗಿದ್ದ ಶಿವರಾಜು ಸದ್ಯ ಶಂಕರ ಮಠ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ. ಬಿಜೆಪಿ ಆಳ್ವಿಕೆಯ ಎಂಟು ವರ್ಷಗಳ ದುರಾಡಳಿತದ ವಿರುದ್ಧ ತನ್ನದೇ ಶೈಲಿಯಲ್ಲಿ ಹೋರಾಡಿದ ಶಿವರಾಜು ಮಾತು ಕಮ್ಮಿ ಕೆಲಸ ಜಾಸ್ತಿ ಜಾಯಮಾನದ ವ್ಯಕ್ತಿ. ವಿರೋಧಿ ನಾಯಕರಾಗದೇ ಹೋದರೂ ಬೆಂಗಳೂರನ್ನು ಉಳಿಸಲು ಮೀಡಿಯಾಗಳಿಗೆ ಶಿವರಾಜ್ ಒದಗಿಸಿಕೊಟ್ಟ ದಾಖಲೆಗಳೇ ಪಾಲಿಕೆ ಉಳಿಸುವ ಪ್ರಮುಖ ಸಾಧನಗಳಾದವು. ಕೈಬಾಯಿ ಶುದ್ಧವಾಗಿಟ್ಟುಕೊಂಡೇ ಜನನಾಯಕನಾಗಿ ಬೆಳೆದ ಶಿವರಾಜುರನ್ನು ಶಂಕರಮಠ ವಾರ್ಡಿನ ಜನತೆ ಕೈಹಿಡಿಯಬೇಕಿದೆ.

ಶಾಂತಕುಮಾರಿ-ಮಾರುತಿಮಂದಿರ



ಬಿಜೆಪಿಯ ಐವರು ಮೇಯರ್‌ಗಳ ಪೈಕಿ ಯಾವುದೇ ಹಗರಣ, ಕಳಂಕ, ಕುಖ್ಯಾತಿಗೆ ಸಿಲುಕದ ಏಕೈಕ ಮಹಿಳೆ ಶಾಂತಕುಮಾರಿ. ಹೆಸರೇ ಸೂಚಿಸುವಂತೆ ಎಂಥಾ ದುಷ್ಕಾಲದಲ್ಲೂ ತನ್ನ ತಾಳ್ಮೆ ಕಳೆದುಕೊಳ್ಳದೆ ತಾಯಿ ಕರುಳಿನ ಶಾಂತಕುಮಾರಿ ಮೇಯರಾಗಿದ್ದು ಏಳೇ ತಿಂಗಳಾದರೂ ಮಾಡಿದ ಸಾಧನೆಗಳು ಸಣ್ಣದೇನಲ್ಲ. ಎಕ್ಕುಟ್ಟಿ ಪಾಲಿಕೆಯ ಆರ್ಥಿಕ ದುಸ್ಥಿತಿಯನ್ನು ಇನ್ನಿಲ್ಲದಂತೆ ಸರಿಪಡಿಸಲೆತ್ನಿಸಿದ ಶಾಂತಕುಮಾರಿ ಇವತ್ತಲ್ಲ ನಾಳೆ ಶಾಸಕಿಯಾಗುವ ಎಲ್ಲಾ ಲಕ್ಷಣಗಳಿರುವ ಹೆಣ್ಣುಮಗಳು. ಬೆಂಗಳೂರಿನ ರಾಜಕಾರಣದ ಮಟ್ಟಿಗೆ ಪುರುಷ ಮೃಗಗಳೇ ಮಿಂಚುತ್ತಿರುವ ಈ ಕಾಲದಲ್ಲಿ ಶಾಂತಕುಮಾರಿಯಂಥ ಭವಿಷ್ಯದ ನಾಯಕಿಯರು ಉಳಿಯಬೇಕು, ಬಾಳಬೇಕು.

ಟಿ. ಮಲ್ಲೇಶ್-ಸುಭಾಷ್‌ನಗರ



ದಿನೇಶ್ ಗುಂಡೂರಾವ್ ದುರಾಶೆಗೆ ಸಿಲುಕಿ ಹಾಲಿ ಕೌನ್ಸಿಲರ್ ಆಗಿದ್ದೂ ಕಾಂಗ್ರೆಸ್ ಟಿಕೆಟ್ಟಿನಿಂದ ವಂಚಿತ ಮಲ್ಲೇಶ್ ವಿಧಿಯಿಲ್ಲದೆ ಜೆಡಿಎಸ್ ಅಭ್ಯರ್ಥಿಯಾಗಬೇಕಾಗಿದೆ. ಇವತ್ತಲ್ಲ ನಾಳೆ ಬೆಂಗಳೂರಿನ ಸ್ಲಮ್ಮುಗಳ ದಲಿತರ ದನಿಯಾಗಿ ಹೊರಹೊಮ್ಮುವ ತಾಕತ್ತು, ಪ್ರತಿಭೆ, ಪ್ರಾಮಾಣಿಕತೆಯಿದ್ದು ಸೇದಿನ ರಾಜಕಾರಣಕ್ಕೆ ಮಲ್ಲೇಶ್ ತರದವರು ಬಲಿಯಾಗುತ್ತಿರುವುದು ದುರಂತವೇ ಸರಿ. ಪಾಲಿಕೆಯ ಯಾವ ವಿರೋಧಿ ನಾಯಕನಿಗೂ ಕಮ್ಮಿಯಿಲ್ಲದೆ ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಹೋರಾಡಿದ ಮಲ್ಲೇಶ್‌ರಂಥ ಯುವನಾಯಕನನ್ನು ಗಾಂಧಿ ನಗರದ ಪ್ರಜ್ಞಾವಂತರೆಲ್ಲ ಕೈಹಿಡಿಯಬೇಕು. ಕಾಪಾಡಬೇಕು.

■ ರಾ. ಸೋಮನಾಥ್

ರಾಯಚೂರು: ಸಿಡಿಯುವ ಬಂಡೆಗಳು, ನಡುಗುವ ಹಳ್ಳಿಗಳು

ಲೂಟಿಯಾಗುತ್ತಿರುವ ಶಿಲಾಸಂಪತ್ತು

ರಾಯಚೂರಿನ ಹೊರವಲಯದಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲುಗಣಿಗಾರಿಕೆಯ ಕರಾಳಮುಖಗಳನ್ನು, ಕಲ್ಲುಕಳ್ಳರೊಂದಿಗೆ ಶಾಮೀಲಾಗಿ ಅಕ್ರಮಗಳಿಗೆ ಬೆಂಗಾವಲಾಗಿ ನಿಂತಿರುವ ಅಧಿಕಾರಿಗಳ ದುರುಳತನವನ್ನು ಬಿಚ್ಚಿಟ್ಟಿದ್ದಾರೆ ಕೆ.ಎನ್.ವಿನೋದ್....

ಈ ನತದೃಷ್ಟ ಹಳ್ಳಿಗರ ಪಾಡು ಯಾರಿಗೂ ಬರಬಾರದು. ರಾತ್ರಿಯೆಲ್ಲಾ ಸಿಡಿಲು ಬಡಿದಂತೆ ಢಮಾರ್ ಎನ್ನುವ ಸ್ಫೋಟದ ಸದ್ದಿಗೆ ಹಸುಗೂಸುಗಳು ಬೆಚ್ಚಿಬೀಳುತ್ತವೆ. ಭೂಕಂಪನದಂತೆ ಭೂಮಿ ಗಡಗಡನೆ ನಡುಗುತ್ತದೆ. ಕಷ್ಟಪಟ್ಟು ದುಡಿದು ಸಂಪಾದಿಸಿ ಕಟ್ಟಿರುವ ಮನೆಗಳು ಸೀಳಿಬಿಡುತ್ತಿವೆ. ಜನ ಊರು ಬಿಟ್ಟು ಹೋಗಲಾರದೆ, ಊರಲ್ಲೇ ಇರಲಾರದೇ ತ್ರಿಶಂಕು ಪರಿಸ್ಥಿತಿಯಲ್ಲಿ ನರಕಯಾತನೆ ಅನುಭವಿಸುತ್ತಿದ್ದಾರೆ.

ಇದು ರಾಯಚೂರಿನಿಂದ ಮಂತ್ರಾಲಯಕ್ಕೆ ಹೋಗುವ ರಸ್ತೆಯ ಬದಿಯಲ್ಲಿ, ತುಸು ದೂರ ಒಳಗಡೆ ಇರುವ ಅನ್ವಾರ, ಕಮಲಾಪುರ, ಗೋನವಾರ, ತುಂಟಾಪುರ, ಮಲಿಯಾಬಾದ್, ಮಿಟ್ಟಿ ಮಲ್ಕಾಪುರ, ಆಶಾಪುರ, ಜಾಲಿಬೆಂಚಿ ಮುಂತಾದ ಊರುಗಳ ಶೋಚನೀಯ ಪರಿಸ್ಥಿತಿ. ಅವರ ಈ ದುಸ್ಥಿತಿಗೆ ಕಾರಣವಾಗಿರುವುದು ಸಮೀಪದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಕಲ್ಲುಗಣಿಗಾರಿಕೆ.

ರಾಯಚೂರು-ಮಂತ್ರಾಲಯ ರಸ್ತೆ ಬದಿಯಲ್ಲಿ ನಾಲ್ಕೈದು ಕಲ್ಲು ಕ್ವಾರಿಗಳಿವೆ. ಒಂದು ತೆಲಂಗಾಣ ಮೂಲದ ಸುಬ್ಬಾರೆಡ್ಡಿ ಮತ್ತು ಶಿವಾನಂದ ಎಂಬ ತಿಮಿಂಗಲಗಳಿಗೆ ಸೇರಿದ್ದರೆ ಮತ್ತೊಂದು ಬಳ್ಳಾರಿ ಮೂಲದ ವೇಣುಗೋಪಾಲ್‌ಗೆ ಸೇರಿದೆ. ಉಳಿದ ಕೆಲವು ಕ್ವಾರಿಗಳು ಅಣ್ಣಾರಾವ್, ಸತೀಶ್‌ರೆಡ್ಡಿಯಂತಹ ಇತರ ಕಲ್ಲು ಕುಳಗಳಿಗೆ ಸೇರಿವೆ. ರಾತ್ರಿಯಾಯಿತೆಂದರೆ ಭಾರಿ ಪ್ರಮಾಣದಲ್ಲಿ ಸ್ಫೋಟಕಗಳನ್ನು ಸಿಡಿಸಿ ದೊಡ್ಡ ದೊಡ್ಡ ಬಂಡೆಗಳನ್ನು ಒಡೆಯಲಾಗುತ್ತದೆ. ಒಡೆದ ಬಂಡೆಗಳನ್ನು ವಿವಿಧ ಸೈಜುಗಳಲ್ಲಿ ಕತ್ತರಿಸುವುದಕ್ಕೆ, ಪುಡಿ ಮಾಡುವುದಕ್ಕೆ ಭಾರಿ ಗಾತ್ರದ ಕಂಕರ್ ಮಷಿನ್‌ಗಳನ್ನು ಹಾಕಲಾಗಿದೆ. ಈ ಕಲ್ಲುಗಣಿಗಾರಿಕೆಯ ಹಾವಳಿಯಿಂದ ಸುತ್ತಮುತ್ತ ಇರುವ ಹತ್ತಾರು ಹಳ್ಳಿಗಳ ಹತ್ತಾರು ಸಾವಿರ ಜನರು ನೆಮ್ಮದಿಯನ್ನು ಕಳೆದುಕೊಂಡುಬಿಟ್ಟಿದ್ದಾರೆ.

ಪತ್ರಿಕೆ ಮೊನ್ನೆ ಈ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಜನ ತಮ್ಮ ಅಳಲನ್ನು ಪತ್ರಿಕೆಯ ಎದುರು ತೋಡಿ ಕೊಂಡರು. ಕಮಲಾಪುರ ಹಳ್ಳಿಯಲ್ಲಿ ಸುಮಾರು 600 ಮನೆಗಳಿದ್ದು ಬಹುತೇಕ ಎಲ್ಲಾ ಮನೆಗಳು ಬಿರುಕು ಬಿಟ್ಟಿವೆ.

"ಸಮೀಪದಲ್ಲಿ ಗಣಿಗಾರಿಕೆ ನಡೆಸುವ ಜನ ಭಾರಿ ಸ್ಫೋಟಕ ಸಿಡಿಸಿ ಬಂಡೆ ಒಡೆಯುತ್ತಿರುವುದರಿಂದ ನಮ್ಮ ಊರಿನಲ್ಲೂ ಭೂಮಿ ನಡುಗಿ ಮನೆಗಳು ಬಿರುಕು ಬಿಟ್ಟಿವೆ. ಕಷ್ಟಪಟ್ಟು ದುಡಿದು ಸಂಪಾದಿಸಿದ ಎಂಟು ಲಕ್ಷ ರೂಪಾಯಿ ಹಣದಿಂದ ನಾನು ಕಟ್ಟಿಸಿದ್ದ ಮನೆಯ ಪರಿಸ್ಥಿತಿ ನೋಡಿ ಹೇಗಿದೆ" ಎನ್ನುತ್ತಾ ಬಿರುಕುಬಿಟ್ಟಿರುವ ಗೋಡೆಯನ್ನು ತೋರಿಸಿದರು ಹಳ್ಳಿಯ ನಿವಾಸಿ ಶಿವಪ್ಪ.

"ಬಂಡೆಗಳ ಸ್ಫೋಟದ ಭೀಕರ ಸದ್ದಿಗೆ ಮಲಗಿರುವ ಹಸುಗೂಸುಗಳು ಬೆಚ್ಚಿ ಬೀಳುತ್ತವೆ" ಎಂದರು ಚಂದ್ರಪ್ಪ ಎಂಬ ಯುವಕ.

"ಮನೆಯಲ್ಲಿಟ್ಟಿರುವ ಪಾತ್ರೆ, ಸಾಮಾನು ಸರಂಜಾಮುಗಳು ಕೆಲವೊಮ್ಮೆ ಭೂಮಿ ಅದುರಿದಾಗ ನೆಲಕ್ಕೆ ಬಿದ್ದುಬಿಡುತ್ತವೆ. ನಮಗಂತೂ ಬಹಳ ಭಯವಾಗುತ್ತೆ. ಈ ಗಣಿಗಾರಿಕೆ ಬಂದ್ ಆಗೋವರೆಗೂ ನಮಗೆ ನೆಮ್ಮದಿಯಿಲ್ಲ" ಎನ್ನುತ್ತಾರೆ ಒಬ್ಬ ಗೃಹಿಣಿ.

ಕಲ್ಲುಗಣಿಗಾರಿಕೆಯಿಂದ ಬೇಸತ್ತು ಹೋಗಿರುವ ಸುತ್ತಮುತ್ತಲಿನ ಐದಾರು ಹಳ್ಳಿಗಳ ಜನ ಈಗ ನಿಧಾನವಾಗಿ ಗಣಿಗಾರಿಕೆಯ ವಿರುದ್ಧ ದನಿ ಎತ್ತಲಾರಂಭಿಸಿದ್ದಾರೆ.

"ಲಿಕ್ಕರ್ ಡಾನ್‌ಗಳಂತಹ ದೊಡ್ಡ ದೊಡ್ಡ ಜನ ಇ... ಗಣಿಗಾರಿಕೆಯಲ್ಲಿ ತೊಡಗಿದ್ದರಿಂದ ನಮ್ಮ ಕೈಲಿ ಏನ... ಆಗಲ್ಲ ಅಂತ ಇಷ್ಟು ದಿನ ಸುಮ್ಮನಿದ್ದೆವು. ಇವರ... ಅತಿಯಾಯಿತು. ಎಲ್ಲಿತನಕ ಸುಮ್ಮನಿರೋದು: ಅ... ವಿರುದ್ಧ ಸೆಟೆದು ನಿಲ್ತೀವಿ" ಅಂತ ಊರಿನ ಹಿರೀಕನೊ... ದೃಢವಾಗಿ ಹೇಳಿದರು. ಸುತ್ತಮುತ್ತಲ ಹಳ್ಳಿಯ ಜ... ಎಲ್ಲಾ ಸೇರಿಕೊಂಡು ಕಲ್ಲು ಗಣಿಗಾರಿಕೆ ಬಂದ್ ಮಾ... ಕಲ್ಲುಚೋರರನ್ನು ಒದ್ದೋಡಿಸುವುದಕ್ಕಾಗಿ ಈ... ಸಿದ್ಧರಾಗುತ್ತಿದ್ದಾರೆ.

ಶುರುಮಾಡಿದ್ದು ಲಿಕ್ಕರ್ ಕುಳ


ರಾಯಚೂರು ಎಂದರೇನೆ ಅಪಾರ ಪ್ರಮಾಣ... ಕಲ್ಲುಬಂಡೆಗಳನ್ನು ಹೊಂದಿರುವ ನಾಡು. ಇಡೀ ಜಿಲ್ಲೆಯ... ನೀವು ಎಲ್ಲಿಗೆ ಹೋದರೂ ಮುಗಿಲಿಗೆ ಮುತ್ತಿಡುವ... ಕಾಣುವ ಕಲ್ಲುಬೆಟ್ಟಗಳನ್ನು ಕಾಣಬಹುದು. ಈ ಅಪಾ... ನೈಸರ್ಗಿಕ ಶಿಲಾಸಂಪತ್ತೇ ಈಗ ಜನರ ಪಾಲಿಗೆ ಶಾಪವಾ... ಪರಿಣಮಿಸಿದೆ. ಎಲ್ಲೆಂದರಲ್ಲಿ ಕಲ್ಲುಗಣಿಗಾರಿಕೆಯ ಕ್ವಾರಿಗ... ಪ್ರಾರಂಭವಾಗಿವೆ. ಇಲ್ಲಿ ಒಡೆದ ಕಲ್ಲುಗಳನ್ನು ಬಳ... ಯಾದಗಿರಿ, ಕೊಪ್ಪಳ ಮುಂತಾದ ಸುತ್ತಮುತ್ತಲ ಜಿಲ್ಲೆಗ... ಮಾತ್ರವಲ್ಲದೇ ಪಕ್ಕದ ಆಂಧ್ರ ಮತ್ತು ತೆಲಂಗಾಣಗಳಿ... ಸಾಗಿಸಲಾಗುತ್ತದೆ. ಸುತ್ತಮುತ್ತಲ ಜಿಲ್ಲೆಗಳಲ್ಲಿ ನಡೆಯ... ಬಹುತೇಕ ರಸ್ತೆ ಕಾಮಗಾರಿ, ಕಟ್ಟಡ ನಿರ್ಮಾಣ ಕಾಮಗ... ಅಥವಾ ನೀರಾವರಿ ಕೆನಾಲ್ ಕಾಮಗಾರಿಗಳಿಗೆ ವಿ... ಸೈಜುಗಳ ಕಲ್ಲುಗಳು, ಕಲ್ಲಿನ ಪುಡಿ ಸರಬರಾಜಾಗುವ... ರಾಯಚೂರು ಜಿಲ್ಲೆಯಿಂದಲೇ.

ಈ ಅಪಾರ ಪ್ರಮಾಣದ ನೈಸರ್ಗಿಕ ಶಿಲಾಸಂಪ... ಲೂಟಿ ಮಾಡುವ ಮಹಾಕಾರ್ಯವನ್ನು ಆರಂಭಿ... ಮೊದಲಿಗರಲ್ಲಿ ಜಿಲ್ಲೆಯ ಸುಪ್ರಸಿದ್ಧ ಲಿಕ್ಕರ್ ಧಣಿ ಕ... ಒಬ್ಬ. ರಾಜ್ಯದಲ್ಲಿ ಕುಮಾರಸ್ವಾಮಿ ಮ... ಯಡಿಯೂರಪ್ಪನವರ ಟ್ವೆಂಟಿ ಟ್ವೆಂಟಿ ಆಟ ಶುರು... ಕೂಡಲೇ ಇವರು ಕಲ್ಲುಗಣಿಗಾರಿಕೆಗಾಗಿ ಖರೀದಿ... ಬಹಳಷ್ಟು ಭೂಮಿಯನ್ನು ಆಂಧ್ರಪ್ರದೇಶ ಮೂ... ಸುಬ್ಬಾರೆಡ್ಡಿ ಮತ್ತು ಶಿವಾನಂದ ಎಂಬ ಖದೀಮರಿಗೆ ವ... ತಾವು ಲಿಕ್ಕರ್ ಸಾಮ್ರಾಜ್ಯವನ್ನು ಗಟ್ಟಿಗೊಳಿಸುವ ಕ... ಗಮನ ಕೊಟ್ಟರು.



ನಿರಂತರ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್ ಯಂತ್ರ





ದೇವಾಲಯವನ್ನೂ ನೆಲಕ್ಕುರುಳಿಸಿದರು!




ಈಗ ಕಲ್ಲು ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದಲ್ಲಿ ಒಂದು ಪುಟ್ಟ ದೇವಸ್ಥಾನವಿತ್ತು, ಊರಿನಿಂದ ಹೊರಗೆ ಅಡವಿಯಲ್ಲಿದ್ದ ಈ ದೇವಸ್ಥಾನಕ್ಕೆ ಸುತ್ತಮುತ್ತಲ ಹಳ್ಳಿಗಳಿಂದ ಜನ ನಡೆದುಕೊಳ್ಳುತ್ತಿದ್ದರು. ಯಾವಾಗ ಈ ಪ್ರದೇಶದಲ್ಲಿ ಬಂಡೆಗಳು ಸಿಡಿಯಲಾರಂಭಿಸಿದವೋ ಅಲ್ಲಿಂದಾಚೆಗೆ ಜನ ಆ ಕಡೆ ಹೋಗುವುದನ್ನೇ ನಿಲ್ಲಿಸಿಬಿಟ್ಟರು. ಜನರು ಬರುವುದು ನಿಂತಿದ್ದೇ ತಡ ಈ ಗಣಿಕಳ್ಳರು ಆ ದೇವಸ್ಥಾನಕ್ಕೆ ಜಿಲೆಟಿನ್ ಕಡ್ಡಿ ಇಟ್ಟು ಸ್ಫೋಟಿಸಿ ನೆಲಸಮ ಮಾಡಿಬಿಟ್ಟರು. ಆ ಘಟನೆ ಹೊರಪ್ರಪಂಚಕ್ಕೆ ಗೊತ್ತಾಗಲೇ ಇಲ್ಲ. ಪತ್ರಿಕೆಯು ಗಣಿಗಾರಿಕೆಯ ಪ್ರದೇಶಕ್ಕೆ ಭೇಟಿ ಕೊಟ್ಟಾಗ ದೇವಾಲಯದ ಅವಶೇಷಗಳು ಕಂಡುಬಂದವು.

ಇತ್ತೀಚೆಗೆ ರಾಯಚೂರು ಜಿಲ್ಲಾಧಿಕಾರಿ ಸುಸಿಕಾಂತ್ ಸೆಂಥಿಲ್ ಒಂದು ದಿಟ್ಟ ನಿರ್ಧಾರ ತೆಗೆದುಕೊಂಡು ರಾಯಚೂರು ನಗರದ ನೇತಾಜಿ ರಸ್ತೆಯ ಅಗಲೀಕರಣಕ್ಕಾಗಿ ಅಡ್ಡ ನಿಂತಿದ್ದ ಬಹುತೇಕ ಕಟ್ಟಡಗಳನ್ನು ಕೆಡವಿಬಿಟ್ಟರು. ಸೆಂಥಿಲ್ ಅವರು ಮೂಲತಃ ಡೆಮಾಲಿಷನ್ ವಿರೋಧಿ. ಆದರೆ, ಅವರಿಗೆ ಬೇರೆ ದಾರಿಯಿರಲಿಲ್ಲ, ರಾಯಚೂರಿನ ಟ್ರಾಫಿಕ್ ಸಮಸ್ಯೆಯನ್ನು ಒಂದಿಷ್ಟು ಬಗೆಹರಿಸುವುದಕ್ಕೆ ನಗರದ ಹೃದಯಭಾಗದಲ್ಲಿ ಹಾದುಹೋಗುವ ಈ ಕಿರಿದಾದ ರಸ್ತೆಯನ್ನು ಅಗಲೀಕರಣ ಮಾಡಲೇಬೇಕಿತ್ತು, ಹಾಗಾಗಿ, ಅನಿವಾರ್ಯವಾಗಿ ಜೆಸಿಬಿಯನ್ನು ಕಾರ್ಯಾಚರಣೆಗಿಳಿಸಿದ್ದರು. ಅದು ಖಾಸಗಿ ಕಟ್ಟಡವಾಗಿರಲಿ, ಸರ್ಕಾರಿ ಕಟ್ಟಡವಾಗಿರಲಿ ಅಥವಾ ಯಾವುದೇ ಧರ್ಮಕ್ಕೆ ಸೇರಿದ ಪೂಜಾಸ್ಥಾನವಾಗಿರಲಿ ಅಡ್ಡವಿದ್ದ ಎಲ್ಲವನ್ನೂ ಕೆಡವಿಸಿಬಿಟ್ಟರು. ಅಷ್ಟಾಗಿದ್ದೇ ತಡ ನಮ್ಮ ಮಸೀದಿ ಕೆಡವಿದ್ದಾರೆ ಅಂತ ಮುಸ್ಲಿಮರು ಬೀದಿಗಿಳಿದರು. ಅವರನ್ನು ನೋಡಿ ನಮ್ಮ ದೇವಸ್ಥಾನ ಕೆಡವಿದ್ದಾರೆ ಅಂತ ಚೆಡ್ಡಿಗಳು ಬೀದಿಗಿಳಿದರು. ಮುಸ್ಲಿಮರು ಒಂದೆರಡು ದಿನ ಕೂಗಾಡಿ ಸುಮ್ಮನಾದರೆ ಚೆಡ್ಡಿಗಳು ರಂಪ ಮುಂದುವರಿಸಿದರು. ಅಭಿವೃದ್ಧಿಗಾಗಿ ಮಂದಿರ ಕೆಡವಿದ್ದಕ್ಕೆ ಇಷ್ಟೊಂದು ಹಾರಾಡುವ ಈ ಚೆಡ್ಡಿ ಒರಾಟಗಾರರು ಕಲ್ಲುಕಳ್ಳರು ತಮ್ಮ ಸ್ವಂತ ಲಾಭಕ್ಕಾಗಿ ದೇವಾಲಯವನ್ನೇ ಸ್ಫೋಟಿಸಿ ಧ್ವಂಸಗೊಳಿಸಿದ್ದರ ವಿರುದ್ಧ ಚಕಾರವೆತ್ತಲಿಲ್ಲ.



ಸ್ಫೋಟದಿಂದ ಭಾರೀ ಹಾನಿಗೊಳಗಾದ ಪಂಚಾಯತಿ ಗೋಡೆ





ಕಲ್ಲುಗಣಿ ಸ್ಫೋಟದಿಂದ ಬಿರುಕು ಬಿಟ್ಟಿರುವ ಮನೆಯ ಗೋಡೆಗಳು

ಲೂಟಿ ಮಾಡಿದ್ದು ಸುಬ್ಬಾರೆಡ್ಡಿ-ಶಿವಾನಂದ

ಇತ್ತ ಜಮೀನು ಕೈಗೆ ಸಿಕ್ಕಿದ್ದೇ ತಡ ಸುಬ್ಬಾರೆಡ್ಡಿ ಮತ್ತು ಶಿವಾನಂದರ ಜೋಡಿ ಕಲ್ಲುಗುಡ್ಡಗಳನ್ನು ನೆಲಸಮ ಮಾಡಲಾರಂಭಿಸಿತು. ಇವರ ಜೊತೆಗೆ ಸತೀಶ್ ರೆಡ್ಡಿ, ವೇಣುಗೋಪಾಲ್, ಅಣ್ಣಾರಾವ್‌ಗಳಂತಹ ಲೋಕಲ್ [illegible]ಗಳೂ ಸೇರಿಕೊಂಡು ರಾಯಚೂರಿನ ಶಿಲಾಸಂಪತ್ತನ್ನು ಖಾಲಿ ಮಾಡಲಾರಂಭಿಸಿದರು. ನೋಡುನೋಡುತ್ತಿದ್ದಂತೆ ಮುಗಿಲೆತ್ತರದ ಕಲ್ಲುಗುಡ್ಡಗಳು ಕಣ್ಮರೆಯಾದವು, ಗುಡ್ಡದ ತಳವನ್ನೂ ಬಿಡದೆ ಬಗೆದ ಪರಿಣಾಮವಾಗಿ ಗುಡ್ಡಗಳಿದ್ದ ಜಾಗದಲ್ಲೀಗ ಪ್ರಪಾತಗಳು ಸೃಷ್ಟಿಯಾಗಿವೆ! ಕಲ್ಲುಗಣಿಗಾರಿಕೆಯ ಪರಿಣಾಮವಾಗಿ ಸುಂದರ ಪರಿಸರವೀಗ ಪಾಳಾಗಿ ನಿಂತಿದೆ.

ಕಲ್ಲು ಗಣಿಗಾರಿಕೆ ನಡೆಸಬೇಕೆಂದರೂ ಅದಕ್ಕೆ ತನ್ನದೇ ಆದ ನಿಯಮಗಳಿವೆ. ಅವುಗಳನ್ನು ಮೀರಬಾರದೆಂಬ ಷರತ್ತಿನ ಮೇರೆಗೇ ಗಣಿಗಾರಿಕೆಗೆ ಪರವಾನಗಿಯನ್ನು ನೀಡಲಾಗುತ್ತದೆ. ಆದರೆ, ರಾಯಚೂರಿನ ಈ ಗಣಿಧಣಿಗಳಿಗೆ ಅವ್ಯಾವೂ ಲೆಕ್ಕಕ್ಕಿಲ್ಲ.

ಉದಾಹರಣೆಗೆ, ಬಂಡೆಗಳನ್ನು ಸ್ಫೋಟಿಸುವುದಕ್ಕೆ ನಿಗದಿತ ಪ್ರಮಾಣದ ಸ್ಫೋಟಕಗಳನ್ನು ಬಳಸಬೇಕು ಎಂಬ ಷರತ್ತಿದೆ. ಆದರೆ, ಷರತ್ತಿನ ಪ್ರಕಾರ ಸ್ಫೋಟಿಸಿದರೆ ಭಾರಿ ಪ್ರಮಾಣದ ಕಲ್ಲುಬಂಡೆಗಳನ್ನು ಒಡೆಯುವುದು ಕಷ್ಟವಾಗುತ್ತದೆ, ಉತ್ಪಾದನೆ ಕಡಿಮೆಯಾಗುತ್ತದೆ, ಪರಿಣಾಮವಾಗಿ ಲಾಭವೂ ಕಡಿಮೆಯಾಗುತ್ತದೆ ಎಂಬ ಉದ್ದೇಶದಿಂದ ಭಾರಿ ಪ್ರಮಾಣದ ಜಿಲೆಟಿನ್ ಕಡ್ಡಿಗಳನ್ನು ಸಿಡಿಸಿ ಬಂಡೆಗಳನ್ನು ಸ್ಫೋಟಿಸಲಾಗುತ್ತದೆ.

ಭೂಮಿಯ ಒಳಗಡೆ ಈ ಬಂಡೆಗಳು ಹತ್ತಾರು ಕಿಲೋಮೀಟರ್‌ಗಳ ತನಕ ಚಾಚಿಕೊಂಡಿದ್ದು ಅವುಗಳ ಮೇಲೆ ಹಲವು ಹಳ್ಳಿಗಳು ನೆಲೆಯೂರಿವೆ. ಈ ರೀತಿ ಭಾರಿ ಪ್ರಮಾಣದ ಸ್ಫೋಟಕ ಸಿಡಿಸಿ ಬಂಡೆಗಳನ್ನು ಒಡೆದಾಗ ಸಹಜವಾಗಿ ಸುತ್ತಮುತ್ತಲ ಹಳ್ಳಿಗಳ ಭೂಮಿಯೂ ನಡುಗುತ್ತದೆ. ಕಷ್ಟಪಟ್ಟು ಕಟ್ಟಿದ ಮನೆಗಳು ಬಿರುಕು ಬಿಟ್ಟು ಯಾವಾಗ ತಲೆಯ ಮೇಲೆ ಬೀಳುತ್ತವೆಯೋ ಎಂಬ ಆತಂಕವೀಗ ಎದುರಾಗಿದೆ.


ಈ ಸ್ಫೋಟಕಗಳನ್ನು ಎಲ್ಲಿಡಬೇಕು ಮತ್ತು ಹೇಗಿಡಬೇಕು ಎಂಬ ಬಗ್ಗೆಯೂ ನಿಖರವಾದ ನಿಯಮಗಳಿವೆ. ಅವುಗಳನ್ನು ಗಣಿಗಾರಿಕೆಯ ಸ್ಥಳದಲ್ಲಿಯೇ ಇಡುವಂತಿಲ್ಲ. ಜಿಲೆಟಿನ್ ಕಡ್ಡಿಗಳನ್ನು ಪೊಲೀಸರ ಸುಪರ್ದಿಯಲ್ಲಿಟ್ಟು ಸ್ಫೋಟ ಮಾಡುವ ಸಂದರ್ಭದಲ್ಲಷ್ಟೇ ಗಣಿಗಾರಿಕೆಯ ಸ್ಥಳಕ್ಕೆ ಕೊಂಡೊಯ್ಯಬೇಕು. ಆದರೆ, ಇಲ್ಲಿ ಎಲ್ಲಾ ಸ್ಫೋಟಕಗಳನ್ನೂ [illegible] ರಾಶಿಹಾಕಿ ಇಡಲಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಗಣಿದಂಧೆಕೋರರು [illegible] ಜಾಗದಲ್ಲಷ್ಟೇ ಗಣಿಗಾರಿಕೆ ನಡೆಸುತ್ತಿಲ್ಲ, ಬದಲಿಗೆ ಸುತ್ತಮುತ್ತಲ ಸರ್ಕಾರಿ ಜಮೀನುಗಳನ್ನೂ ಒತ್ತುವರಿ ಮಾಡಿಕೊಂಡು ಕಲ್ಲುಗುಡ್ಡಗಳನ್ನು ಬೋಳಿಸುವ ಕಾಯಕದಲ್ಲಿ [illegible]ರಾಗಿದ್ದಾರೆ.

ಸುಬ್ಬಾ ರೆಡ್ಡಿಗೆ ಇದೊಂದೇ ಕ್ವಾರಿಯಲ್ಲ, ತೆಲಂಗಾಣ ಮತ್ತು ಕರ್ನಾಟಕದ ಗಡಿಭಾಗಗಳಲ್ಲಿ ಏನಿಲ್ಲವೆಂದರೂ [illegible] ಹದಿನೈದು ಕಲ್ಲುಕ್ವಾರಿಗಳಿಗೆ ಒಡೆಯ ಅವನು. [illegible]ದರಾಬಾದ್‌ನಲ್ಲಿ ಕುಳಿತುಕೊಂಡು ಎಲ್ಲಾ ಕ್ವಾರಿಗಳನ್ನು [illegible]ಸುತ್ತಾನೆ. ಎಲ್ಲಾ ಕಡೆಯೂ ಕಾನೂನು, ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಮನಸೋ ಇಚ್ಛೆ ಗಣಿಗಾರಿಕೆ ನಡೆಸುತ್ತಿರುವುದರಿಂದ ಸಹಜವಾಗಿ ಸರ್ಕಾರದ [illegible] ಆತನ ಮೇಲೆ ಬೀಳುತ್ತದೆ. ಅಕ್ರಮಗಳಿಗೆ [illegible] ಪ್ರಶ್ನಿಸುವ ಅಧಿಕಾರಿಗಳು, ಪೊಲೀಸರು, [illegible] ಹೀಗೆ ಯಾರೇ ಆಗಿರಲಿ ಅವರೊಂದಿಗೆ [illegible] ಕುದುರಿಸಿಕೊಂಡು ತನ್ನ ಅಕ್ರಮಗಳನ್ನು [illegible], ಒಂದೊಂದು ಕ್ವಾರಿಗೆ ಒಬ್ಬೊಬ್ಬರನ್ನು [illegible]. ರಾಯಚೂರಿನ ಕ್ವಾರಿಯನ್ನು [illegible] ನೋಡಿಕೊಳ್ಳುತ್ತಿರುವವನು ಶಿವಾನಂದ.

[illegible]ಕ್ಕೆ ಇಪ್ಪತ್ತು ಲಕ್ಷ!

ಸುಬ್ಬಾ ರೆಡ್ಡಿ ಮತ್ತು ವೇಣುಗೋಪಾಲರ ಕಲ್ಲು ಲೂಟಿ [illegible] ಜೊತೆಯಾಗಿ ನಡೆದಿದ್ದರೆ ಸತೀಶ್ ರೆಡ್ಡಿ ಮತ್ತು ಅಣ್ಣಾರಾವ್ ಅವರ ಕ್ವಾರಿಗಳು ಲೂಟಿಯಲ್ಲಿ ಎರಡನೇ ಸ್ಥಾನದಲ್ಲಿವೆ. ಎಲ್ಲಾ ಗಣಿಗಳು ಬೃಹತ್ ಗಾತ್ರದ ಬಂಡೆಗಳನ್ನು ಒಡೆದು 40 ಎಂಎಂ, 20 ಎಂಎಂ, 10 ಎಂಎಂ, 6 ಎಂಎಂ ಅಳತೆಯ ಕಲ್ಲುಗಳನ್ನಾಗಿ ಪರಿವರ್ತಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ, ಮನೆನಿರ್ಮಾಣಕ್ಕೆ, ಸರ್ಕಾರಿ ಮತ್ತು ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕೆ, ನೀರಾವರಿ ಕೆನಾಲ್ ನಿರ್ಮಾಣಕ್ಕೆ ಸರಬರಾಜು ಮಾಡುತ್ತಾರೆ. ಇದರ ಜೊತೆಗೆ ಕಲ್ಲು ಒಡೆದು ಕೊನೆಯದಾಗಿ ಉಳಿಯುವ ಎರಡು ಪ್ರಕಾರದ ಕಲ್ಲುಪುಡಿಯನ್ನೂ ಮಾರಾಟ ಮಾಡುತ್ತಾರೆ. ಒಬ್ಬೊಬ್ಬ ಕಲ್ಲುಚೋರನ ಹತ್ತಿರವೂ ಹದಿನೈದರಿಂದ ಇಪ್ಪತ್ತು ಟಿಪ್ಪರ್ ಲಾರಿಗಳಿವೆ. ಅವುಗಳ



ನಿರಂತರ ಕಲ್ಲು ಲೂಟಿ

ಮೂಲಕ ಗಣಿಯಲ್ಲಿ ಒಡೆದ ಕಲ್ಲುಗಳನ್ನು, ಕಲ್ಲುಪುಡಿಯನ್ನು ಹಗಲು-ರಾತ್ರಿಯೆನ್ನದೇ ನಿರಂತರವಾಗಿ ಸರಬರಾಜು ಮಾಡಲಾಗುತ್ತದೆ. ಎಲ್ಲರಿಗೂ ಕಪ್ಪಕಾಣಿಕೆ ಕೊಟ್ಟು, ಕಾರ್ಮಿಕರಿಗೆ ಕೂಲಿ ಕೊಟ್ಟು, ಗಣಿಗಾರಿಕೆಯ ಇತರ ವೆಚ್ಚಗಳನ್ನು ಭರಿಸಿ ಏನಿಲ್ಲವೆಂದರೂ ಒಬ್ಬೊಬ್ಬ ಕಲ್ಲುಚೋರನಿಗೆ ದಿನಕ್ಕೆ ಇಪ್ಪತ್ತು ಲಕ್ಷ ನಿವ್ವಳ ಲಾಭ ಉಳಿಯುತ್ತದೆ. ಈ ಅಗಾಧ ಪ್ರಮಾಣದ ಲಾಭವನ್ನು ನೋಡಿ ಪುಳಕಿತನಾಗಿರುವ ರಾಯಚೂರಿನ ಲಿಕ್ಕರ್ ಕಿಂಗ್ ತನ್ನ ಮಗನನ್ನು ಕಲ್ಲು ಲೂಟಿ ಮಾಡುವುದಕ್ಕೆ ಈಗ ಗಣಿಗಿಳಿಸಿದ್ದಾನೆ.

ಯಾರ್‍ಯಾರಿಗೆ ಎಷ್ಟೆಷ್ಟು ಕಪ್ಪಕಾಣಿಕೆ?

ಯಾವುದೇ ಅಕ್ರಮಗಳು, ಕಾನೂನುಬಾಹಿರ ಕೃತ್ಯಗಳು ಅಧಿಕಾರಿಗಳ, ಪೊಲೀಸರ ಮತ್ತು ರಾಜಕೀಯ ನಾಯಕರ ಬೆಂಬಲವಿಲ್ಲದೇ ಬಹಳ ದಿನ ನಡೆಯಲಾರದು ಎಂಬುದು ಅನುಭವಗಳಿಂದ ದೃಢಪಟ್ಟಿರುವ ಸತ್ಯ. ಕಳೆದ ಹನ್ನೆರಡು ವರ್ಷದಿಂದ ಸುಬ್ಬಾ ರೆಡ್ಡಿ, ಶಿವಾನಂದ, ಅಣ್ಣಾರಾವ್, ಸತೀಶ್ ರೆಡ್ಡಿಯಂತಹ ತಿಮಿಂಗಲಗಳ ಶಿಲಾಲೂಟಿ ನಿರಂತರವಾಗಿ ನಡೆಯುತ್ತಿದೆ ಎಂದರೆ ಅದರ ಅರ್ಥ ಅಧಿಕಾರಿಗಳು, ಪೊಲೀಸರು ಮತ್ತು ರಾಜಕಾರಣಿಗಳ ದುಷ್ಟ ಕೂಟ ಗಣಿಕಳ್ಳರಿಂದ ಕಪ್ಪಕಾಣಿಕೆಗಳನ್ನು ಪಡೆದು ಅಮೂಲ್ಯ ಪ್ರಾಕೃತಿಕ ಸಂಪತ್ತಿನ ಲೂಟಿಗೆ ಬೆಂಗಾವಲಾಗಿ ನಿಂತಿದೆ ಎಂದೇ ಅರ್ಥ.

ಈ ಗಣಿಕಳ್ಳರು ಪ್ರತಿ ತಿಂಗಳು ಸುಮಾರು 15 ರಿಂದ 20 ಲಕ್ಷ ರೂಪಾಯಿಗಳನ್ನು ಹೀಗೆ ಪೊಲೀಸರಿಗೆ, ಅಧಿಕಾರಿಗಳಿಗೆ ಮತ್ತು ರಾಜಕೀಯ ನಾಯಕರಿಗೆ ನೀಡುತ್ತಿದ್ದಾರೆ. ಈ ತಿಂಗಳ ಲಂಚ ಬಟಾವಡೆಯ ಪಟ್ಟಿಯಲ್ಲಿ ಕೆಲ ಪತ್ರಕರ್ತರೂ ಇರುವುದು ಗೊತ್ತಾಗಿದೆ.

ಪತ್ರಿಕೆಗೆ ಸಿಕ್ಕಿರುವ ನಿರ್ದಿಷ್ಟ ಮಾಹಿತಿಯ ಪ್ರಕಾರ ಇಬ್ಬರು ಎಮ್ಮೆಲ್ಲೆಗಳು, ಒಬ್ಬ ಎಮ್ಮೆಲ್ಸಿ, ಮೂವರು ಸರ್ಕಲ್ ಇನ್ಸ್‌ಪೆಕ್ಟರ್‌ಗಳು, ಐದು ಸಬ್‌ಇನ್ಸ್‌ಪೆಕ್ಟರ್‌ಗಳು, ಒಂದು ಡಜನ್‌ನಷ್ಟು ಕಾನ್ಸ್‌ಟೇಬಲ್‌ಗಳು, ನಾಲ್ಕು ಜಿಲ್ಲಾ ಪಂಚಾಯತ್ ಮೆಂಬರುಗಳು, ಕೆಲವು ರಾಜಕಾರಣಿಗಳು ಈ ಗಣಿಕಳ್ಳರಿಂದ ಪ್ರತಿ ತಿಂಗಳು ಕಾಣಿಕೆ ಪಡೆಯುತ್ತಿದ್ದಾರೆ.

ಇವರು ಪಡೆಯುವ ಹಣದ ಮೊತ್ತ ಅವರ ಹುದ್ದೆ ಮತ್ತು ಪ್ರಭಾವವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಈ ಕಲ್ಲುಕಳ್ಳರಿಂದ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ಹೆಚ್ಚು ಮಂತ್ಲಿ ಕಾಣಿಕೆ ಪಡೆಯುತ್ತಿರುವ ಅಧಿಕಾರಿ ಎಂದರೆ ಯರಗೆರಾ ಸರ್ಕಲ್ ಇನ್ಸ್‌ಪೆಕ್ಟರ್ ಸುರೇಶ್ ತಳವಾರ್. ಗಣಿಗಾರಿಕೆಯ ಪ್ರದೇಶ ಈತನ ವ್ಯಾಪ್ತಿಯಲ್ಲೇ ಬರುತ್ತದೆ. ತಿಂಗಳಿಗೆ ಎರಡು ಲಕ್ಷ ರೂಪಾಯಿ ಪಡೆಯುವ ಈ ಅಧಿಕಾರಿ ಅಕ್ಷರಶಃ ಕಲ್ಲುಗಣಿ ದಂಧೆಗೆ ಬೆಂಗಾವಲಾಗಿ ನಿಂತಿದ್ದಾನೆ. ಈ ಹಿಂದೆ ತುಂಗಭದ್ರಾ ನದಿ ತಟದಿಂದ ಅಕ್ರಮವಾಗಿ ಮರಳು ತುಂಬಿ ಸಾಗಿಸುತ್ತಿದ್ದ ಬಲಾಢ್ಯರು ಕೊಟ್ಟ ಎಂಜಲನ್ನು ತಿಂದು ಅವರ ಮರಳು ಲೂಟಿಗೆ ಪ್ರೊಟೆಕ್ಷನ್ ಕೊಟ್ಟವನು ಈತನೇ. ತಿಂದು ತಿಂದು ಅಭ್ಯಾಸ ಮಾಡಿಕೊಂಡಿರುವ ತಳವಾರನಿಗೆ ಈಗ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್ ಅಕ್ರಮ ಮರಳು ಗಣಿಗಾರಿಕೆಗೆ ಕಡಿವಾಣ ಹಾಕಿದ ಮೇಲೆ ಸ್ವಲ್ಪ ಕಷ್ಟವಾಗಿದೆ. ಹಾಗಾಗಿ, ಈಗ ಆತ ಕಲ್ಲುಗಣಿಗಾರಿಕೆಯ ಕುಳಗಳಿಂದ ಗೆಬರುತ್ತಿದ್ದಾನೆ.

ಗಣಿಗಾರಿಕೆಯ ಪ್ರದೇಶ ಯರಗೆರಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬಂದರೂ ಬಹಳಷ್ಟು ಸಂದರ್ಭದಲ್ಲಿ ಕಲ್ಲು ಸಾಗಿಸುವ ಲಾರಿಗಳು ರಾಯಚೂರು ನಗರದ ಮೂಲಕವೂ ಹಾದುಹೋಗಬೇಕಾಗುತ್ತದೆ. ಹಾಗಾಗಿ, ರಾಯಚೂರು ನಗರದ ಇಬ್ಬರು ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೂ ಮಂತ್ಲಿ ಸಂದಾಯವಾಗುತ್ತಿದೆ.

ಪತ್ರಿಕೆಗೆ ದೊರೆತಿರುವ ಖಚಿತ ಮಾಹಿತಿಯ ಪ್ರಕಾರ ಇಲ್ಲಿಯ ತನಕಐದಾರು ಮೀಡಿಯಾ ಮಂದಿಯೂ ತಮ್ಮ ಪಾಲಿನ ಪ್ರಸಾದ ಸ್ವೀಕರಿಸಿದ್ದಾರೆ. ಒಬ್ಬ ವರದಿಗಾರನ ಮನೆ ಕಟ್ಟುವುದಕ್ಕೆ ಬೇಕಾಗಿದ್ದ ಕಂಕರ್, ವಿವಿಧ ಸೈಜಿನ ಕಲ್ಲು, ಕಲ್ಲುಪುಡಿಗಳು ನೇರವಾಗಿ ಈ ಕಲ್ಲುಗಣಿಗಳಿಂದಲೇ ಉಚಿತವಾಗಿ ಸರಬರಾಜಾಗಿದ್ದು ಗುಟ್ಟಾಗಿ ಉಳಿದಿಲ್ಲ.

ಹೀಗೆ ತಮ್ಮ ಕಲ್ಲು ಲೂಟಿಗೆ ಯಾರೇ ಅಡ್ಡ ಬಂದರೂ ಅವರ ಕೈಗೆ ದುಡ್ಡು ಇಟ್ಟು ಬಾಯ್ಮುಚ್ಚಿಸುವ ಕೌಶಲ್ಯವನ್ನು ಈಗ ಗಣಿಚೋರರು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾರೆ. ಈ ಹಿಂದೆ ಕಂಕರ್ ಸಾಗಿಸುವ ಲಾರಿಯೊಂದು ಹುಡುಗಿಯೊಬ್ಬಳಿಗೆ ಗುದ್ದಿ ಆಕೆಯನ್ನು ಸ್ಥಳದಲ್ಲೇ ಸಾಯಿಸಿತ್ತು. ಆ ಘಟನೆ ಹೊರ ಜಗತ್ತಿಗೆ ಬಾರದಂತೆ ದುಡ್ಡಿನಲ್ಲೇ ಮುಚ್ಚಿ ಹಾಕಿಬಿಟ್ಟರು. (ಈ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದ್ದು ಮುಂದೆ ವಿವರವಾಗಿ ಬರೆಯೋಣ.)

ಆಡಳಿತ ಏನು ಮಾಡುತ್ತಿದೆ?

ಇಷ್ಟೆಲ್ಲಾ ಅಕ್ರಮಗಳು ನಡೆಯುತ್ತಿದ್ದರೂ ಪೊಲೀಸರು, ಜಿಲ್ಲಾಡಳಿತ ಏನು ಮಾಡುತ್ತಿದೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ರಾಯಚೂರಿನ ಅದೃಷ್ಟಕ್ಕೆ ಜಿಲ್ಲೆಗೆ ಎಸ್. ಸಸಿಕಾಂತ್ ಸೆಂಥಿಲ್ ಎಂಬ ದಕ್ಷ ಮತ್ತು ದಿಟ್ಟ ಐಎಎಸ್ ಅಧಿಕಾರಿ ಜಿಲ್ಲಾಧಿಕಾರಿಯಾಗಿ ಬಂದಿದ್ದಾರೆ. ಕಾನೂನು, ಸುವ್ಯವಸ್ಥೆ ಅಪರಾಧ ನಿಯಂತ್ರಣಗಳ ವಿಷಯದಲ್ಲಿ ಕಿಂಚಿತ್ತೂ ರಾಜಿ ಮಾಡಿಕೊಳ್ಳದ ಚೇತನ್ ಸಿಂಗ್ ರಾಥೋಡ್ ಎಂಬ ಐಪಿಎಸ್ ಅಧಿಕಾರಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದಾರೆ. ಇವರಿಬ್ಬರ ನಡುವಿನ ಸಮನ್ವಯತೆಯೂ ಚೆನ್ನಾಗಿದೆ. ಆದರೆ, ಇವರ ಕೈಕೆಳಗೆ ಕೆಲಸ ಮಾಡುವ ವಿವಿಧ ಇಲಾಖೆಗಳ ಅಧಿಕಾರಿಗಳು ಮಾತ್ರ ಭ್ರಷ್ಟಾತಿಭ್ರಷ್ಟರಾಗಿಬಿಟ್ಟಿದ್ದಾರೆ. ಹೀಗಾಗಿ, ಈ ಕಲ್ಲುಗಣಿಗಾರಿಕೆಯ ವಿಷಯದಲ್ಲಿ ಏನಾಗುತ್ತಿದೆ ಎಂಬ ವಿಷಯ ಜಿಲ್ಲಾಧಿಕಾರಿಗಳಿಗಾಗಲೀ ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಾಗಲೀ ತಿಳಿಯುತ್ತಿಲ್ಲ. ಹೀಗಾಗಿ, ಅಧಿಕಾರಿಗಳು ಕೆಳಹಂತದಲ್ಲೇ ಅಷ್ಟಿಷ್ಟು ಬಾಚಿಕೊಂಡು ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುವುದಕ್ಕೆ ನೆರವಾಗುತ್ತಿದ್ದಾರೆ.

ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ಸಿಂಗ್ ರಾಥೋಡ್ ಈ [illegible] [illegible] ಕಲ್ಲು ತಾಯಿಸುವುದೊಳಿತು. ■



ಹಂದಿಗೂಡುಗಳು!


ಈ ಕಲ್ಲು ಕ್ವಾರಿಗಳಲ್ಲಿ ಕೆಲಸ ಮಾಡುವುದಕ್ಕಾಗಿ ದೂರದೂರುಗಳಿಂದ ಬಡ ಕಾರ್ಮಿಕರನ್ನು ಕರೆತರಲಾಗಿದೆ. ಹೊಟ್ಟೆಪಾಡಿಗಾಗಿ ಕುಟುಂಬ ಸಮೇತವಾಗಿ ಬಂದಿರುವ ಈ ಕಾರ್ಮಿಕರಿಗೆ ಉಳಿದುಕೊಳ್ಳುವುದಕ್ಕೆ ಕನಿಷ್ಠ ಸೌಕರ್ಯಗಳಿರುವ ಶೆಡ್‌ಗಳನ್ನೂ ಹಾಕಿ ಕೊಟ್ಟಿಲ್ಲ, ಕುಡಿಯುವ ನೀರು, ಶೌಚಾಲಯಗಳಂತಹ ಕನಿಷ್ಠ ಸೌಲಭ್ಯಗಳನ್ನೂ ಕಾರ್ಮಿಕರಿಗೆ ಕೊಟ್ಟಿಲ್ಲ, ಕಾರ್ಮಿಕರ ಮಕ್ಕಳೂ ಕಲ್ಲು ಕ್ವಾರಿಗಳಲ್ಲೇ ತಮ್ಮ ಅಮೂಲ್ಯ ಬಾಲ್ಯವನ್ನು ಹಾಳು ಮಾಡಿಕೊಳ್ಳುತ್ತಿವೆ. ಶಾಲೆಗೆ ಹೋಗುವ ಭಾಗ್ಯವೂ ಅವುಗಳಿಗಿಲ್ಲ.

ಮೊದಲೇ ರಾಯಚೂರು ಬಿರು ಬೇಸಿಗೆಯಲ್ಲಿ ಬೇಯುತ್ತಿರುವ ನಾಡು. ಬೇಸಿಗೆಯ ಸಮಯದಲ್ಲಿ ಉಷ್ಣಾಂಶ 44 ಡಿಗ್ರಿ ದಾಟುವುದರಿಂದ ಚೆನ್ನಾಗಿ ಗಾಳಿಬೆಳಕು ಬರುವ ಮನೆಯಲ್ಲೂ ಶೆಖೆ ತಡೆದುಕೊಳ್ಳಲು ಆಗುವುದಿಲ್ಲ. ಅಂತಹವರಲ್ಲಿ ಈ ಕಾರ್ಮಿಕರು ಕಬ್ಬಿಣದ ಟಿನ್‌ಗಳಿಂದ ಮಾಡಲ್ಪಟ್ಟಿರುವ ಹಂದಿಗೂಡುಗಳಂತಹ ಪುಟ್ಟ ಪುಟ್ಟ ಶೆಡ್‌ಗಳಲ್ಲಿ ವಾಸ ಮಾಡುತ್ತಾರೆ. ಅಮೂಲ್ಯ ಪ್ರಾಕೃತಿಕ ಶಿಲಾಸಂಪತ್ತನ್ನು ಲೂಟಿ ಮಾಡಿ ತಿಂಗಳಿಗೆ ಕೋಟಿ ಕೋಟಿ ರೂಪಾಯಿಗಳನ್ನು [illegible] ಈ ಬಿದಿರು ಗಣಿದಂಧೆ ಕೋರರಿಗೆ ಕಾರ್ಮಿಕರಿಗೆ ಕನಿಷ್ಠ ಮೂಲಸೌಕರ್ಯಗಳಿರುವ [illegible] ಕಟ್ಟಿಕೊಡಬೇಕೆಂಬ ಕಾಳಜಿಯೂ ಇಲ್ಲ.

ಜೆಮಿನಿ ಬಾಬುವಿನ ಓಂಶಕ್ತಿ ಪವಾಡ

ಇದು ಕೇವಲ ದೇವರಗುಡಿಯೊಂದರ ಕತೆಯಷ್ಟೇ ಅಲ್ಲ, ಇಲ್ಲಿ ದೇವರು ಕೇವಲ ನೆಪ ಮಾತ್ರ. ಹತ್ತಾರು ಸರ್ಕಾರಿ ಶಾಲೆಗಳ ಸಹಸ್ರಾರು ಬಡಮಕ್ಕಳಿಗೆ ಒಪ್ಪೊತ್ತಿನ ಊಟ. ನೂರಾರು ನಿರ್ಗತಿಕರ ಪಾಲಿಗೆ ಜೀವನಾಧಾರ ಮತ್ತು ಕಾಣದ ದೇವರನ್ನು ದುಡಿಮೆ ಪರಿಶ್ರಮಗಳ ದಾಸೋಹದಲ್ಲಿ ಕಾಣಹೊರಟ ಸಾರ್ಥಕ ಅಧ್ಯಾತ್ಮ!

ಇವತ್ತು ಬೆಂಗಳೂರಿನ ಬಾಣಸವಾಡಿಯ ಓಂಶಕ್ತಿ ಅನ್ನಪೂರ್ಣೇಶ್ವರಿ ದೇವಸ್ಥಾನವನ್ನು ಪ್ರತಿಷ್ಠಿತ ಇಸ್ಕಾನ್ ದೇವಾಲಯ, ನಗರ ದೇವತೆ ಅಣ್ಣಮ್ಮನ ಗುಡಿ, ಬಸವನಗುಡಿಯ ದೊಡ್ಡ ಗಣಪತಿ ದೇವಸ್ಥಾನ ಮತ್ತು ಬನಶಂಕರಿಯ ಅಮ್ಮನ ಆಲಯಗಳ ಮಟ್ಟಕ್ಕೆ ಜನ ಹೋಲಿಸುವುದಕ್ಕೂ ಕಾರಣವಿದೆ. ಯಾವುದೋ ಕಾಲಕ್ಕೆ ಊರಗಡಿಯ ಆಲದಮರವೊಂದರ ಕೆಳಗಿನ ಅನಾಥ ಮೂರ್ತಿಯಂತಿದ್ದ ಮಾರಮ್ಮ ಬೆಂಗಳೂರು ಬೆಳೆದಂತೆಲ್ಲ ನೆಲಗಳ್ಳರ ಭೂದಾಹಕ್ಕೆ ರಣಚಂಡಿಯಾಗಿ, ಬಲಾಢ್ಯರ ಕೆಂಗಣ್ಣಿಗೆ ಮಾರಿಯಾಗಿ ಕೆರೆಯನ್ನೇ ಕಬಳಿಸ ಹೊರಟವರ ವಿರುದ್ಧ ಹೋರಾಟವಾಗಿ ವಿಶಿಷ್ಟ ದೇಗುಲವಾಗಿ, ಬೆಂಗಳೂರಿನ ಹೆಗ್ಗುರುತಾಗಿ, ಸಾವಿರಾರು ಬಡಬಗ್ಗರ ಪಾಲಿಗೆ



ಜೀವನಾಧಾರವಾಗಿ ರೂಪುಗೊಂಡ ಪವಾಡವನ್ನು ನೋಡಬೇಕೆಂದರೆ ನೀವು ಬಾಣಸವಾಡಿಗೇ ಬರಬೇಕು.

ಬಾಣಸವಾಡಿ ಕಲ್ಯಾಣ್‌ನಗರದ 7ನೇ ಮುಖ್ಯರಸ್ತೆ ಅಂದರೆ 80 ಅಡಿ ರಸ್ತೆಯ ಹೆಗ್ಗುರುತೇ ಓಂ ಶಕ್ತಿ ಅನ್ನಪೂರ್ಣೇಶ್ವರಿ ದೇವಸ್ಥಾನ. ಜನ ಅದನ್ನು ಓಂಶಕ್ತಿ, ಆದಿಶಕ್ತಿ ಮಾರಮ್ಮ, ನಗರ ದೇವತೆ ಅಣ್ಣಮ್ಮನ ಅಕ್ಕ ಕಾಳಿಕಾದೇವಿ ಎಂದೆಲ್ಲ ಕರೆಯುವುದುಂಟು. ಅವರವರ ನಂಬಿಕೆಗೆ ತಕ್ಕಂತೆ ಆರಾಧಿಸುತ್ತಾ ಬಂದಿರುವ ಭಕ್ತಸಮೂಹವೂ ಸಣ್ಣದೇನಲ್ಲ. ಒಂದಾನೊಂದು ಕಾಲಕ್ಕೆ ಹೆಚ್ಚೂಕಮ್ಮಿ ನಲವತ್ಮೂರು ಎಕರೆಯಷ್ಟಿದ್ದ ಬಾಣಸವಾಡಿ ಕೆರೆಯಿಂದು ಕನಿಷ್ಠ 30 ಎಕರೆಯಾದರೂ ಉಳಿದಿದೆಯೆಂದರೆ ಅದಕ್ಕೆ ಕಾರಣವಾಗಿದ್ದು ಈ ಓಂ ಶಕ್ತಿ ದೇವಸ್ಥಾನವನ್ನು ಉಳಿಸಲು ಈ ಭಾಗದ ಭಕ್ತಾದಿಗಳು ನೆಲಗಳ್ಳರ ವಿರುದ್ಧ ನಡೆಸಿದ ಹೋರಾಟವೆ.

ಆಗಿನ್ನೂ ಬಾಣಸವಾಡಿ ಬೆಂಗಳೂರು ಹೊರಭಾಗದ ಹಳ್ಳಿಯಾಗಿದ್ದ ಕಾಲ. 1980ರ ಹೊತ್ತಿಗೆ ಸುಬ್ಬಯ್ಯನ ಪಾಳ್ಯ ಬಾಣಸವಾಡಿ ಭಾಗದಲ್ಲಿ ಜೆಮಿನಿ ಬಾಬು ಅಲಿಯಾಸ್ ಓಂಶಕ್ತಿ ಬಾಬು ಎಂದರೆ ಯಾರೆಂದು ಪ್ರಶ್ನಿಸುತ್ತಿದ್ದವರೂ ಉಂಟು. ಆಗ ಆಲದಮರದ ಕೆಳಗೆ ಅನಾಥಶಿಲೆಯಂತಿದ್ದ ಮಾರಮ್ಮನಿಗೊಂದು ಪೆಟ್ಟಿಗೆಯಂಥ ಗೂಡು ಕಟ್ಟಿಸಿ ಪ್ರತಿನಿತ್ಯ ಅದಕ್ಕೆ ಪೂಜೆ ಮಾಡುವುದನ್ನೇ ದೇವರ ಸೇವೆಯೆಂದು ಬಗೆದ ಜೆಮಿನಿಬಾಬು ಹಾಗೆ ಮಾಡುವುದಕ್ಕೂ ಕಾರಣವಿತ್ತು. ಆಲದಮರ ಮತ್ತದರ ಮಾರಮ್ಮನ ಗೂಡಿದ್ದ ಜಾಗವೆಂದರೆ ಅದು 150x140 ಅಳತೆಯ ಭರ್ಜರಿ ಸೈಟು. ಅದನ್ನು ಕಬಳಿಸಿದರೆ ಮುಂದೊಮ್ಮೆ ಅದೇ ಕೋಟಿ ಲೆಕ್ಕದಲ್ಲಿ ಬೆಳೆ ಬಾಳುತ್ತದೆಯೆಂಬ ದುರಾಶೆ ಬಾಣಸವಾಡಿಯ ಬಲಾಢ್ಯ ಪಾಳೇಗಾರರದ್ದು.

1985ರಲ್ಲಿ ಬಾಣಸವಾಡಿಯ ಜಮೀನ್ದಾರರಿಬ್ಬರು ಸೇರಿಕೊಂಡಿದ್ದೇ ಪುರಾತನ ಆಲದಮರದ ಪಕ್ಕ ಬೆಳೆದಿದ್ದ ಬನ್ನಿಮರವೊಂದನ್ನು ರಾತ್ರೋರಾತ್ರಿ ನೆಲಸಮಗೊಳಿಸಿದ್ದೇ ಕಾಂಪೌಂಡ್ ಗೋಡೆಯೆರಿಸಿಬಿಟ್ಟರು. ಬೆಳಗ್ಗೆ ಕಣ್ಣುಬಿಟ್ಟರೆ ಇಡೀ ಜಾಗದ ಸುತ್ತ ಗೋಡೆಯೆದ್ದಿತ್ತು, ಬರೋಬ್ಬರಿ ಐನೂರು ಮಂದಿಯನ್ನು ಎಲ್ಲಿಸಿಕೊಂಡು ಇಡೀ ಜಾಗವನ್ನಾಕ್ರಮಿಸಲಾಗಿತ್ತು, ಇದನ್ನು ಕಂಡ ಬಾಬು



ಜೆಮಿನಿಬಾಬು ಹೇಳಿದ್ದು

ದುಡ್ಡು ಮಾಡೋ ಹಾಗಿದ್ದರೆ ದೇವಸ್ಥಾನದ ಬದಲು ಕಾಂಪ್ಲೆಕ್ಸ್ ಕಟ್ಟಬಹುದಿತ್ತಲ್ಲವೇ?

ನಾನೇನಾದರೂ ದೇವಸ್ಥಾನದ ಹೆಸರಲ್ಲಿ ನಯಾಪೈಸೆ ಸಂಪಾದಿಸಿದ್ದರೆ ಈ ಬಗ್ಗೆ ಯಾರೇ ಸಾರ್ವಜನಿಕರು ಜಿಲ್ಲಾಧಿಕಾರಿ, ತಹಸೀಲ್ದಾರ್, ಶಾಸಕರು, ಮಂತ್ರಿಗಳಿಗೆ ದೂರು ನೀಡಬಹುದು. ದೇವರ ಹೆಸರಲ್ಲಿ ದುಡ್ಡು ಮಾಡೋ ದಾರಿದ್ರ್ಯವಿದ್ದಿದ್ದರೆ ನಾನು ಖಂಡಿತಾ ಇಲ್ಲಿ ದೇವಾಲಯ ನಿರ್ಮಿಸುತ್ತಿರಲಿಲ್ಲ, ಇಲ್ಲೊಂದು ಕಾಂಪ್ಲೆಕ್ಸ್ ಎಬ್ಬಿಸಿದ್ದರೆ ತಿಂಗಳೊಂದಕ್ಕೆ ಬಾಡಿಗೆಯೇ ಕೋಟಿ ಲೆಕ್ಕದಲ್ಲಿ ಬರುತ್ತಿತ್ತು....!

ಹೀಗೆಂದು ನೋವಿನಿಂದಲೇ ನಿಟ್ಟುಸಿರಿಡುತ್ತಾರೆ ಧರ್ಮಾಧಿಕಾರಿ ಓಂಶಕ್ತಿ ಬಾಬು ಅಲಿಯಾಸ್ ಜೆಮಿನಿ ಬಾಬು. 'ನೀವೇ ನೋಡಿ, ಈತನಕ ದೇವಸ್ಥಾನಕ್ಕೆಂದು ಖರ್ಚಾದ ಒಟ್ಟು ಮೊತ್ತ 5.85 ಕೋಟಿ. ಭಕ್ತಾದಿಗಳು, ದಾನಿಗಳು ಎಷ್ಟು ಕೊಟ್ಟಿದ್ದಾರೆ ಅಂತ ಇಲ್ಲೇ ಬೋರ್ಡು ಬರೆಸಿ ಹಾಕಿದ್ದೇನೆ. ಕನಿಷ್ಠ ಸಾವಿರ ರೂ.ನಿಂದ ಹಿಡಿದು ಲಕ್ಷದವರೆಗೆ ಈತನಕ ಜನರಿಂದ ಒದಗಿಬಂದ ನೆರವಿನ ಒಟ್ಟು ಮೊತ್ತ ಕೇವಲ 35 ಲಕ್ಷ ಮಾತ್ರ. ಮಿಕ್ಕಂತೆ ಐದೂವರೆ ಕೋಟಿಯಷ್ಟು ಮೊತ್ತವನ್ನು ನನ್ನ ಕೈಯಾರೆ ನನ್ನ ಆಸ್ತಿ ಮಾರಿ ದೇವಸ್ಥಾನ ಕಟ್ಟಿಸಿದ್ದೇನೆ.

ಪ್ರತಿವರ್ಷ ದೇವಸ್ಥಾನದ ವತಿಯಿಂದಲೇ ರಾಜ್ಯೋತ್ಸವ ಮಾಡ್ತೀವಿ. ನೂರಾರು ಜನಕ್ಕೆ ತಳ್ಳುಗಾಡಿ ಕೊಟ್ಟಿದ್ದೇವೆ. ಈ ಭಾಗದಲ್ಲಿ ಕ್ರಿಶ್ಚಿಯನ್ನರು ಮಾಡೋ ಮೇರಿಫೀಸ್ಟಿಗೂ ಮನಸಾರೆ ಹಣ ಸಹಾಯ ಮಾಡಿದ್ದೇನೆ. ಬಡಮಕ್ಕಳಿಗೆ ಪ್ರತಿವರ್ಷ ಬಟ್ಟೆ, ಯೂನಿಫಾರ್ಮ್, ಪುಸ್ತಕ, ಷೂ ಕೊಡುತ್ತೇನೆ. ಇದೇ ರಾಮಸ್ವಾಮಿ ಪಾಳ್ಯದಲ್ಲಿ ಸರ್ಕಾರಿ ಶಾಲೆಗೆ ಜಾಗವೇ ಇರಲಿಲ್ಲ, ಏಳನೇ ತರಗತಿವರೆಗಿದ್ದರೂ ಬಿಕ್ಕಟ್ಟು ಜಾಗದಲ್ಲಿ ಶಾಲೆ ನಡೆಸಬೇಕಾಗಿತ್ತು. ಶಾಲೆ ಹಿಂದೆಯೇ ಎರಡೆಕರೆ ಸರ್ಕಾರಿ ಜಾಗದಲ್ಲಿದ್ದ ಸ್ಲಮ್ಮು ಗುಡಿಸಲುಗಳನ್ನು ನಾವೇ ಪರಿಹಾರ ಕೊಟ್ಟು ತೆರವುಗೊಳಿಸಿ ಈ ಪೈಕಿ ಅರ್ಧ ಎಕರೆಯಲ್ಲಿ ಏಳಂತಸ್ತಿನ ಕಟ್ಟಡ ಕಟ್ಟಿಸಿಕೊಟ್ಟು ಅದನ್ನು ಶಾಲೆಗೆಂದು ಕೊಟ್ಟಿದ್ದೇನೆ. ಇವತ್ತು ಯಾವ ಇಂಗ್ಲಿಷ್ ಕಾನ್ವೆಂಟಿಗೂ ಕಮ್ಮಿಯಿಲ್ಲದಂತೆ ಸರ್ಕಾರಿ ಶಾಲೆ ತಲೆ ಎತ್ತಿದೆ....!

ಇದೆಲ್ಲವನ್ನೂ ನಾನು ಪ್ರಚಾರಕ್ಕೆಂದು ಹೇಳುತ್ತಿಲ್ಲ, ಆದರೆ ನಾವೇನು ಮಾಡುತ್ತಿದ್ದೇ ಎಂಬುದನ್ನಾದರೂ ತಿಳಿಸಿ ಹೇಳಬೇಕಲ್ಲವೇ? ಗುಡಿಸಲುಗಳಿದ್ದ ಎರಡೆಕರೆಯ ಉಳಿ ಜಾಗದಲ್ಲಿ ನಾವೇ ನಿಂತು ವಿಶಾಲ ಉದ್ಯಾನವನವೊಂದಕ್ಕೆ ನಿರ್ಮಿಸಿದ್ದೇವೆ. ಇದ ಹೊಂದಿಕೊಂಡಂತೆ ಪಾಲಿಕೆ ವಾರ್ಡ್ ಕಚೇರಿ, ಕಂದಾಯ ಕಚೇರಿಗಳು, ಬೆಂಗಳೂ ಒನ್ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಿಕೊಟ್ಟಿದ್ದೇವೆ. ಶಾಲೆ, ಪಾಲಿಕೆ ಕಚೇರಿಗ ನಿರ್ಮಾಣಕ್ಕೆಂದೇ 30 ಲಕ್ಷ ರೂಪಾಯಿಗಳ ಖರ್ಚು ಬಂತು. ಈ ಭಾಗದ ಬಾಣಸವಾ ಪಿಳ್ಳಾರೆಡ್ಡಿ ನಗರ, ಚನ್ನಸಂದ್ರ, ಚಿಕ್ಕ ಬಾಣಸವಾಡಿ, ಕೃಷ್ಣಯ್ಯನ ಪಾಳ್ಯ ಬೈಯಪ್ಪನ ಹ ಕಮ್ಮನಹಳ್ಳಿ, ಲಿಂಗರಾಜಪುರ, ಜೀವನಹಳ್ಳಿ, ರಾಮಯ್ಯ ಲೇಔಟ್, ಕರಿಯನಪಾ ಜಾನಕಿರಾಂ ಲೇಔಟ್, ಕಾಚರಕನಹಳ್ಳಿ, ಎಂ.ಎಸ್.ನಗರ, ರಾಮಮೂರ್ತಿನಗರ ಮುಂತಾ ಏರಿಯಾಗಳ ಸರ್ಕಾರಿ ಶಾಲೆಗಳಿಗೆ ಬಿಸಿಯೂಟ ವಿತರಣೆಗೆಂದೇ ಮೂ ವಾಹನಗಳನ್ನಿಟ್ಟಿದ್ದೇವೆ.

ನೀವು ನಂಬಲಿಕ್ಕಿಲ್ಲ, ಯಾರೆಲ್ಲ ಈ ಸೊತ್ತನ್ನು ತಮಗೆ ಸೇರಿದ್ದೆಂದು ಕೋರ್ಟಿನ ಕೇಸು ಹಾಕಿದ್ದರೋ ದೇವರ ದಯೆಯಿಂದ ಈಗ ಅವರೇ ಇದು ನನಗೆ ಸೇರಿ ಸೊತ್ತೆಂದು ಬರೆದುಕೊಟ್ಟಿದ್ದಾರೆ. ಆ ಪ್ರಕಾರ ಈ ಸೊತ್ತಿನಲ್ಲಿ ನಾನು ಏನು ಬೇಕಾದರ ಮಾಡಬಹುದು. ಈ ನಿಟ್ಟಿನಲ್ಲಿ ನಾನು ಈಸ್ಟ್ ಪಾಯಿಂಟ್ ವೆಂಕಟಪತಿಯವ ಧನ್ಯವಾದ ಸಲ್ಲಿಸಲೇಬೇಕು. ಸುಬ್ಬಯ್ಯನ ಪಾಳ್ಯದ ಹಿರಿಯರಾದ ದಿವಂಗತ ಪಾಪಣ್ಣನವ ಅಪ್ಪಾಜಿಯವರು, ಬಾಣಸವಾಡಿ ಪಂಚಾಯ್ತಿಯ ಮಾಜಿ ಉಪಾಧ್ಯಕ್ಷ ವೆಂಕಟಸ್ವಾ ರೆಡ್ಡಿ, ಸುಬ್ಬಯ್ಯನ ಪಾಳ್ಯದ ಪಿಳ್ಳಣ್ಣ, ಮಾಜಿ ಪಂಚಾಯ್ತಿ ಚೇರ್ಮನ್ ಫ್ರಾನ್ಸಿಸ್, ಪೊಲಿ ಅಧಿಕಾರಿ ಎಂ.ಡಿ. ಮುಲ್ಲಾ ಮುಂತಾದವರೆಲ್ಲರಿಗೂ ನಾನು ಈ ಮೂಲಕ ಕೃತ ಸಲ್ಲಿಸುತ್ತಿದ್ದೇನೆ...!

ಧರ್ಮಾಧಿಕಾರಿ ಜೆಮಿನಿ ಬಾಬು ಮಾತುಗಳಿವು.

ಕಂಗಾಲಾಗಿ ದಿಕ್ಕುತೋಚದಂತಾದರೂ ಧೈರ್ಯ ಮಾಡಿ ಒಂದಷ್ಟು ಭಕ್ತರನ್ನು ಸಂಘಟಿಸಿ ಕಾಂಪೌಂಡ್ ಗೋಡೆ ನೆಲಸಮಗೊಳಿಸಿದರು. ಹೀಗೇ ಬಿಟ್ಟರೆ ಮಾರಮ್ಮನ ಸಮೇತ ಇಡೀ ಜಾಗ ಭೂದಾಹಿಗಳ ಪಾಲಾಗುವುದು ಶತಸ್ಸಿದ್ಧ ಎನ್ನಿಸಿತು. ತಕ್ಷಣವೇ ಕೋಲಾರ ಜಿಲ್ಲೆ ಶಿವಾರ ಪಟ್ಟಣಕ್ಕೆ ಹೋಗಿ ಅನ್ನಪೂರ್ಣೇಶ್ವರಿ ಮೂರ್ತಿಗಾಗಿ ತಲಾಶು ಆರಂಭಿಸಿದರು.

ಅದು ಅರ್ಧ ಆಳೆತ್ತರದ ದೇವಿ ವಿಗ್ರಹ. ಬಾಬು ಕಣ್ಣಿಗೆ ಬಿದ್ದ ಆ ಮೂರ್ತಿಯನ್ನೇ ನೇರವಾಗಿ ಬಾಣಸವಾಡಿಗೆ ತಂದರು. ಅದನ್ನು ಗಾಜಿನ ಪೆಟ್ಟಿಗೆಯೊಳಗಿಟ್ಟು ಮೂರು ಮಂಡಲ ವಾಸದ ಶಾಸ್ತ್ರಕ್ಕೆ ಮುಂದಾದ ಬಾಬು ಮೊದಲ ಜಲ ವಾಸ, ನಂತರ ಧಾನ್ಯ ವಾಸ, ತದನಂತರ ಪುಷ್ಪ ವಾಸದ ಕೈಂಕರ್ಯಕ್ಕಿಳಿದರು. ಒಂದು ಮಂಡಲವೆಂದರೆ 41 ದಿನಗಳು. ಅದೊಂದು ದಿನ ಬೆಳ್ಳಂಬೆಳಗ್ಗೆ 6ಕ್ಕೆ ಕಣ್ಣುಬಿಟ್ಟ ಬಾಬುಗೆ ಆಘಾತ ಕಾದಿತ್ತು, ಏಕಾಏಕಿ 200 ಮಂದಿ ರೌಡಿಗಳ ಗುಂಪೊಂದು ಮಂಡಲ ಪೂಜೆಯ ಮೇಲೆ ದಾಳಿಯಿಟ್ಟಿತ್ತು.

ಬಾಬು ಮತ್ತು ದೇವಿಯ ವಿಗ್ರಹ ಬಿಟ್ಟರೆ ಬೆಂಬಲಕ್ಕೆ ಬೇರೆ ಯಾರೂ ಇಲ್ಲ. ಇನ್ನೇನು ತನ್ನ ಕತೆ ಮುಗಿದೇಹೋಯಿತೆಂದು ಬಾಬು ವಿಗ್ರಹದ ಪೆಟ್ಟಿಗೆ ತಬ್ಬಿ ಹಿಡಿದು ಓಂಶಕ್ತಿ, ಆದಿಪರಾಶಕ್ತಿ ಎಂದು ಗೋಳಾಡಲಾರಂಭಿಸಿದರು. ರೌಡಿ ಪಡೆ ಬಾಬು ಕೈಹಿಡಿದು ದರದರನೇ ಎಳೆಯುತ್ತಿತ್ತು, "ಪ್ರಾಣ ಉಳೀಬೇಕು ಅಂದ್ರೆ ಈ ಪೆಟ್ಟಿಗೆ ಸಮೇತ ಸೈಟು ಬಿಟ್ಟು ತೊಲಗು. ಬೇಕಿದ್ರೆ ಪಕ್ಕದ ಫುಟ್‌ಪಾತಿನಲ್ಲಿ ಹಾಕ್ಕೋ" ಎಂದು ಮನಸೋ ಇಚ್ಛೆ ಥಳಿಸಲಾರಂಭಿಸಿದ ರೌಡಿ ಪಡೆಯಲ್ಲೊಬ್ಬ ಕಲ್ಲೊಂದನ್ನು ಕೈಗೆತ್ತಿಕೊಂಡಿದ್ದೇ ಗಾಜಿನ ಪೆಟ್ಟಿಗೆಗೇ ಬೀಸಿ ಬಿಟ್ಟ. ತೂರಿಬಂದ ಕಲ್ಲು ನೇರವಾಗಿ ಬಾಬು ಹಣೆಗೇ ಬಡಿಯಿತು. ಹಣೆ ಸೀಳಿ ರಕ್ತ ಧಾರಾಕಾರ ಹರಿಯುತ್ತಿತ್ತು.

ಇನ್ನೇನು ಸತ್ತೇ ಹೋದ ಎಂದುಕೊಂಡ ದಾಳಿಕೋರರು ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡುತ್ತಿದ್ದಂತೆ ಪೊಲೀಸರು ಬಂದರು. ಅಷ್ಟರಲ್ಲೇ ಐವತ್ತಕ್ಕೂ ಹೆಚ್ಚು ಹೆಂಗಸರು ಜಮಾಯಿಸಿ ಬಾಬುವನ್ನು ಬೋರಿಂಗ್ ಆಸ್ಪತ್ರೆಗೆ ಸಾಗಿಸಿದರೆ ಇತ್ತ ದೇವಿ ವಿಗ್ರಹದ ಸುತ್ತ ಜನಜಂಗುಳಿ. ಆಗ ಬಾಣಸವಾಡಿ ವರ್ತೂರು ವಿಧಾನಸಭೆಯ ವ್ಯಾಪ್ತಿಗಿತ್ತು, ಶಾಸಕ ಎ. ಕೃಷ್ಣಪ್ಪ ಇನ್ಸ್‌ಪೆಕ್ಟರ್‌ಗಳಾದ ಚಲಪತಿ, ಮುಲ್ಲಾ ಸ್ಥಳಕ್ಕಾಗಮಿಸಿ ಬಿಗಿ ಬಂದೋಬಸ್ತು ಗೈದರು. ದೂರು ಪ್ರತಿದೂರಿನ ಆಧಾರದ ಮೇಲೆ ಪೊಲೀಸರು ಎರಡೂ ಪಾರ್ಟಿ ವಿರುದ್ಧ ಕೇಸು ದಾಖಲಿಸಿದರು. ಆಕ್ರಮಣಕಾರರನ್ನು ಹೊರದಬ್ಬುತ್ತಿದ್ದಂತೆ ಭಕ್ತಾದಿಗಳೆಲ್ಲ ಸೇರಿಕೊಂಡು ಪುಟ್ಟ ದೇವಸ್ಥಾನವನ್ನೆಬ್ಬಿಸಿದರು.

ಇದಾಗಿದ್ದು 2001ರಲ್ಲಿ. ದೇವಿಗಾಗಿ ನಡೆದ ಘರ್ಷಣೆ, ಹರಿದ ರಕ್ತ, ಮಾರಾಮಾರಿಗಳು, ವಿವಾದದಿಂದಾಗಿ ಸುತ್ತಮುತ್ತಲ ಏರಿಯಾಗಳಲ್ಲೆಲ್ಲ ಇದಕ್ಕೊಂದು ಮಹತ್ವ ಬಂದಾಗಿತ್ತು, ರಿಯಲ್ ಎಸ್ಟೇಟ್ ರೌಡಿಗಳ ವಿರುದ್ಧದ ಹೋರಾಟಕ್ಕಿಲ್ಲ 'ದೇವರೇ' ರಕ್ಷೆಯಾಗಿತ್ತು. 2005ರಲ್ಲಿ ಹಳೇ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ಹೊಸ ದೇವಸ್ಥಾನ ಕಟ್ಟುವ ಕೈಂಕರ್ಯಕ್ಕಿಳಿದ ಜೆಮಿನಿ ಬಾಬುವನ್ನು ಜನ ಓಂಶಕ್ತಿ ಬಾಬು ಎಂದೇ ಕರೆಯುತ್ತಾರೆ.

ಪುರಾತನ ಆಲದಮರ, ದೇವಿಯ ಮೂಲವಿಗ್ರಹ ಸೇರಿದಂತೆ ತಲೆಎತ್ತಿದ ವಿಶಾಲ ದೇವಾಲಯ ಬರುಬರುತ್ತ ಯಾವ ರೂಪ ಪಡೆಯಿತೆಂದರೆ ಬೆಂಗಳೂರಿನ ಅಣ್ಣಮ್ಮ, ಇಸ್ಕಾನ್, ಗವಿ ಗಂಗಾಧರೇಶ್ವರದಂಥ ಧಾರ್ಮಿ ಹೆಗ್ಗುರುತುಗಳಂತೆ ಬಾಣಸವಾಡಿಯ ಓಂ ದೇವಾಲಯವೂ ತನ್ನ ವಾಸ್ತು ವೈಶಿಷ್ಟ್ಯದಿಂದಾಗಿ ಪ್ರಸಿ ಬಂತು. ದಿನವೊಂದಕ್ಕೆ ಕಮ್ಮಿಯೆಂದರೂ ಸಾ ಭಕ್ತಾದಿಗಳಿರುತ್ತಿದ್ದರು. ಪ್ರತಿ ಶುಕ್ರವಾರವಂತೂ ಕಿಕ್ಕಿ ಜನಜಂಗುಳಿ. ಶುರುವಿನಲ್ಲಿ ಪ್ರತಿ ಶುಕ್ರವಾರ ಮಧ್ಯ ಮತ್ತು ರಾತ್ರಿಯ ಅನ್ನದಾನ ಆರಂಭಿಸಿದ ಬಾಬು ದೇಗುಲದ ಸಂಸ್ಥಾಪಕರಾಗಿ ಓಂಶಕ್ತಿ ಸೇವಾ ಸಮಿತಿಯ ಹುಟ್ಟು ಹಾಕಿದರು. ಬರುಬರುತ್ತ ಪ್ರತಿ ಶುಕ್ರವಾ ಅನ್ನ ದಾಸೋಹ ದಿನನಿತ್ಯದ ಅನ್ನ ದಾಸೋಹವಾಯಿ ಮೊನ್ನೆ ಜುಲೈ 31ಕ್ಕೆ ಶುಕ್ರವಾರದ ಅನ್ನ ದಾಸೋ ಬರೋಬ್ಬರಿ 15 ವರ್ಷ ತುಂಬಿದಂತಾಯ್ತು.

ಇವತ್ತು ಓಂಶಕ್ತಿ ದೇವಾಲಯದ ವತಿಯಿಂದಲೇ ಭಾಗದ 25 ಸರ್ಕಾರಿ ಶಾಲೆಗಳಿಗೆ ಮಧ್ಯಾ ಬಿಸಿಯೂಟದ ವ್ಯವಸ್ಥೆಯಿದೆ. ಇಸ್ಕಾನ್ ಮತ್ತು ಅ ಚೇತನ ಬಿಟ್ಟರೆ ಶಾಲಾಮಕ್ಕಳಿಗೆ ಬಿಸಿಯೂಟ ಬಡಿ ಮೂರನೇ ಅತಿ ದೊಡ್ಡ ಸಂಸ್ಥೆಯೇ ಓಂಶಕ್ತಿ ಸೇವಾ ಸ ಸರ್ವಜ್ಞ ನಗರ, ಯಲಹಂಕ ಮತ್ತು ಸಿ.ವಿ. ರಾ ನಗರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ 10 ಸರ್ಕಾರಿ ಶಾಲಾಮಕ್ಕಳ ಬಿಸಿಯೂಟಕ್ಕೆಂದೇ ಪಾಕಶಾಲೆಯೊಂದನ್ನು ಬಾಬು ನಿರ್ಮಿಸಿದ್ದಾರೆ.

ಬಹುಶಃ ದೇವಸ್ಥಾನದ ಸೊತ್ತನ್ನು ಉಳಿ ಇಂಥದೊಂದು ಹೋರಾಟ ನಡೆಯದೇ ಹೋಗಿದ್ದ ಹೊತ್ತಿಗೆ ಬಾಣಸವಾಡಿ ಕೆರೆಯೆಂಬುದೇ ಉಳಿಯುತ್ತಿ ಕನಿಷ್ಠ ಆ ಕಾರಣಕ್ಕಾದರೂ ಬಾಬು ಸಾಧನೆಗಳಿಗೆ ಸಲ್ಲಿಸಲೇಬೇಕಲ್ಲವೇ?

■ ವರದಿ

ಹರಿಹರ: ಪಂಚಮಸಾಲಿ ಮಠದ ಫಜೀತಿ!



ಹರಿಹರದ ಪಂಚಮಸಾಲಿ ಲಿಂಗಾಯತ ಮಠ ಲಾಕೌಟ್ ಆಗಿದೆ. ಖುದ್ದು ಭಕ್ತರಿಂದಲೇ ಬಾಗಿಲಿಗೆ ಬೀಗ ಜಡಿಸಿಕೊಂಡಿರುವ ಮಠದ ರಾಜಕಾರಣ ಇವತ್ತು ಇಡೀ ಪಂಚಮಸಾಲಿ ಸಮುದಾಯದ ಮಾನವನ್ನು ಮೂರು ಕಾಸಿಗೆ ಹರಾಜಾಕುತ್ತಿದೆ. ಟ್ರಸ್ಟಿಗಳ ಪರ್ಯಾಯ ಮಠದ ಜಿದ್ದು, ಮಠಾಧಿಪತಿಯ ಥರ್ಡ್‌ಕ್ಲಾಸ್ ದಂಧೆಗಳು, ಕಾವಿಯ ಕೋಟಿಕೋಟಿ ಹಗಲುದರೋಡೆಗಳೇ ಮಠಕ್ಕೆ ಈ ಗತಿ ತಂದಿಟ್ಟಿವೆ. ಕೇವಲ ಏಳು ವರ್ಷಗಳ ಹಿಂದೆ ಹುಟ್ಟಿಕೊಂಡ ಪಂಚಮಸಾಲಿ ಮಠ ಇಂತಹದ್ದೊಂದು ದುರ್ಗತಿಗೆ ಸಿಲುಕಲು ಮೂಲಕಾರಣ ಮಠದ ಪೀಠಾಧಿಪತಿ ಜಗದ್ಗುರು ಸಿದ್ಧಲಿಂಗ ಸ್ವಾಮಿ.

ಪತ್ರಿಕೆ ಮುದ್ರಣಕ್ಕೆ ಹೋಗುವ ಎರಡು ದಿನ ಮೊದಲು, ಅಂದರೆ ದಿನಾಂಕ 17.08.2015 ರಂದು ನಡೆದ ವಿದ್ಯಮಾನ ಇದು. ಅವತ್ತು ದಾವಣಗೆರೆಯಲ್ಲಿ ಸಭೆ ಸೇರಿದ್ದ ಕರ್ನಾಟಕ ಪಂಚಮಸಾಲಿ ರಾಜ್ಯ ಕಾರ್ಯಕಾರಿಣಿ ಸದಸ್ಯರ ಸಭೆಯಲ್ಲಿ ಜಗದ್ಗುರು ಶ್ರೀ ಸಿದ್ಧಲಿಂಗ ಸ್ವಾಮಿಯನ್ನು ಮಠದಿಂದ ಹೊರಹಾಕುವ ಬಗ್ಗೆ ಚರ್ಚೆ ನಡೆದಿದ್ದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಈ ಹಿಂದೆಯೂ ಸ್ವಾಮಿಯ ವಿರುದ್ಧ ಇಂತಹ ಚರ್ಚೆಗಳು ನಡೆದಿದ್ದವು. ಆದರೆ ಅವತ್ತಿನ ಚರ್ಚೆ ತುಸು ಗಂಭೀರವಾಗಿತ್ತು, ಸ್ವಾಮಿಯನ್ನು ಪೀಠದಿಂದ ಉಚ್ಚಾಟಿಸುವ ವಿಚಾರದಲ್ಲಿ ಒಂದು ತಾರ್ಕಿಕ ಅಂತ್ಯಕ್ಕೆ ಬರಲೇಬೇಕೆಂಬ ತುಡಿತ ಸದಸ್ಯರಲ್ಲಿತ್ತು. ತುಂಬಾಹೊತ್ತು ಮಾತುಕತೆ ನಡೆದ ನಂತರ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಜವಾಬ್ದಾರಿಯನ್ನು ಮಠದ ಟ್ರಸ್ಟಿಗಳಿಗೆ ನೀಡುವುದೆಂಬ ಒಮ್ಮತಕ್ಕೆ ಸಭೆ ಬಂದಿತ್ತು. ಅದೇ ದಿನ ಮಧ್ಯಾಹ್ನ 3 ಗಂಟೆಯ ವೇಳೆಗೆಲ್ಲ ಹರಿಹರದ ಪಂಚಮಸಾಲಿ ಗುರುಪೀಠದಲ್ಲಿ ನೆರೆದ ಟ್ರಸ್ಟಿಗಳಾದ ರಾಜ್ಯ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ, ಅಧ್ಯಕ್ಷ ಪ್ರಭಣ್ಣ ಹುಣಸೀಕಟ್ಟಿ, ನೀಲಕಂಠ ಅಸೂಟಿ ಮೊದಲಾದವರು ಸಹ ಪೀಠಾಧಿಪತಿ ಸ್ಥಾನದಿಂದ ಸಿದ್ಧಲಿಂಗ ಸ್ವಾಮಿಯನ್ನು ಕಿತ್ತೊಗೆಯಬೇಕು ಎಂಬ ನಿಲುವಿಗೆ ಬಂದು ನಿಲ್ಲುತ್ತಿದ್ದಂತೆಯೇ ಪಂಚಮಸಾಲಿ ಮಠದ ಮರ್ಯಾದೆ ಬೀದಿಗೆ ಬಂದಿತ್ತು, ಟ್ರಸ್ಟಿಗಳ ತೀರ್ಮಾನದಂತೆ ಧರ್ಮದರ್ಶಿ ಬಿ.ಎಸ್. ಉಮಾಪತಿ ಜಗದ್ಗುರುವನ್ನು ಅಕ್ಷರಶಃ ಹೊರಕ್ಕೆ ದಬ್ಬಿದ್ದರು.

ಕರ್ನಾಟಕಕ್ಕೆ ಮಠ ಪರಂಪರೆಯೇನು ಹೊಸದಲ್ಲ. ಹತ್ತಾರು ತಲೆಮಾರುಗಳ ಐತಿಹ್ಯವಿರುವ ನೂರಾರು ಮಠಗಳು ಇವತ್ತಿಗೂ ಇಲ್ಲಿವೆ. ಆದರೆ ಪಂಚಮಸಾಲಿ ಮಠ ಅಂತಹ ಐತಿಹ್ಯ ಮಠಗಳ ಸಾಲಿನಲ್ಲಿ ನಿಲ್ಲುವಂತದ್ದಲ್ಲ. ಏಕೆಂದರೆ, ಅದು ಹುಟ್ಟಿಕೊಂಡಿದ್ದೇ ಏಳು ವರ್ಷಗಳ ಹಿಂದೆ, 2008ರಲ್ಲಿ; ಅದೂ ರಾಜಕೀಯದ ತಳಹದಿಯ ಮೇಲೆ! ಲಿಂಗಾಯತ ಪಂಚಮಸಾಲಿ ಸಮಾಜ 2008ರವರೆಗೂ ಗುರು ಮತ್ತು ಪೀಠ ಪರಂಪರೆಗೆ ಪಂಚಪೀಠಗಳನ್ನೇ ಆಶ್ರಯಿಸಿತ್ತು, ಆದರೆ ರಾಜಕೀಯವಾಗಿ ಸಾಧು ಲಿಂಗಾಯತರ ಪ್ರಾಬಲ್ಯದಿಂದ ಹೊರಬಂದು ತಮ್ಮದೇ ಅಸ್ತಿತ್ವ ಕಂಡುಕೊಳ್ಳಬೇಕೆನ್ನುವ ಹಪಾಹಪಿ ಪಂಚಮಸಾಲಿ ಲಿಂಗಾಯತ ರಾಜಕೀಯ ಲೀಡರುಗಳಲ್ಲಿ ಮೊದಲಿಂದಲೂ ಇದ್ದೇ ಇತ್ತು, ಯಡ್ಡಿ ಸರ್ಕಾರ ಅಸ್ತಿತ್ವಕ್ಕೆ ಬಂದು, ಮುರುಗೇಶ್ ನಿರಾಣಿ ಪ್ರಭಾವಿ ಸಚಿವನಾಗಿ ಹೊರಹೊಮ್ಮಿದ ನಂತರ ಪಂಚಮಸಾಲಿಗಳಿಗೇ ಒಂದು ಪ್ರತ್ಯೇಕ ಪೀಠ ಸ್ಥಾಪನೆಯ ಯೋಜನೆ ಕದಲಲು ಆರಂಭಿಸಿತು, ಆ ಸಾಹಸಕ್ಕೆ ಕೈಹಾಕಿದ್ದು ದಾವಣಗೆರೆಯ ಜವಳಿ ವ್ಯಾಪಾರಿ ಉಮಾಪತಿ. ಅವರಿಗೆ ಮುರುಗೇಶ್ ನಿರಾಣಿಯೂ ಸೇರಿದಂತೆ ಪ್ರಭಣ್ಣ ಹುಣಸೀಕಟ್ಟಿ, ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರ- [illegible] ರಾಜಕಾರಣಿಗಳ ದಂಡೇ ಸಾಥ್ ನೀಡಿತಲ್ಲದೆ [illegible] ವಿರುದ್ಧ ಸಿಡ್ಡೆದ್ದೇಳುವಂತೆ ಸಮಾಜವನ್ನು [illegible] ಹರಿಹರದಲ್ಲಿ ಪಂಚಮಸಾಲಿ ಪೀಠಕ್ಕೆ ಬುನಾದಿ [illegible]. ಅಸಲಿಗೆ ಪಂಚಮಸಾಲಿ ಸಮಾಜ ಪಂಚಪೀಠಗಳ [illegible]ದಿಂದ ಹೊರಬಂದರೆ ತಾವು ರಾಜಕೀಯ ಲಾಭ [illegible] ಸಲೀಸಾಗುತ್ತೆ ಎನ್ನುವುದು ಆ ಬಹುತೇಕ [illegible] ಹುನ್ನಾರವಾಗಿತ್ತೇ ವಿನಃ ಸಮಾಜದ ಉದ್ಧಾರ [illegible] ಅಜೆಂಡಾವಾಗಿರಲಿಲ್ಲ.

[illegible] ದಂಧೆಗೆ 'ಬಿದ್ದ' ಈ ಸ್ವಾಮಿ


[illegible]

ಜಗದ್ಗುರು ಇರಲೇಬೇಕಲ್ಲವೆ. ಆಗ ಮಠದ ಟ್ರಸ್ಟಿಗಳ ಗಮನ ಸೆಳೆದದ್ದು ಮಹಾಂತ ಸ್ವಾಮಿಗಳ ಹೆಸರು. ತಾವೇ ಜಗದ್ಗುರು ಆಗಬೇಕೆಂಬ ಪ್ರಸ್ತಾಪವನ್ನೂ ಅವರು ಮಹಾಂತ ಸ್ವಾಮಿಗಳ ಮುಂದಿರಿಸಿದ್ದರು. ಹೊಸ ಮಠ ಆಗಿರುವುದರಿಂದ ಸಮಾಜದ ಸಂಘಟನೆ, ಭಕ್ತಾದಿಗಳ ಜಾಗೃತಿಗಾಗಿ ಹೆಚ್ಚೆಚ್ಚು ಕಾರ್ಯಶೀಲರಾಗಬೇಕಾಗುತ್ತದೆ ವಯಸ್ಸಾಗಿರುವ ಕಾರಣ ತನ್ನಲ್ಲಿ ಆ ಶಕ್ತಿ ಉಳಿದಿಲ್ಲ, ಬೇಕಾದರೆ ಗುರುಪರಂಪರೆಯ ಮಾರ್ಗದರ್ಶನ ಮತ್ತು ಮಠದ ಪೂಜೆ ಪುನಸ್ಕಾರಗಳನ್ನು ನೋಡಿಕೊಳ್ಳುತ್ತೇನೆ ಅಂತ ನಯವಾಗಿಯೇ ಆ ಪ್ರಸ್ತಾಪವನ್ನು ತಳ್ಳಿಹಾಕಿದ ಮಹಾಂತರು ಗುಲ್ಬರ್ಗಾದ ನೇವರ್ಗಿಯ ನೆಲೋಗಿ ಗ್ರಾಮದ ಸಣ್ಣ ಮಠದಲ್ಲಿರುವ ಸಿದ್ಧಲಿಂಗಸ್ವಾಮಿಯನ್ನು ಜಗದ್ಗುರುವಾಗಿ ನೇಮಿಸಿಕೊಳ್ಳಿ, ಆತ ಚತುರ ಮಾತುಗಾರ ಎಂಬ ಸಲಹೆಯನ್ನೂ ಟ್ರಸ್ಟಿಗಳ ಮುಂದಿರಿಸಿದ್ದರು. ಮಹಾಂತರ ಬಾಯಿಂದ ಬಂದಿದ್ದೇ ಮಹಾಪ್ರಸಾದ ಎನ್ನುವಂತೆ ಹೊಸ ಮಠ ಕಟ್ಟುವ ಹುಮ್ಮಸ್ಸಿನಲ್ಲಿದ್ದ ಟ್ರಸ್ಟಿಗಳು ಪೂರ್ವಾಪರ ವಿಚಾರ ಮಾಡದೆ ಸಿದ್ಧಲಿಂಗ ಸ್ವಾಮಿಗೆ 'ಪಂಚಮಸಾಲಿ' ಸಮಾಜದ ಜಗದ್ಗುರುವೆಂದು ಪೀಠಾರೋಹಣ ಮಾಡಿದ್ದರು.

ಹೀಗೆ ಮಹಾಂತರ ಮೂಲಕ ಹೊಸ ಮಠಕ್ಕೆ ಗಂಟುಬಿದ್ದ ಸಿದ್ಧಲಿಂಗ ಸ್ವಾಮಿಯ ಸಭ್ಯತೆ ಕೇವಲ ಎರಡು ವರ್ಷಕ್ಕೇ ಕಳಚಿಬಿದ್ದಿತ್ತು, ಅಲೌಕಿಕದ ಬೇಲಿ ದಾಟಿ ಲೌಕಿಕ ಪ್ರಪಂಚದತ್ತ ಮಗ್ಗುಲು ಬದಲಾಯಿಸಿದ ಸ್ವಾಮಿ ಟ್ರಸ್ಟಿಗಳಿಗೆ ಇರಲಿ, ಸ್ವತಃ ಭಕ್ತರಿಗೇ ಇರಿಸುಮುರಿಸಾಗುವಂತೆ ವರ್ತಿಸುತ್ತಿದ್ದ. ಗುಟಕಾ ಜಗಿಯುತ್ತಾ, ಪಿಚಕ್ ಪಿಚಕ್ ಅಂತ ಕಂಡಕಂಡಲ್ಲಿ ಉಗಿಯುತ್ತಾ ದರ್ಶನ ಕೊಟ್ಟರೆ ಯಾವ ಭಕ್ತನ ಮನಸ್ಸಲ್ಲಿ ತಾನೆ ಗೌರವದ ಭಾವನೆ ಮೂಡಿತು? ಸ್ವಾಮಿ ಹೀಗೆ ಹಾದಿ ತಪ್ಪುತ್ತಿರುವುದರ ಸುಳಿವಿಡಿದ ಟ್ರಸ್ಟಿಗಳು ಸಿದ್ಧಲಿಂಗರನ್ನು ಕೂರಿಸಿಕೊಂಡು ಬುದ್ಧಿ ಹೇಳಿದರೂ ನಯಾಪೈಸೆಯ ಸುಧಾರಣೆ ಕಾಣಲಿಲ್ಲ. ಹೇಳಬೇಕೆಂದರೆ ಸ್ವಾಮಿಯ ವರ್ತನೆ ಮತ್ತಷ್ಟೂ ಹಳ್ಳಹಿಡಿಯಲಾರಂಭಿಸಿತು.

ತಾನೊಬ್ಬ ಕಾವಿತೊಟ್ಟ ಪರಿತ್ಯಾಗಿ ಎಂಬ ಕಾಮನ್‌ಸೆನ್ಸ್ ಕೂಡಾ ಇಲ್ಲದೇ ಲ್ಯಾಂಡ್ ಮಾಫಿಯಾಕ್ಕೆ ಕೈ ಇಟ್ಟ ಸಿದ್ಲಿಂಗ ಸ್ವಾಮಿ ಮಠವನ್ನು ರಿಯಲ್‌ಎಸ್ಟೇಟ್ ಏಜೆನ್ಸಿಯನ್ನಾಗಿ ಮಾಡಿಬಿಟ್ಟ. ತನ್ನ ಜಾತಿ ವರ್ಚಸ್ಸು ಹೆಚ್ಚಿಸಿಕೊಳ್ಳುವುದಕ್ಕಾಗಿ ಆಗಿನ್ನೂ ಮಂತ್ರಿಯಾಗಿದ್ದ ಮುರುಗೇಶ್ ನಿರಾಣಿ, ಸರ್ಕಾರದ ಮಟ್ಟದಲ್ಲಿ ಸಿದ್ದಲಿಂಗ ಸ್ವಾಮಿಗೆ ಇನ್ನಿಲ್ಲದ ಗೌರವ ತಂದುಕೊಟ್ಟದ್ದೇ ತಡ ಜಗದ್ಗುರುವಿನ ತಲೆತಿರುಗಿ ಹೋಯಿತು. ಪಂಚಮಸಾಲಿ ಎಂಬ ವೋಟಬ್ಯಾಂಕ್ ಅನ್ನು ಅಂದಿನ ಮುಖ್ಯಮಂತ್ರಿ ಯಡ್ಡಿಗೆ ತೋರಿಸಿ ತನ್ನ ವರ್ಚಸ್ಸು ಹೆಚ್ಚಿಸಿಕೊಂಡ ಸಿದ್ಲಿಂಗರು ಆಮೇಲೆ ನಡೆಸಿದ್ದೆಲ್ಲ ಎತ್ತುವಳಿ ಮತ್ತು ದಲ್ಲಾಳಿ ದಂಧೆಗಳನ್ನು. ತನ್ನ ಭಕ್ತಸಮೂಹದ ಹಣವಂತ ನಿರುದ್ಯೋಗಿ ಕುಳಗಳನ್ನು ಹಿಡಿದು, ಸರ್ಕಾರದ ಮಟ್ಟದಲ್ಲಿದ್ದ ತನ್ನ ವರ್ಚಸ್ಸಿನಿಂದ ನಿಮಗೆ ನೌಕರಿ ಕೊಡಿಸ್ತೇನೆ ಎಂಬ ಸುಳ್ಳು ಭರವಸೆ ಕೊಟ್ಟು ಲಕ್ಷಲಕ್ಷಗಳ ವಸೂಲಿಗೆ ನಿಂತರು. ತಾವರೆಗೊಂದಿಯ ಪೂಜಾರ್ ಬಸವರಾಜಪ್ಪ ಎಂಬಾತನಿಂದ 3 ಲಕ್ಷ, ಹೊಸಪೇಟೆಯ ಕುಮಾರ ಎಂಬ ಮತ್ತೊಬ್ಬನಿಂದ 1 ಲಕ್ಷ, ಚಿತ್ರದುರ್ಗದ ನಾಗರಾಜ ಎನ್ನುವವನಿಂದ 1 ಲಕ್ಷ, ಭಾನುವಳ್ಳಿಯ ಪರಮೇಶ್ವರಪ್ಪ ಎಂಬ ಇನ್ನೊಬ್ಬ ಭಕ್ತನಿಂದ 5 ಲಕ್ಷ, ಹೊಸಪೇಟೆಯ ರಾಜಶೇಖರ ಎಂಬಾತನಿಂದ 13 ಲಕ್ಷ.. ಹೀಗೆ ಪಂಚಮಸಾಲಿ ಜಗದ್ಗುರು ಸಿದ್ದಲಿಂಗ ಸ್ವಾಮಿಗಳ ಘಟಿಂಗ ವೃತ್ತಿಗೆ ನೂರಾರು ಪ್ರಕರಣಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಅದೊಮ್ಮೆ ರೊಕ್ಕಕೊಟ್ಟಿದ್ದ ಭಾನುವಳ್ಳಿಯ ಪರಮೇಶ್ವರಪ್ಪ ಮಠಕ್ಕೆ ಧಾಂಗುಡಿಯಿಟ್ಟು ಭಕ್ತ ಸಮೂಹದ ಮುಂದೆಯೇ ಸ್ವಾಮಿಗೆ ನೀರಿಳಿಸಿ 5 ಲಕ್ಷ ವಸೂಲಿ ಮಾಡಿಕೊಂಡ ಹೋದಮೇಲಾದರು ಸಿದ್ಲಿಂಗರು ಬುದ್ಧಿ ಕಲಿಯಬೇಕಿತ್ತು. ಆದರೆ ಪರಿತ್ಯಾಗಿಯಾಗಿದ್ದರೂ ಕುಟುಂಬ, ತಂದೆ-ತಾಯಿ, ಅಣ್ಣ-ತಂಗಿ, ಬಂಧು-ಬಳಗ ಅಂತೆಲ್ಲಾ ಭಾರೀ ವ್ಯಾಮೋಹ ಇರಿಸಿಕೊಂಡಿದ್ದ ಸಿದ್ಲಿಂಗರಿಗೆ ಹಣದ ಮುಂದೆ ಕಾವಿಯ ಮಹತ್ವವೇ ಕಾಣಲಿಲ್ಲ, ಭಕ್ತರಿಗೆ ಹಿತವಚನ ಹೇಳಬೇಕಾದ ಬಾಯಿಯಲ್ಲಿ ಸುಳ್ಳು, ಕಪಟಗಳ ಮಹಾಮಳೆಯೇ ಸುರಿಯುತ್ತಿತ್ತು,

ಇದೇರೀತಿ ಬಳ್ಳಾರಿ ಉದ್ಯಮಿ ರಮೇಶ್ ಕುಮಾರ್ ಮುಲಾಲ ಮುಂದೆ ಸುಳ್ಳಿನ ಕಂತೆಯೊಂದನ್ನು ಕಟ್ಟಿದ್ದ ಸಿದ್ಲಿಂಗರು 'ನನಗೆ ನ್ಯಾಯಾಲಯದಿಂದ ಬಂಧನದ ವಾರೆಂಟಿದೆ, ಹಣ ಕಟ್ಟದರೆ ಬಂಧನದ ಭೀತಿಯಿಂದ ಪಾರಾಗಬಹುದು. ಒಂದು ವಾರದ ಮಟ್ಟಿಗೆ ವಾಪಾಸ್ ಕೊಟ್ಟುಬಿಡುತ್ತೇನೆ' ಅಂತೇಳಿ 10.07.2014ರಂದು ಭರೋಬ್ಬರಿ 13 ಲಕ್ಷ ಹಣ ಎತ್ತಿದ್ದರು. ಅಸಲಿಗೆ ಸ್ವಾಮಿಯ ಮೇಲೆ ಬಂಧನದ ಯಾವ ವಾರೆಂಟೂ ಬಂದಿರಲಿಲ್ಲ, ದುಡ್ಡು ಎತ್ತಿದ್ದಕ್ಕೆ ಸಾಕ್ಷಿ ಎಂಬಂತೆ ಐಸಿಐಸಿಐ ಬ್ಯಾಂಕಿನ ಚೆಕ್ ನಂ.163525 ಮೂಲಕ ನಡೆದ ವಹಿವಾಟು




ಇವತ್ತಿಗೂ ಬ್ಯಾಂಕ್ ಅಕೌಂಟ್ ಪುಸ್ತಕದಲ್ಲಿ ಲಭ್ಯವಿದೆ. ಒಂದು ವಾರ ಎಂದೇಳಿ ಎಂಟತ್ತು ತಿಂಗಳಾದರು ದುಡ್ಡು ವಾಪಾಸ್ ಮಾಡದಿದ್ದಾಗ ರಮೇಶ್ ಕುಮಾರ್ 12.05.2015 ರಂದು ಸ್ವಾಮೀಜಿ ಸಾಲ ಪಡೆದುಕೊಳ್ಳುವಾಗ ತನಗೆ ನೀಡಿದ್ದ ಚೆಕ್ಕನ್ನು ಬ್ಯಾಂಕಿಗೆ ಹಾಕಿದರೆ ಸ್ವಾಮಿಯ ಅಕೌಂಟಲ್ಲಿ ಹಣವಿಲ್ಲದೇ ಚೆಕ್ ಬೌನ್ಸ್ ಆಗಿತ್ತು, ಆಗ ರಮೇಶ್ ಕುಮಾರ್ ಲೀಗಲ್ ನೋಟಿಸ್ ನೀಡಿದ್ದರು. ಹಾಗೆಯೇ ಹಡಗಲಿ ತಾಲ್ಲೂಕಿನ ಮೈಲಾರದ ಜಗದೀಶ್‌ಗೌಡ ಎಂಬುವವರಿಗೆ ಸಿದ್ಲಿಂಗ ಸ್ವಾಮಿ 13 ಲಕ್ಷದ ನಾಮ ತೀಡಿದ್ದರು. ತನ್ನ ಮೂಲ ಆಶ್ರಮ ನೆಲೋಗಿ ಮಠದಲ್ಲಿ ಶಾಲೆಯೊಂದನ್ನು ಶುರುವಚ್ಚಿ ಸರ್ಕಾರದಿಂದ 10 ಲಕ್ಷ ಅನುದಾನವನ್ನೂ ಸಿದ್ಲಿಂಗ ಸ್ವಾಮಿ ಎತ್ತಿದ್ದ ಎನ್ನಲಾಗುತ್ತಿದೆ. ಇವೆಲ್ಲ ಸ್ವಾಮಿಯ ಎತ್ತುವಳಿ ದಂಧೆಯ ಕೆಲವು ಸ್ಯಾಂಪಲ್ ಮಾತ್ರ. ಹಾಗೆ ನೋಡಿದರೆ ಸಿದ್ಧಲಿಂಗಸ್ವಾಮಿ 2 ಕೋಟಿಗೂ ಹೆಚ್ಚು ಸಾಲ ಮಾಡಿಕೊಂಡಿದ್ದಾನಂತೆ. ಸಾಲ ಕೊಟ್ಟವರೆಲ್ಲ ಮಠದ ಭಕ್ತರೇ! ಅಂದಹಾಗೆ, ಸ್ವಾಮಿ ಎತ್ತಿದ್ದ ಕೋಟಿಕೋಟಿ ಹಣದಲ್ಲಿ ಮಠದ ಅಭಿವೃದ್ಧಿಗೆ ಅಂತ ನಯಾಪೈಸೆಯನ್ನೂ ಖರ್ಚು ಮಾಡಿಲ್ಲ, ಎಲ್ಲಾ ತನ್ನ ಸ್ವಂತ ತಿಜೋರಿ ತುಂಬಿಸಿಕೊಂಡಿದ್ದಾನೆ.

ಫುಲ್‌ಸ್ಟಾಪ್ ಹಾಕಿದ ಭಕ್ತರು

ಸಿದ್ಧಲಿಂಗ ಸ್ವಾಮಿಯ ಐಲುತನ ದಿನೇದಿನೆ ಹೆಚ್ಚಾಗುತ್ತಿದ್ದರೂ ಸಮಾಜ ಕಂಡೂಕಾಣದಂತೆ ಕೈಕಟ್ಟಿ ಕೂತಿತ್ತು, ಆದರೆ ಲಕ್ಷಾಂತರ ರೊಕ್ಕ ಕೊಟ್ಟು ಕಳೆದುಕೊಂಡವರು ಸುಮ್ಮನಿರಬೇಕಲ್ಲ, 17.08.2015 ರಂದು ಮೈಲಾರದ ಜಗದೀಶ, ಹೊಸಪೇಟೆಯ ರಾಜಶೇಖರ ಇಬ್ಬರೂ ಮಠಕ್ಕೆ ಬಂದವರೇ ಸ್ವಾಮೀಜಿಗೆ ಅಟಕಾಯಿಸಿಕೊಂಡಿದ್ದಾರೆ. ಕೊಟ್ಟ ಹಣ ವಾಪಾಸು ಕೊಡಿ ಅಂತ ಭಕ್ತರೆದುರೇ ದುಂಬಾಲು ಬಿದ್ದಿದ್ದಾರೆ. ಅಸಲಿಗೆ ಅವರು ಕೂಡಾ ಭಕ್ತರೇ. ಹಣ ನುಂಗಿ ಹಾಕಿದ್ದ ಸಿದ್ಲಿಂಗ ಸ್ವಾಮಿ ಪರಿಸ್ಥಿತಿಯನ್ನು ನಿಭಾಯಿಸುವ ಬದಲು ನೆರೆದಿದ್ದ ಭಕ್ತರೂ ಅಸಹ್ಯ ಪಟ್ಟುಕೊಳ್ಳುವಂತೆ ಸುಳ್ಳುಗಳನ್ನು ಹೆಣೆಯಲು ಮುಂದಾಗಿದ್ದಾರೆ. ಅಷ್ಟೊತ್ತಿಗಾಗಲೆ ಜಗದೀಶ ಮತ್ತು ರಾಜಶೇಖರರ ಸಹನೆಯ ಕಟ್ಟೆಯೊಡೆದಿತ್ತು, ತಮ್ಮ ಹಣ ವಾಪಾಸ್ ಬರುವವರೆಗೆ ನಾವು ಇಲ್ಲಿಂದ ಕದಲೋದಿಲ್ಲ ಅಂತ ಆರ್ಭಟಿಸುತ್ತಲೇ ಮಠದ ಗೇಟಿಗೆ ಬೀಗ ಜಡಿದಿದ್ದರು. ಜಗದ್ಗುರುವಿನ ಕಲ್ಯಾಣ ಗುಣ ಕಂಡು ರೋಸಿಹೋಗಿದ್ದ ಮಠದ ಇನ್ನಿತರ ಭಕ್ತರು ಕೂಡಾ ಮಠಾಧಿಪತಿಗೆ ಈ ಪರಿ ಅವಮಾನವಾಗುತ್ತಿದ್ದರೂ ಮಧ್ಯಪ್ರವೇಶಿಸುವ ಬದಲು ಪರೋಕ್ಷವಾಗಿ ಜಗದೀಶ್ ಮತ್ತು ರಾಜಶೇಖರ್‌ಗೆ ಬೆಂಬಲ ತೋರಿಸಿದ್ದರು.

ಇತ್ತ ಹರಿಹರದ ಮಠದಲ್ಲಿ ಇಷ್ಟೆಲ್ಲಾ ರಾದ್ಧಾಂತ ನಡೆಯುತ್ತಿದ್ದ ವೇಳೆಯಲ್ಲೇ ಅತ್ತ ದಾವಣಗೆರೆಯಲ್ಲಿ ಸಮಾಜದ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯುತ್ತಿತ್ತು. ಮಠದಲ್ಲಿ ನಡೆದ ಈ ಬೀಗಮುದ್ರೆ ಪ್ರಸಂಗದ ವರ್ತಮಾನ ಕಾರ್ಯಕಾರಿಣಿ ಸಭೆಯಲ್ಲಿದ್ದವರಿಗೆ ಸಿಗುತ್ತಿದ್ದಂತೆಯೇ ಇನ್ನು ಈ ಜಗದ್ಗುರು ಉಪಟಳ ಸಹಿಸಿಕೊಳ್ಳೋದು ಅಸಾಧ್ಯ ಎಂಬ ತೀರ್ಮಾನಕ್ಕೆ ಬಂದು ಸೂಕ್ತಕ್ರಮ ಕೈಗೊಳ್ಳುವ ಅಧಿಕಾರವನ್ನು ಟ್ರಸ್ಟಿಗಳಿಗೆ ನೀಡುವ ನಿರ್ಣಯಕ್ಕೆ ಸಭೆ ಬಂದಿತ್ತು, ಐದಾರು ವರ್ಷಗಳಿಂದಲೇ ಸ್ವಾಮೀಜಿಯ ಇಂಥಾ ಎತ್ತುವಳಿ ದಂಧೆ ಬಗ್ಗೆ ಧರ್ಮದರ್ಶಿ ಬಿ.ಸಿ.ಉಮಾಪತಿ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದ್ದರು. ಆದರೆ ಅಷ್ಟರಲ್ಲಾಗಲೆ ಸರ್ಕಾರದ ಮಟ್ಟದಲ್ಲಿ ಗವರ್ನಾರ್ಹ ಸ್ವಾಮೀಜಿ ಎನಿಸಿಕೊಂಡಿದ್ದ ಸಿದ್ಲಿಂಗ ಸ್ವಾಮಿ 'ಇದು ನನ್ನ ವೈಯಕ್ತಿಕ ವ್ಯವಹಾರ, ಇದರಲ್ಲಿ ನೀವ್ಯಾರು ತಲೆ ಹಾಕಬಾರದೆಂದು' ಟ್ರಸ್ಟಿಗಳಿಗೇ ತಾಕೀತು ಮಾಡಿದರು. ಆದರೆ ಯಾವಾಗ ಕಾರ್ಯಕಾರಿಣಿ ಸಭೆಯೇ ಇಂತಹ ತೀರ್ಮಾನಕ್ಕೆ ಬಂದಿತೆ [illegible] ಆಗ [illegible]




ಮುಂದೆ ನಿಂತು ಮಠ ತೊರೆಯುವಂತೆ ಸಿದ್ಲಿಂಗರಿಗೆ ಫರ್ಮಾನು ಹೊರಡಿಸಿದ್ದರು. ಅಷ್ಟಾದರೂ ಭಂಡತನ ಬಿಡದ ಸಿದ್ಧಲಿಂಗಸ್ವಾಮಿ 'ನನಗೆ ಎಂಟು ದಿನಗಳ ಸಮಯ ಬೇಕು' ಅಂತ ವರಾತ ತೆಗೆದಿದ್ದರು. ಆದರೆ ಈ ಸ್ವಾಮಿ 8 ನಿಮಿಷ ಕೂಡ ಮಠದಲ್ಲಿರಕೂಡದು ಎನ್ನುವ ಖಡಕ್ ತೀರ್ಮಾನ ಟ್ರಸ್ಟಿಗಳದ್ದಾಗಿತ್ತು.

ಮಠ ರಾಜಕಾರಣದ ಮತ್ತೊಂದು ಮಗ್ಗುಲು

ಮೇಲ್ನೋಟಕ್ಕೆ ಇಡೀ ಅವಾಂತರಕ್ಕೆ ಸಿದ್ದಲಿಂಗ ಸ್ವಾಮಿಯ ಐಲುಗಳೇ ಕಾರಣ ಎನ್ನುವಂತೆ ಕಂಡುಬಂದರೂ ಮಠವನ್ನು ಹತ್ತಿರದಿಂದ ಬಲ್ಲವರ ಪ್ರಕಾರ ಇದಕ್ಕೆ ಇನ್ನೊಂದು ಮಗ್ಗಲೂ ಇದೆ. ಪಂಚಮಸಾಲಿ ಸಮಾಜ ಹರಿಹರದಲ್ಲಿ ಸಿದ್ದಲಿಂಗಸ್ವಾಮಿಯನ್ನು ಜಗದ್ಗುರು ಎಂದು ಘೋಷಿಸಿಕೊಳ್ಳುವ ಮೊದಲೇ ದಾವಣಗೆರೆಯ ವಿರಕ್ತಮಠದಲ್ಲಿ ಜಯಮೃತ್ಯುಂಜಯ ಸ್ವಾಮೀಜಿ ಸಮಾಜದ ಸ್ವಯಂಘೋಷಿತ ಜಗದ್ಗುರುವಾಗಿ ಪ್ರಚಲಿತದಲ್ಲಿದ್ದರು. ಚಿತ್ರದುರ್ಗದ ಮುರುಘಾ ಶರಣರೊಂದಿಗೆ ಮನಸ್ತಾಪ ಮಾಡಿಕೊಂಡು ಮಠದಿಂದ ಹೊರಬಂದಿದ್ದ ಅವರು ಉತ್ತರ ಕರ್ನಾಟಕದ ಪಂಚಮಸಾಲಿ ಭಕ್ತರನ್ನು ಒಂದುಗೂಡಿಸುತ್ತಲೇ ಕೂಡಲಸಂಗಮದಲ್ಲಿ ಮುರುಘಾಮಠಕ್ಕೆ ಪರ್ಯಾಯ ಜಗದ್ಗುರುವಾಗಿ ವಿಜೃಂಭಿಸಲಾರಂಭಿಸಿದ್ದರು. ಆ ಬೆಳವಣಿಗೆಯಲ್ಲೂ ಮುರುಗೇಶ್ ನಿರಾಣಿಯದ್ದೇ ಪ್ರಧಾನ ಪಾತ್ರವಿತ್ತು, ಯಾವಾಗ ಪಂಚಮಸಾಲಿ ಸಮುದಾಯಕ್ಕೆ ಕೂಡಲಸಂಗಮದಲ್ಲಿ ಜಯಮೃತ್ಯುಂಜಯರು ಜಗದ್ಗುರುವಾದರೋ ಆಗಲೇ ಮಧ್ಯಕರ್ನಾಟಕದ ಪಂಚಮಸಾಲಿ ಲೀಡರುಗಳು ಕೂಡಾ ಅಂತಹುದೇ ಒಂದು ಮಠ ರಾಜಕಾರಣವನ್ನು ತಮ್ಮ ಭಾಗದಲ್ಲೂ ಹುಟ್ಟುಹಾಕಿ ಅದರಿಂದ ತಮ್ಮ ಪೊಲಿಟಿಕಲ್ ಗ್ರಾಫ್ ಏರಿಸಿಕೊಳ್ಳಬೇಕೆಂಬ ಕಾಯಕಕ್ಕೆ ಕೈಯಿಟ್ಟದ್ದು. ಅದರ ಫಲವಾಗಿ ಹರಿಹರ ಮತ್ತೊಂದು ಪಂಚಮಸಾಲಿ ಗುರುಪೀಠಕ್ಕೆ ಸಾಕ್ಷಿಯಾಯಿತು. ಆದರೂ ಜಯಮೃತ್ಯುಂಜಯರ ಕೂಡಲಸಂಗಮದ ಮಠ ಮತ್ತು ಹರಿಹರ ಸಿದ್ದಲಿಂಗರ ಮಠಗಳು ಸಮಾಜವನ್ನು ಮತ್ತೆ ಇಬ್ಭಾಗ ಮಾಡುವ ಆತಂಕ ಒಳಗಿಂದೊಳಗೇ ಕುದಿಯುತ್ತಲೇ ಇತ್ತು,

ಈ ನಡುವೆ ಹರಿಹರದ ಪಂಚಮಸಾಲಿ ಗುರುಪೀಠದ ಸಿದ್ದಲಿಂಗರು ಕೂಡಲಸಂಗಮ ಪಂಚಮಸಾಲಿ ಮಠವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಇಡೀ ಸಮಾಜಕ್ಕೆ ಒಂದೇ ಮಠ ಮಾಡಲು ಯತ್ನಿಸಿದ್ದರು. ಈ ಕುರಿತು ಮಾತುಕತೆಗಳೂ ನಡೆದಿದ್ದವು. ಎರಡೂ ಮಠಗಳು ಮೌಖಿಕ ಅನುಮೋದನೆ ನೀಡಿದ್ದವಾದರೂ ಮಠಗಳ ಟ್ರಸ್ಟಿಗಳ ನಡುವೆ ಯಾವ ಮಠದ ತೆಕ್ಕೆಗೆ ಯಾವ ಮಠ ಹೋಗಬೇಕು ಎನ್ನುವ ಪ್ರಶ್ನೆ ಎದ್ದಿತ್ತು, ಇಲ್ಲಿ ಎರಡೂ ಮಠಗಳ ಟ್ರಸ್ಟಿಗಳ ಪ್ರತಿಷ್ಠೆ ಮೇಲಾಗಿ ಮಠಗಳ ವಿಲೀನ ಪ್ರಕ್ರಿಯೆ ತಿಕ್ಕಾಟದ ಸ್ವರೂಪ ಪಡೆದುಕೊಂಡಿತ್ತು. ಟ್ರಸ್ಟಿಗಳು ಈ ಪರಿ ವಿರೋಧಾಭಾಸದಲ್ಲಿದ್ದಾಗಲೇ ಹರಿಹರ ಪಂಚಮಸಾಲಿ ಸಿದ್ದಲಿಂಗ ಸ್ವಾಮಿ ಮತ್ತು ಕೂಡಲ ಸಂಗಮದ ಜಯಮೃತ್ಯುಂಜಯ ಸ್ವಾಮೀಜಿಗಳು ಜೊತೆಜೊತೆಯಾಗಿಯೇ ಸಭೆಸಮಾರಂಭಗಳಲ್ಲಿ ಭಾಗವಹಿಸತೊಡಗಿದ್ದರು. ಜಗದ್ಗುರುಗಳಿಬ್ಬರ ಆತ್ಮೀಯ ಸಂಬಂಧ ಹರಿಹರ ಪಂಚಮಸಾಲಿ ಪೀಠದ ಟ್ರಸ್ಟಿಗಳಿಗೆ ಒಳಗಿಂದೊಳಗೇ ಆತಂಕ ಶುರು ಮಾಡಿತ್ತು ಎನ್ನಲಾಗುತ್ತಿದೆ. ಹರಿಹರದ ಮಠ ಕೂಡಲಸಂಗಮದ ಅಧೀನಕ್ಕೇನಾದರೂ ಹೋದರೆ, ತಾವು ಯಾವ ರಾಜಕೀಯ ಉದ್ದೇಶ ಇಟ್ಟುಕೊಂಡು ಈ ಮಠವನ್ನು ಹುಟ್ಟುಹಾಕಿದ್ದೆವೊ ಅದೇ ಉದ್ದೇಶ ತಮ್ಮ ಕೈಬಿಟ್ಟು ಹೋಗಬಹುದೆನ್ನುವ ಆಲೋಚನೆ ಬಹುಪಾಲು ಟ್ರಸ್ಟಿಗಳ ಮನಸ್ಸನ್ನು ಹೊಕ್ಕಿತ್ತು, ಟ್ರಸ್ಟಿ ಮತ್ತು ಧರ್ಮದರ್ಶಿಗಳ ಅಂಕೆಗೂ ಸಿಲುಕದೆ ವರ್ತಿಸುತ್ತಿದ್ದ ಸಿದ್ಧಲಿಂಗ ಸ್ವಾಮಿಯನ್ನು ಮಟ್ಟಹಾಕುವ ಅವಕಾಶಕ್ಕೆ ಕಾದು ಕುಳಿತಿದ್ದಾಗ ಸ್ವಾಮಿಯ ಈ ಕರ್ಮಕಾಂಡಗಳು ದಾರಿ ಸುಗಮ ಮಾಡಿಕೊಟ್ಟಿದೆ. ಒಂದೇ ಏಟಿಗೆ ಎರಡು ಹಕ್ಕಿ ಎನ್ನುವಂತೆ ಸ್ವಾಮಿಯನ್ನು ಅವನದೇ ಭಾನಗಡಿಗಳ ನೆಪಮಾಡಿ ಪೀಠದಿಂದ ಓಡಿಸಲಾಗಿದೆ [illegible] ಬೀಗ ಬಡಿ[illegible]

■ ಟಿ.ಎಸ್. [illegible]



ಆಭಾರಿ ಕಣ್ಣುಗಳು

ಕಳೆದ ಮಂಗಳವಾರ ದಿನಾಂಕ 26 ಜುಲೈ 1948ಕ್ಕೆ ಮೊದಲು ನನ್ನ ಎದೆಯಲ್ಲಿ ಉರಿತದ ಏಳು ಬೊಕ್ಕೆಗಳು ಎದ್ದಿದ್ದವು. ಏಳೂ ಸೇರಿಕೊಂಡು ಒಂದು ತುಣ್ಣು ಮಾಡಿಬಿಟ್ಟವು. ತಂದೆ-ತಾಯಿಯರ ಕೊಲೆಯ ಬೊಕ್ಕೆ, ಸೋದರ-ಸೋದರಿಯರ ಹತ್ಯೆಯ ಬೊಕ್ಕೆ, ಹರೆಯದ ಮಗನ ಕೊಲೆಯ ಬೊಕ್ಕೆ, ಧೈರ್ಯಶಾಲಿ ಮಗಳ ಹತ್ಯೆಯ ಬೊಕ್ಕೆ, ಗೃಹಲಕ್ಷ್ಮಿಯಾಗಿದ್ದ ಜೀವನಸಂಗಾತಿಯ ಕೊಲೆಯ ಬೊಕ್ಕೆ, ಅಲ್ಲಾಹು ಅಕಬರ್ ಘೋಷಣೆ, ಪವಿತ್ರ ಗಡ್ಡಗಳು, ಹಣೆ ಮೇಲೆ ನಮಾಜಿನ ಗುರುತುಗಳು ಈ ದೇಹಗಳೊಳಗಿಂದ ಅದೆಷ್ಟು ನಿರ್ದಯವಾಗಿ ಪ್ರಾಣ ತೆಗೆದಿದ್ದವು. ತಾಯಿ ಹಾಗೂ ಧರ್ಮಪತ್ನಿಯೊಂದಿಗೆ ಎಂತಹ ಹೇಯ ನಡವಳಿಕೆ! ಹೂವಿನಂತಹ ಮಗಳನ್ನು ಅವಳ ತಾಯಿಯೆದುರೇ ಹಲ್ಲಾ ಮಾಡಿ ಬಿಟ್ಟದ್ದು... ಓಹ್! ನಾನು ಹೇಗೆ ಉಳಿದುಕೊಂಡೆ ಹಾಗೂ ಈ ನಿರಾಶ್ರಿತರ ಕ್ಯಾಂಪ್‌ವರೆಗೆ ಹೇಗೆ ಬಂದೆ ಎನ್ನುವುದೂ ಒಂದು ಹೃದಯ ಹಿಂಡುವ ಕತೆ. ಹಿಂದಿನ ಕತೆಗಳನ್ನು ಬಣ್ಣಿಸುವುದು ನನ್ನ ಅಳವಿನ ಮಾತಾಗಿರಲಿಲ್ಲ, ಈಗ ಸಾಹಸವಿದೆ. ಆದರೆ ಸಾಮರ್ಥ್ಯವಿಲ್ಲ, ಕಾರಣ ನೋವನ್ನು ಅಭಿವ್ಯಕ್ತಿಸಲು ನನ್ನ ಬಳಿ ಇದ್ದಷ್ಟು ಶಬ್ದಗಳನ್ನೆಲ್ಲ ಹೃದಯ ನಿಷ್ಪ್ರಯೋಜಕಗೊಳಿಸಿಬಿಟ್ಟಿದೆ.

ಕಳೆದ ಮಂಗಳವಾರ, ಅಂದರೆ ನನ್ನ ನವಜೀವನಕ್ಕೂ ಮೊದಲಿನ ಎಲ್ಲ ಭೀಕರ ದೃಶ್ಯಗಳು ನೂರಾರು ಬಾರಿ ಮನಸ್ಸಿನಲ್ಲಿ ಮೂಡಿ ಮರಳಿ ಹೋಗಿ ಬಿಡುತ್ತಿದ್ದವು. ಹೋಗುವ ಕಾಲಕ್ಕೆ ನನ್ನನ್ನು ಕುದಿಯುವ ಕೊಪ್ಪರಿಗೆಯಲ್ಲಿ ದೂಡಿ ಹೋಗುತ್ತಿದ್ದವು. ಅದರಲ್ಲಿ ನಾನು ಕುದಿದೂ ಕುದಿದೂ ಬೆಂದೂ ಬೆಂದೂ ಬೆಂಕಿಯ ಉಂಡೆಯಾಗುತ್ತಿದ್ದೆ. ನಂತರ ಆಟಂಬಾಂಬ್ ಆಗಿ ಇಸ್ಲಾಮೀ ಲೋಕದ ಮೇಲೆ ಬೀಳುತ್ತಿದ್ದೆ. ಅದನ್ನು ಭಸ್ಮವಾಗಿಸಿ ಬಿಡುತ್ತಿದ್ದೆ ಹಾಗೂ ಸ್ವತಃ ನಾನೂ ಭಸ್ಮವಾಗುತ್ತಿದ್ದೆ.

ಕಳೆದ ಮಂಗಳವಾರ ಅರ್ಧರಾತ್ರಿವರೆಗೆ ಮಗ್ಗಲು ಬದಲಿಸುತ್ತಲೇ ಇದ್ದೆ. ಆದರೆ ಕಣ್ಣು ಮುಚ್ಚಲೇ ಇಲ್ಲ. ಕಾರ್ಮೋಡಗಳು ಕವಿದು ಭೋರ್ಗರೆದು ಹೋಗಿದ್ದವು. ನಿರಾಶ್ರಿತರ ಕ್ಯಾಂಪ್‌ನ ಅಕ್ಕಪಕ್ಕದ ಮರಗಳಲ್ಲಿ ಮಿಂಚುಹುಳುಗಳು ಝುಗಮಗಿಸುತ್ತಿದ್ದವು. ಗಾಯಗಳನ್ನು ಶಮನಗೊಳಿಸಬಲ್ಲ ತಂಗಾಳಿ ಬೀಸುತ್ತಿತ್ತು, ಅಷ್ಟರಲ್ಲಿ ಹುಚ್ಚು ಕೋಗಿಲೆಯ 'ಪ್ರಿಯ ಎಲ್ಲಿ, ಪ್ರಿಯ ಎಲ್ಲಿ' ಎಂಬ ಶಬ್ದ ಹೃದಯದಲ್ಲಿ ಬಂದೂಕಿನ ಗುಂಡಿನಂತೆ ಇಳಿಯತೊಡಗಿತು. ನನ್ನನ್ನು ನನ್ನ ಜನ್ಮಭೂಮಿಗೆ ಕೊಂಡೊಯ್ಯಿತು. ಗಡ್ಡ ಮೀಸೆ, ಆ ಸದ್ದು-ಗದ್ದಲ. ಓಹ್ ಆ ನಗೆ ಮತ್ತು ಅಟ್ಟಹಾಸ. ಬಗೆಬಗೆಯ ಸಂತೃಕೆ. ಈ ನೆನಪುಗಳಿಂದಾಗಿ ಕ್ಯಾಂಪ್ ಬಂದೀಖಾನೆಯಾಗಿ ಬಿಟ್ಟಿತು. ಬದುಕಿನಲ್ಲಿ ಕತ್ತಲೆ ಆವರಿಸಿಕೊಂಡಿತು. ನಾನು ಹತಾಶನಾಗಿ ಕತ್ತಲೆಯ ನಿರ್ಜನ ಪ್ರದೇಶದಲ್ಲಿ ಹುಚ್ಚನಂತೆ ಮುನ್ನುಗ್ಗಿದೆ.

ನಾನು ವೇಗವಾಗಿ ಒಂದು ಬದಿಯಲ್ಲಿ ನಡೆದಿದ್ದೆ, ಓಡತೊಡಗಿದ್ದೆ - ಕಳೆದು ಹೋದ ದಿನಗಳನ್ನು ಹಿಡಿಯಲು ಹೊರಟವನಂತೆ.

ಎಷ್ಟು ಹೊತ್ತು ನಡೆದೆನೋ ಮತ್ತು ಎಷ್ಟು ದೂರ ಕ್ರಮಿಸಿದೆನೋ ಗೊತ್ತಿಲ್ಲ. ಒಂದೊಮ್ಮೆ ಪ್ರಜ್ಞೆ ಬಂದೊಡನೆ ಕಂಡದ್ದೇನೆಂದರೆ ಒಂದು ಪಾಳು ಕಟ್ಟಡ ನನ್ನನ್ನು ನಾಲ್ಕೂ ಕಡೆಯಿಂದ ಸುತ್ತುವರಿದುಕೊಂಡಿತ್ತು ಮತ್ತು ಅದು ತನ್ನೊಂದಿಗೆ ನೆಲಸಮಗೊಳಿಸಲಾದ ಸಮಾಧಿಗಳನ್ನೂ ತಂದಿತ್ತು. ನಡುವೆ ಒಂದು ಭಗ್ನಗೊಂಡ ಗುಂಬಜವಿತ್ತು. ಅದು ಕೊನೆಯ ದಿನಗಳ ಬೆಳದಿಂಗಳಲ್ಲಿ ತನ್ನ ಏಕೈಕ ಬೆರಳಿನಿಂದ ಕಾರ್ಮೋಡಗಳತ್ತ ಏನನ್ನೋ ಸೂಚಿಸುತ್ತಿತ್ತು, ಅದು ಮುಸಲ್ಮಾನರ ಸ್ಥಾನ.

ನನ್ನ ಮನಸ್ಸಿನಲ್ಲಿ ಶಾಂತಿ ಮತ್ತು ಮತ್ಸರದ ಭಾವನೆ ಮೂಡಿತು. ಆದರೆ ಏಕಾಏಕಿ ನನ್ನ ದೃಷ್ಟಿ ಒಂದೆಡೆ ನೆಟ್ಟಿತು. ಸಮಾಧಿಗಳ ಮಧ್ಯ ಒಂದು ಸಮಾಧಿ ಮೈಮುರಿಯತೊಡಗಿತ್ತು, ಮೈ ಮುರಿದು ಎದ್ದಿತು. ನನ್ನತ್ತ ಸಾಗಿ ಬಂತು. ಮುಸಲ್ಮಾನನೆ? ನಾನು ಆಶ್ಚರ್ಯಚಕಿತನಾದೆ, ಭಯಭೀತನಾದೆ: ಆ ಮನುಷ್ಯ ಮುನ್ನುಗ್ಗಿ ಬರುತ್ತಿದ್ದಂತೇ ನಾನು ಗಟ್ಟಿಯಾಗಿ ಕೂಗಿಕೊಂಡೆ "ನೀನು ಹಿಂದೂವೆ ಇಲ್ಲವೆ ಮುಸಲ್ಮಾನನೆ?"

ಆ ಮನುಷ್ಯ ತೀರ ಹತ್ತಿರ ಬಂದ.

"ಇವನು ಹಿಂದೂ."

"ನೀನು ಯಾರು?"

"ಇವನೇ."

"ಇಲ್ಲಿ ಬೇರೆ ಯಾರಾದರೂ ಇದ್ದಾರೆಯೆ?"

ಆ ಮನುಷ್ಯ ಹಿಂದಿರುಗಿ ಅತ್ತಿತ್ತ ನೋಡಿದ.

ನಂತರ ಹೇಳಿದ "ಇಲ್ಲವಲ್ಲ."

"ನಾನು ನಿನ್ನನ್ನೇ ಕೇಳುತ್ತಿದ್ದೇನೆ. ನೀನು ಯಾರು? ಹಿಂದೂ ಇಲ್ಲವೆ ಮುಸಲ್ಮಾನ?"

"ನಾನು... ನಾನು... ನಾನೇ? ನಾನು ಆ ವಿಷಯವಾಗಿ ಎಂದೂ ಯೋಚಿಸಲಿಲ್ಲ."

"ನೀನು ಸುಳ್ಳುಗಾರ. ನೀನು ನಿಸ್ಸಂದೇಹವಾಗಿ ಮುಸಲ್ಮಾನ. ಹೆದರಿ ಸತ್ಯ ಬಚ್ಚಿಡುತ್ತಿರುವಿ."

"ಯಾರ ಹೆದರಿಕೆ? ಯಾರಾದರೂ ನನ್ನನ್ನು ಹೆದರಿಸುತ್ತಿರುವರೆ?"

ಇಷ್ಟು ಹೇಳಿ ಆ ಮನುಷ್ಯ ಸಮೀಪದ ಒಂದು ಸಮಾಧಿ ಮೇಲೆ ಬಹಳ ಆರಾಮದಿಂದ ಕುಳಿತುಕೊಂಡ. ಅವನ ಮುಖವೆಂದರೆ ಕೆದರಿದ ಕೂದಲು, ಮಣ್ಣು ಮತ್ತು ಹುಲ್ಲು ಕಡ್ಡಿಯ ಒಂದು ಮಿಶ್ರಣವಾಗಿತ್ತು, ಅದು ತಿಂಗಳುಗಟ್ಟಲೆ ನೀರು, ಬಾಚಣಿಕೆ ಮತ್ತು ಕತ್ತರಿಯ ಮುಖ ನೋಡಿರಲಿಲ್ಲ. ಅವನ ಮೀಸೆ ಮತ್ತು ಗಡ್ಡ ದೊಡ್ಡ ಕಂಟಿಯಂತಿತ್ತು, ಅದು ತುಟಿ ಮತ್ತು ಮೂಗಿನಿಂದ ಹಿಡಿದು ಹೊಳ್ಳೆಗಳನ್ನು ಆವರಿಸಿಕೊಂಡಿತ್ತು, ತಲೆಗೂದಲ ರಾಶಿ ಗಲ್ಲ ಮತ್ತು ಹಣೆ ಮೇಲೆ ಹೇಗೆ ನೇತಾಡುತ್ತಿತ್ತೆಂದರೆ ಅದು ಭಿಕ್ಷುಕನ ಗಂಟು ಎನ್ನುವಂತಿತ್ತು. ಕಾಲರಾ ರೋಗಿಯಂತೆ ಅವನ ಮುಖದಲ್ಲಿ ರಕ್ತದ ಹನಿಯೂ ಇಲ್ಲವೇನೋ ಎನಿಸುತ್ತಿತ್ತು. ಆದರೆ ಇವೆಲ್ಲ ಅರ್ಥಹೀನ ವಸ್ತುಗಳ ಮಧ್ಯ ಅವನ ಕಣ್ಣುಗಳು ಹೇಗೆ ಹೊಳೆಯುತ್ತಿದ್ದವೆಂದರೆ ಅದು ಆಳವಾದ ಬಾವಿಯೊಳಗಿನ ನೀರು - ಸಮುದ್ರವನ್ನೇ ಅಲ್ಲೋಲಕಲ್ಲೋಲಗೊಳಿಸಬಲ್ಲ ಬಿರುಗಾಳಿಯೂ ಅದರಲ್ಲಿ ಚಿಕ್ಕ ಅಲೆಯನ್ನೂ ಸೃಷ್ಟಿಸಲಾರದಂತಹ ನೀರು ಏನೋ ಎನ್ನುವಂತಿದ್ದವು. ತನ್ನ ಕಣ್ಣಿನ ಶಾಂತಿ ಮತ್ತು ವಿಶ್ವಾಸದಿಂದಾಗಿ ಆ ಮನುಷ್ಯ ಗಲಭೆಗಳು ಮತ್ತು ರಕ್ತಪಾತದ ಈ ಜಗತ್ತಿನ ನಿವಾಸಿಯೇ ಅಲ್ಲವೆನಿಸುತ್ತಿತ್ತು. ನಾನು ಆ ಶಾಂತಿ ನೋಡಿ ಹೆದರಿಕೆಯಾದಂತಾಯಿತು. ಆದರೆ ಮತ್ತೆ ಆ ದೃಷ್ಟಿಯಲ್ಲಿ ಮುಳುಗಿ ಬಿಡಲೆ ಎಂದು ಮನಸ್ಸು ಚಡಪಡಿಸತೊಡಗಿತು.

ಕತೆ

ಅವನ ಕಣ್ಣುಗಳು ಇದ್ದಕ್ಕಿದ್ದಂತೆ ಎವೆಗಳಿಂದ ಆಚೆ ಜಿಗಿಯಲೆತ್ನಿಸಿದವು. ಅವು ಹೇಗೆ ಹೊರಹೊಮ್ಮಿ ಬಿಟ್ಟವೆಂದರೆ ನನಗೆ ಭಯವಾಗತೊಡಗಿತು. ಅವನ ಕಣ್ಣಲ್ಲಿ ಶಾಂತಿ ಮತ್ತು ವಿಶ್ವಾಸದ ಜೊತೆಗೆ ಇನ್ನೂ ಏನೋ ಇತ್ತು, ಭಯಾನಕ ಮತ್ತು ಭೀಭತ್ಸ ಎನ್ನುವಂತಹದ್ದು. ಮೋಡಿ ಹಾಕಬಲ್ಲ ಅದರ ಪ್ರಭಾವದಿಂದ ನನ್ನನ್ನು ದೂರವಿರಿಸಿದೆ. ಹೊರಡಬೇಕೆಂದು ಎದ್ದು ನಿಂತೆ.

ನಾನು ಹೊರಡುವುದನ್ನು ಗಮನಿಸಿದ ಆ ಮನುಷ್ಯ "ನೀನು ನನ್ನನ್ನು ದ್ವೇಷಿಸುತ್ತಿರುವೆ. ಆದರೆ ನಾನು ಅಂತಹವನಲ್ಲ" ಎಂದ.

"ಅದೇ ಮುಸಲ್ಮಾನನಲ್ಲವೆ?"

"ಇವನಂತೂ ಮುಸಲ್ಮಾನನಲ್ಲ, ಆದರೆ ಇವನು ಅನೇಕ ಮುಸಲ್ಮಾನರ ಹತ್ಯೆ ಮಾಡಿದ್ದಾನೆ. ಮುಸಲ್ಮಾನ ಮಹಿಳೆಯರ ಮೇಲೆ ಬಲಾತ್ಕಾರ ಮಾಡಿದ್ದಾನೆ."

"ಇವನು ಯಾರೆನ್ನುವುದು ನನಗೆ ತಿಳಿಯದಾಗಿದೆ."

"ಇವನು ಇವನೇ. ನೀನು ಇವನನ್ನು ಅರ್ಥ ಮಾಡಿಕೊಳ್ಳಲಾರೆ. ಕುಳಿತುಕೋ. ನಾನು ಇವನು ಯಾರೆಂದು ಹೇಳುವೆ."

(2)

ಇವನು...

ಒಂದು ರೈಲುಗಾಡಿಯ ಡಬ್ಬಿಯೊಳಗೆ ನಾಲ್ವತ್ತು ಐವತ್ತು ಮುಸಲ್ಮಾನ ಸ್ತ್ರೀ, ಪುರುಷರು ಮತ್ತು ಮಕ್ಕಳು ತುಂಬಿದ್ದರು. ಅವರೆಲ್ಲ ನಿರಾಶ್ರಿತರಾಗಿದ್ದರು. ಕೆಲವರು ಗಾಯಾಳುಗಳಾಗಿದ್ದರು, ಕೆಲವರು ರೋಗಗ್ರಸ್ತರಾಗಿದ್ದರು ಮತ್ತು ಕೆಲವರು ಹಸಿವೆಯಿಂದ ಬಳಲುತ್ತಿದ್ದರು. ಇನ್ನು ಕೆಲವರು ಮನೆಮಾರು ಕಳೆದುಕೊಂಡಿದ್ದರಿಂದ ರೋದಿಸುತ್ತಿದ್ದರು. ಎಲ್ಲರೂ ಭಯಭೀತರಾಗಿದ್ದರು. ವಾಸ್ತವದಿಂದ ಒಂದು ಆಶಾರಹಿತ ಆಸೆಯತ್ತ ಹೊರಟಿದ್ದರು. ಹಾಗೇ ಹೊರಟಿದ್ದರು. ಕಾರಣ ಎಲ್ಲೂ ಅವರಿಗೆ ಆಶ್ರಯವಿದ್ದಿರಲಿಲ್ಲ.

ನಿರಾಶ್ರಿತರ ತಂಡದ ಸಾಮಾನುಗಳ ಸ್ಥಿತಿ ಎಂತಹದ್ದಾಗಿತ್ತೆಂದರೆ ಒಬ್ಬನ ಕಾಲಲ್ಲಿ ಚಪ್ಪಲಿ ಇದ್ದರೆ ಇನ್ನೊಂದು ಕಾಲಲ್ಲಿ ಇದ್ದಿರಲಿಲ್ಲ. ಒಬ್ಬ ಹದಿಹರೆಯದ ಯುವತಿಯ ಬಟ್ಟೆ ಎಷ್ಟು ಚಿಂದಿಯಾಗಿತ್ತೆಂದರೆ ಅದರಿಂದ ದೇಹ ಮುಚ್ಚಿಕೊಳ್ಳುವುದು ಅಸಾಧ್ಯವಾಗಿತ್ತು. ಒಬ್ಬ ಮನುಷ್ಯನಿಗೆ ಅದೆಲ್ಲಿಂದಲೋ ಒಂದು ಲಂಗ ಸಿಕ್ಕಿತ್ತು. ಅದನ್ನೇ ಅವನು ಲುಂಗಿ ಮಾಡಿಕೊಂಡು ಸೊಂಟ ಮುಚ್ಚಿಕೊಂಡಿದ್ದ. ಆದರೆ ಯಾರಿಗೂ ಇಂತಹ ವಿಷಯಗಳತ್ತ ಗಮನ ಹರಿಸುವುದಕ್ಕೆ ಸಮಯವೇ ಇದ್ದಿರಲಿಲ್ಲ. ನಾಚಿಕೆಪಟ್ಟುಕೊಳ್ಳುವ ವಿಷಯವೇ ಅದಾಗಿರಲಿಲ್ಲ, ಎಲ್ಲ ತಮ್ಮ ತಮ್ಮ ಬೆಂಕಿಯಲ್ಲಿ ಬೇಯುತ್ತಿದ್ದರು. ಎಂತಹ ದುಃಖಿಯ ಚೀತ್ಕಾರವೂ ಅವರ ಕಿವಿ ಮೇಲೆ ಬೀಳುತ್ತಿರಲಿಲ್ಲ.

ಆದರೆ ಒಂದು ಮೂಲೆಯಲ್ಲಿ ಮಾನವೀಯತೆಯ ಒಂದಷ್ಟು ಪರಿಮಳ ಘಮಘಮಿಸುತ್ತಿತ್ತು, ನವವಧುವೊಬ್ಬಳು ಗಾಯಗೊಂಡಿದ್ದ ತನ್ನ ಪತಿಯನ್ನು ಬಲು ಧೈರ್ಯ ಮತ್ತು ಚಾಣಾಕ್ಷತನದಿಂದ ರಕ್ತಪಿಪಾಸು ಕೊಲೆಗಡುಕರಿಂದ ಪಾರು ಮಾಡಿಕೊಂಡು ಬಂದಿದ್ದಳು. ಪ್ರಯಾಣಿಕರಲ್ಲಿ ಒಬ್ಬ ಡಾಕ್ಟರ್ ಸಹ ಇದ್ದ. ಗಾಯಗಳನ್ನು ನೋಡಿ ಅವನು "ಎಲ್ಲಿಂದಾದರೂ ಒಂದಷ್ಟು ಬಿಸಿ ನೀರು ಮತ್ತು ಸ್ವಚ್ಛ ಬಟ್ಟೆ ಸಿಕ್ಕರೆ ನಾನು ಗಾಯಗಳನ್ನು ಸ್ವಚ್ಛಗೊಳಿಸಿ ಪಟ್ಟಿ ಕಟ್ಟುತ್ತಿದ್ದೆ. ಹಾಗೆ ಮಾಡಿದರೆ ಯಾವುದೇ ಚಿಂತೆ ಇರುತ್ತಿರಲಿಲ್ಲ" ಎಂದ. ಆದರೆ ಜಗತ್ತಿನಲ್ಲಿ ಬಿಸಿ ನೀರು ಎಲ್ಲಿಂದ ಬರಬೇಕು? ಕುಡಿಯಲು ಸಹ ನೀರು ಸಿಗುವುದು ಕಷ್ಟಸಾಧ್ಯವಿತ್ತು. ಮದುಮಗಳ ಸೀರೆ ಸೆರಗಿನ ತುಂಡಿನಿಂದ ಅವನ ಗಾಯಕ್ಕೆ ಪಟ್ಟಿ ಕಟ್ಟಲಾಗಿತ್ತು. ಮದುಮಗಳು ಗಾಯಗೊಂಡಿದ್ದ ಅವನ ತೋಳುಗಳನ್ನು ಮಡಿಲಲ್ಲಿರಿಸಿಕೊಂಡಿದ್ದಳು. ಮೆಹಂದಿ ಹಚ್ಚಿದ ಕೈಗಳಿಂದ ಮದುಮಗನ ತಲೆಯನ್ನು ಹೇಗೆ ನೇವರಿಸುತ್ತಿದ್ದಳೆಂದರೆ ಅದರಿಂದ ಗಾಯ ಮಾಯುವುದಕ್ಕೆ ಸಹಾಯವಾದೀತೆಂದು ಅವಳು ಭಾವಿಸಿದ್ದಳು.

ರೈಲು ಚಲಿಸುತ್ತಲೇ ಇತ್ತು, ಅಷ್ಟರಲ್ಲಿ ಭೀಕರ ಸ್ಫೋಟವಾಯಿತು. ರೈಲು ನಿಂತು ಬಿಟ್ಟಿತು. ಅದು ನಿಲ್ಲುತ್ತಲೇ ಅತ್ತಿತ್ತ ಮುಖ ತಿರುವಿ ನರಳುತ್ತಿದ್ದ ಪ್ರಯಾಣಿಕರು ಗಾಬರಿಗೊಂಡ ಹುಲಿಗಳಂತೆ ಎದ್ದು ನಿಂತರು. ಕೆಲವರು ಚೀಲದೊಳಗಿಂದ ಕೆಲವರು ಹಾಸಿಗೆಯೊಳಗಿಂದ ಕೃಪಾಣ, ಖಡ್ಗ ಹೊರಗೆ ತೆಗೆದರು. ಮಿಂಚಿನಂತೆ ಪ್ರಯಾಣಿಕರ ಮೇಲೆ ದಾಳಿ ಮಾಡಿದರು. ನೋಡುನೋಡುವಷ್ಟರಲ್ಲಿ ಖಡ್ಗ ಮತ್ತು ಕೃಪಾಣಗಳಿಂದ ಹತ್ತು ಜನ ಪ್ರಯಾಣಿಕರನ್ನು ತುಂಡರಿಸಲಾಯಿತು. ಕೊನೆಯುಸಿರೆಳೆಯುವವರ ಚೀತ್ಕಾರ ಇನ್ನೂ ಜೋರಾಯಿತು. ಬದುಕಿ ಉಳಿದವರ ಸದ್ದು ಅಡಗಿದಂತಿತ್ತು, ಅವರು ಸೀಟುಗಳಡಿ ಅಡಗಿಕೊಳ್ಳುವ ವಿಫಲ ಪ್ರಯತ್ನ ಮಾಡತೊಡಗಿದರು. ಪಲಾಯನ ಮಾಡಬೇಕೆಂದರೆ ದಾರಿಯೇ ಇರಲಿಲ್ಲ, ಕಾರಣ ರೈಲಿನ ಕೆಳಗೆ ಸಹ ಸಶಸ್ತ್ರ ಹಂತಕರು ನಿಂತಿದ್ದರು.

ಆ ಹಂತಕರು ಘೋಷಣೆ ಕೂಗಿದರು. "ಹಿಂದೂ ಧರ್ಮಕ್ಕೆ ಜಯವಾಗಲಿ!"

"ಮಹಾತ್ಮಾ ಗಾಂಧಿಗೆ ಜಯವಾಗಲಿ!"

"ಮುಸಲ್ಮಾನರು ಸರ್ವನಾಶವಾಗಲಿ!"

ಪಲಾಯನ ಮಾಡಲೆತ್ನಿಸಿದ ಮಹಿಳೆಯೊಬ್ಬಳು ಕಿಟಕಿಯಿಂದ ಜಿಗಿದು ಬಿಟ್ಟಳು. ನಿಂತಿದ್ದ ಹಂತಕರು ಅವಳನ್ನು ಹಿಡಿದುಕೊಂಡರು. ಬಾಳೆಹಣ್ಣು ಸುಲಿದಂತೆ ಕೆಲವೇ ನಿಮಿಷಗಳಲ್ಲಿ ಹಂತಕರ ಅನುಭವಿ ಕೈಗಳು ಆ ಮಹಿಳೆಯನ್ನು ಮೇಲಿನಿಂದ ಕೆಳಗಿನವರೆಗೆ ಬೆತ್ತಲೆ ಮಾಡಿದವು: ಒಬ್ಬ ಪರಿಣತ ಟೈಪಿಸ್ಟ್‌ನಂತೆ ಕಾಮದ ದಾಹ ತಣಿಸಿಕೊಂಡರು. ಒಂದೆಡೆ ಬೆತ್ತಲೆ ಹೆಂಗಸರನ್ನು ಒಟ್ಟಿಗೆ ಸೇರಿಸತೊಡಗಿದರು. ಕಾರಣ ಅವರ ಮೆರವಣಿಗೆ ತೆಗೆಯಬೇಕು ಎನ್ನುವುದಾಗಿತ್ತು, ಅತ್ಯಂತ ಹೇಯವಾದ ಮೃತ್ಯುವಿನೊಂದಿಗೆ ಮುಖಾಮುಖಿಯಾಗಿಸುವುದಾಗಿತ್ತು, ಒಬ್ಬ ಬುದ್ಧಿವಂತ ಪೋರ ಅಂಕಿಮಗ್ಗಿ ಪಠಿಸುವಂತೆ ಇದನ್ನೆಲ್ಲ ಶೀಘ್ರಾತಿಶೀಘ್ರ ಮಾಡತೊಡಗಿದರು.

ನವವಧು ಇಂತಹ ದುಷ್ಕೃತ್ಯವನ್ನು ಕಣ್ಣಾರೆ ಈಗಾಗಲೇ ಒಮ್ಮೆ ನೋಡಿದ್ದಳು. ಹತ್ತಾರು ಸಲ ಇಂತಹ ದುಷ್ಕೃತ್ಯಕ್ಕೆ ಗುರಿಯಾದ ಮಹಿಳೆಯರ ಬಾಯಿಂದ ಆ ಕುರಿತು ಕೇಳಿದ್ದಳು. ಅದರ ಆರಂಭ ಹೇಗಾಗುತ್ತದೆ ಮತ್ತು ಅ ಮಿತಿ ಏನು ಎನ್ನುವುದನ್ನು ಅವಳು ಚೆನ್ನಾಗಿ ತಿಳಿದಿದ್ ಒಂದು ಕ್ಷಣದಲ್ಲೇ ಪರಿಸ್ಥಿತಿಯನ್ನು ಗ್ರಹಿಸಿಕೊಂಡಳು ಹ ಏನು ಮಾಡಬೇಕೆನ್ನುವ ಕುರಿತು ತೀರ್ಮಾನ ಮಾಡಿದ ಅವಳು ತನ್ನ ದುಪಟ್ಟಾ ಸುರುಳಿ ಸುತ್ತಿ ದಿಂಬು ಮಾಡಿ ಮತ್ತು ಗಂಡನ ಗಾಯಗೊಂಡಿದ್ದ ತೋಳುಗಳ ಇರಿಸಿದಳು. ನಂತರ ಒಳಗಿನ ಮತ್ತು ಹೊರಗಿನ ಹಂ ಮೇಲೆ ದೃಷ್ಟಿ ಬೀರಿದಳು. ಮುಂದೆ ನಿರ್ಭೀತಳಾಗಿ ಹಂತಕನ ಬಳಿ ನಡೆದಳು. "ಮಹಾಶಯ, ನ ನನ್ನದೊಂದು ವಿನಂತಿ..." ಎಂದಳು.

"ವಿನಂತಿ! ನಾವು ನಿನ್ನನ್ನು ಕೂಡು ರಸ್ ಹೆಣ್ಣುನಾಯಿಯನ್ನಾಗಿಸಿ ಬಿಡಲಿದ್ದೇವೆ. ಅಷ್ಟಕ್ಕೂ ನಮ್ಮ ತಾಯಂದಿರು ಮತ್ತು ಸೋದರಿಯರ ಸೇಡು ಯ ಮೇಲೆ ತೀರಿಸಿಕೊಳ್ಳಬೇಕು? ಆಹಾ, ಮುಸಲ್ಮಾನ್ ಪ ಆಹಾ, ಈ ಉಬ್ಬು- ತಗ್ಗು, ಈ ಯೌವನ!"

ಹಂತಕರು ತಮ್ಮ ಖಡ್ಗದ ತುದಿಯನ್ನು ಮದುವ ಎದೆಯಲ್ಲಿ ಮೆಲ್ಲಗೆ ನೆಟ್ಟರು. ಅದರಿಂದಾಗಿ ಕುತ ಮೇಲೆ ರಕ್ತ ಚಿಮ್ಮಿತು. ಅವಳು ಮೆಲ್ಲಗೆ ಚೀರಿಕೊಂ ಆದರೆ ಓಡಿಹೋಗಲಿಲ್ಲ, ಅವಳು ಅತ್ತಿತ್ತ ನೋಡಿದ ಆ ಕಡೆ ಒಬ್ಬ ಮನುಷ್ಯ ನಿಂತಿದ್ದ. ಮದುಮಗಳು ಅ ನೋಡಿ "ಮಹಾಶಯರೆ, ನೀವೊಬ್ಬರಾದರೂ ಮಹಿಳೆಯ ಪ್ರಾರ್ಥನೆ ಆಲಿಸಿರಿ" ಎಂದಳು.

ಅವನು ಕಡಕ್ ಆಗಿ "ನಿನ್ನ ಮುಸಲ್ಮಾನ್ ಸೋದ ಯಾವುದಾದರೂ ಹಿಂದೂ ಮಹಿಳೆಯ ಪ್ರಾ ಕೇಳಿದ್ದರೆ?" ಎಂದ.

ಮದುಮಗಳು ನಮ್ರವಾಗಿ ಕೈ ಮುಗಿಯುತ್ತಾ ಪ್ರಾರ್ಥನೆ ಇಷ್ಟೇ ನೀವು ನನ್ನನ್ನೇ - ತನ್ನ ಮದುಮ ಸನ್ನೆ ಮಾಡುತ್ತಾ - ಇವರ ಮುಂದೆ ಈಗಲೇ ಕೊ ಬಿಡಬೇಕು. ನಾನು ನಿಮಗೆ ಋಣಿಯಾಗಿ ಅಲ್ಲಾಹ್‌ನಿಗಾಗಿ.. ಈಶ್ವರನಿಗಾಗಿ" ಎಂದಳು.

ಅವನು ಮದುಮಗಳ ಶೌರ್ಯದ ಕತೆ ಕೇಳಿದ್ದ. ಪ್ರಾ ಈ ಕಾರಣಕ್ಕಾಗಿ ಇಲ್ಲವೆ ಅವಳ ಗೋಗರೆದ್ದರಿಂ ಇಲ್ಲವೆ ಬೇರೆ ಯಾವುದೇ ಕಾರಣಕ್ಕಾಗಿಯಾದರೂ ಅ ಬೆವರಿದ. ಅವನು ಮದುಮಗಳ ಬಗ್ಗೆ ದಯೆ ತೋ ಅವನು ಮದುಮಗಳ ಮುಂಗೈ ಹಿಡಿದುಕೊಂಡು ಮದುಮಗನ ಹತ್ತಿರ ಒಂದೇ ಎಳೆತದಲ್ಲಿ ತಂದು ನಿಲ್ "ಇಗೋ ನಿನ್ನ ಖುಷಿಗಾಗಿ..." ಎಂದ.

ಅವನು ಮದುಮಗಳ ಕುತ್ತಿಗೆ ಮೇಲೆ ಬಲ ಪ್ರಹಾರ ಮಾಡಿದ. ಮದುಮಗಳು ಒಮ್ಮೆ ಚೀರಿದ ತನ್ನ ಮದುಮಗನ ಎದುರು ಕುಸಿದುಬಿದ್ದಳು. ನಂದಿ ಹೋಗಲಿದ್ದ ಜೀವನದ ಅಂತಿಮ ಹೊಳಪು ಕಣ್ಣಲ್ಲಿ ಸೀತೆಯ ಪ್ರೀತಿಯಾಗಿ ಮೂಡಿತ್ತು. ಅವ ಕಣ್ಣುಗಳಿಂದ ತನ್ನ ಪತಿಯತ್ತ ಒಮ್ಮೆ ದೃಷ್ಟಿ ಬೀರಿ ಮತ್ತೆ ಹಿಂದಿರುಗಿ ಆ ಹಂತಕನನ್ನು ನೋಡಿದಳು.

ಮದುಮಗಳು ಆ ಹಂತಕನನ್ನು ನೋಡಿದಾಗ ಪ್ರೀತಿಯ ತೀವ್ರತೆ ಕೃತಜ್ಞತೆಯ ಪರಿಮಳ ಪರಿವರ್ತನೆಗೊಂಡಿತ್ತು.

ಅದೆಷ್ಟು ಕೃತಜ್ಞವಾಗಿದ್ದವು ಆ ಕಣ್ಣುಗಳು! ಅವಳು "ಕರುಣಾಳುವೆ ಒಬ್ಬ ಅಸಹಾಯಕ ಹೆಣ್ಣಿಗೆ ಮ ಉಪಕಾರಕ್ಕಾಗಿ ನನ್ನ ರೋಮರೋಮವೂ ಕೃತಜ್ಞವಾಗಿದೆ. ಆದರೆ ಬಾಯಿಂದ ಕೃತ ವ್ಯಕ್ತಪಡಿಸಲಾಗಲಿಲ್ಲ ಎಂದು ವಿಷಾದಿಸುತ್ತೇನೆ. ಏನೇ ನಾನು ಅವರ ಪ್ರಿಯಳಾಗಿ ಹೋಗುತ್ತಿದ್ದೇನೆ. ದಯ ನನ್ನನ್ನು ನಂಬಿರಿ. ಬರುವೆ" ಎಂದಳು.

ಮದುಮಗಳು ತನ್ನ ನಿರ್ಜೀವವಾಗತೊಡಗಿದ್ದ ಕೈ ತನ್ನ ಮದುಮಗನ ಗಾಯದ ಮೇಲೆ ಇರಿಸಿದಳು. ಬಿಟ್ಟಿದ್ದ ಕಣ್ಣುಗಳನ್ನು ಅತ್ತ ತಿರುಗಿಸಿದಳು. ಒಂದು ಬಿಕ್ಕಿದವಳೇ ಕೊನೆಯುಸಿರೆಳೆದಳು.

(3)

ಪ್ರತಿಬಿಂಬ...

ಕತೆ ಹೇಳುವವನು ಕತೆ ಮುಂದುವರಿಸಿದ.

ಒಂದು ಹಳೆಯ ಪರಂಪರೆಯ ಮಾತಿದು. ಗಲಭೆ ಮೊದಲು ಅವನು ತನ್ನ ಖಡ್ಗ ಸ್ವಚ್ಛಗೊಳಿಸುತ್ತಿದ್ದಾಗ ಅ ನೀರಿನ ತಳದಲ್ಲಿ ಒಂದು ಪ್ರತಿಬಿಂಬ ಕಾಣು ಅದರೊಂದಿಗೆ ಅವನು ಮುಖಾಮುಖಿಯಾಗುತ್ತಲೇ "ನೋಡು, ನೀರಿನಲ್ಲಿನ ಈ ಖಡ್ಗವನ್ನು ಯಾ ದುರ್ಬಲ ವ್ಯಕ್ತಿ ಮೇಲೆ ಪ್ರಯೋಗಿಸಬೇಡ" ಎನ್

ಅದು "ನಾನು ಹೀಗೆ ಎಂದೂ ಮಾಡಲಾರೆ ನನ್ನ ಮನಸ್ಸು ಹೇಳುತ್ತಿದೆ" ಎಂದು ಉತ್ತರಿಸುತ್ತಿ

ಅದೆಷ್ಟು ಸಲ ನಾನು ಈ ವಚನ ಪುನರಾವರ್ತಿಸಿದ್ದೆನೋ ಏನೋ. ನಾನು ಈ ವ ಬಹಳ ಸಮೀಪವಾಗಿದ್ದೆ ಆ ಮದುಮಗಳ ಎದೆಯೊ ಖಡ್ಗ ಹೊರಬಂದ ಮೇಲೆ ಮದುಮಗಳ ಋಣಿಯ ಕಣ್ಣುಗಳೊಂದಿಗೆ ಆ ಪ್ರತಿಬಿಂಬವೂ ಮುಖಾ ಯಾಯಿತು. ಅವಳು ಪ್ರತಿಬಿಂಬದಲ್ಲಿ ಒಂದಾಗಿ ಬ ದಿನಗಳು ಉರುಳುತ್ತಾ ಹೋದವು. ಆದರೆ ಆ ಕಣ ಅದೇ ರೀತಿ ಅಸಹಾಯಕವಾಗಿ ಬಿಟ್ಟವು. ಅವನು ಮುಂಗೈ ನೋಡಿದಾಗಲ್ಲ ಋಣಿಯಾಗಿದ್ದ ಆ ಕಣ

...ತ್ತಿದ್ದವು. ಕಣ್ಣು ಮುಚ್ಚಿಕೊಂಡಾಗ ನನ್ನ ಆತ್ಮದ ...ಯಲ್ಲಿ ಆ ಕಣ್ಣುಗಳು ಮೂಡುತ್ತಿದ್ದವು - ...ವಗಳು ಮಳೆಗರೆದು ಹೋದಮೇಲೆ ಬಿಸಿಲು ... ತೊಮ್ಮುವಂತೆ. ಎಂತಹ ಬಿಸಿಲೆಂದರೆ ಪ್ರತಿಯೊಂದು ...ಯನ್ನೂ ಅದು ಬೇಧಿಸುತ್ತಿತ್ತು - ಜಾರ್ಜೆಟ್ ...ಳಗಿನ ಸುಂದರ ಶರೀರದಂತೆ. ಇದೇ ಬಿಸಿಲಿನಂತೆ ...ಣ್ಣುಗಳು ಆ ಪ್ರತಿಬಿಂಬದ ಮನಸ್ಸಿನಲ್ಲಿ ತೆರೆದೇ ...ವು.

ಆ ಪರೋಪಕಾರಿ ಕಣ್ಣುಗಳು!

ಆ ಋಣಿಯಾಗಿದ್ದ ಕಣ್ಣುಗಳು!

...ವಳು ಏನು ಹೇಳುತ್ತಿದ್ದಳು, ಯಾವ ಸಂದೇಶ ...ತ್ತಿದ್ದಳು ಎನ್ನುವುದು ಆ ಪ್ರತಿಬಿಂಬಕ್ಕೆ ...ಗುತ್ತಿರಲಿಲ್ಲ. ಆದರೆ ಏನಾದರೊಂದು ಸಂದೇಶ ... ಕೊಡುತ್ತಿದ್ದವು ಆ ಕಣ್ಣುಗಳು. ನೋವುಂಟು ...ವಲ್ಲಿ ಮಿಠಾಯಿಗಳ ಕಂಟಿಯಾದರೆ ವಾಸ್ತವದಲ್ಲಿ ...ಷ ಗುಂಡುಗಳು. ಮುಟ್ಟಿದರೆ ಹಿಮದ ಹರಳು. ...ಲ್ಲಿ ಇಳಿದರೆ ವಿಷದ ಮಾತ್ರೆ.

...ರೂಪಕನ ದೃಷ್ಟಿಯಲ್ಲಿ ಎಲ್ಲ ಶಾಂತಿ ಮಾಯವಾಗಿತ್ತು. ಎಂತಹ ಬರ್ಬರತೆ ಇತ್ತೆಂದರೆ ಅವನ ...ಭೂತಿಗಾಗಿ ನಾನು ನನ್ನ ತಲೆ ಒಡೆದುಕೊಳ್ಳಬೇಕಿತ್ತು. ...ರೂಪಕ ಸ್ವಲ್ಪ ಹೊತ್ತು ಮೌನವಾದ. ಮತ್ತೆ ಆಕಾಶದತ್ತ ...ತ್ತಿ ಹೇಳತೊಡಗಿದ:

ಆ ಋಣಿಯಾದ ಕಣ್ಣುಗಳು.

...ನು ಆಕಾಶದತ್ತ ನೋಡಿದಾಗ ಮೋಡಗಳು ...ದ್ದವು. ಒಂದೂ ನಕ್ಷತ್ರದ ಸುಳಿವಿರಲಿಲ್ಲ.

...ರೂಪಕ ನಿಟ್ಟುಸಿರುಬಿಟ್ಟು "ಮತ್ತೆ ಒಂದು ವಿಚಿತ್ರ ...ದ ಸಂಭವಿಸಿತು. ಒಂದು ರಾತ್ರಿ ನಾನು ಅವನ ...ಇದ್ದಕ್ಕಿದ್ದಂತೆ ಹಲ್ಲೆ ಮಾಡಿದೆ. ಅವನು ಆತ್ಮ ...ಮುಂದಾದೊಡನೆ ಇಬ್ಬರ ನಡುವೆ ಭಾರಿ ಕುಸ್ತಿ ...ತು. ಕೊನೆಗೆ ಬೆಳಕು ಹರಿಯುವಷ್ಟೊತ್ತಿಗೆ ನಾನು ... ಪೆಟ್ಟು ಹಾಕಿ ಮಣ್ಣು ಮುಕ್ಕಿಸಿದೆ. ಅವನನ್ನು ನನ್ನ ... ತೆಗೆದುಕೊಂಡೆ. ಅವನು ಅರಚಿಕೊಳ್ಳುತ್ತಿದ್ದ, ...ಕೊಳ್ಳುತ್ತಿದ್ದ, ವಿನಂತಿಸಿಕೊಳ್ಳುತ್ತಿದ್ದ, ಅಂಗಲಾಚುತ್ತಿದ್ದ. ...ನಾನು ಬಿಡಲಿಲ್ಲ. ನಾನು ಅವನಿಗೆ ಏನು ಮಾಡಿದೆ ..." ಎಂದವನೇ ಬಟ್ಟೆಯೊಳಗಿಂದ ಖಡ್ಗ ತೆಗೆದ. ...ಅವನಿಗೆ ನಾನು ದೊಡ್ಡ ಉಪಕಾರ ಮಾಡುವೆ. ...ದರೆ ಅವನ ದೇಹದಲ್ಲಿ ತೂತು ಮಾಡಿ ಅದರಲ್ಲಿ ...ದರವಾದ ಋಣಿಯಾದ ಕಣ್ಣುಗಳನ್ನು ರತ್ನಗಳಂತೆ ...ಸುತ್ತೇನೆ" ಎಂದು ನನಗೆ ಹೇಳಿದ.

...ಷ್ಟು ಹೇಳಿ ನಿರೂಪಕ ವಿಷಪೂರಿತ ನಗೆ ನಕ್ಕು ...ತು ಇದಿಷ್ಟೇ ಕತೆ" ಎಂದು ಹೇಳಿದ. ಕತೆಯ ...ಡ ಒಂದೂ ಗೊತ್ತಾಗಲಿಲ್ಲ. ನಂತರ ಒಂದಿಷ್ಟು ...ನೆ ಮಾಡಿ ನಾನು ಕಡಕ್ ಆಗಿ ಕೇಳಿದೆ "ಈ ...ನ್ನು ನೀನು ಅದೆಲ್ಲಿ ಬಚ್ಚಿಟ್ಟಿರುವೆ ಹೇಳು. ನೀನೇನೇ ...ರೂ ನೀನು ಮಾತ್ರ ಮುಸಲ್ಮಾನನೇ. ಒಬ್ಬ ಶೂರ ...ವನ್ನು ನಿರ್ದಯವಾಗಿ ಕೊಲ್ಲುತ್ತಿರುವೆ" ಎಂದು ...

...ವನು ಸಹಜವಾಗಿ ನನ್ನನ್ನು ನೋಡಿ "ನೀನು ... ನೋಡಬಯಸುವೆಯಾ? ಇಗೋ, ಈ ಟಾರ್ಚ್ ...ಕೋ. ನಾನು ಹೇಳಿದಾಗ ಟಾರ್ಚ್ ಹಚ್ಚು" ಎಂದ. ... ಮನುಷ್ಯ ಒಂದರ ಮೇಲೊಂದರಂತೆ ಅದೆಷ್ಟು ...ತೊಟ್ಟಿದ್ದನೋ. ಅವುಗಳನ್ನೆಲ್ಲ ನಿಧಾನವಾಗಿ ಕಳಚುತ್ತಾ ... ಟಾರ್ಚ್ ಹಚ್ಚು" ಎಂದ.

...ನು ಟಾರ್ಚ್ ಹಚ್ಚಿ ನೋಡಿದೆ. ಅವನ ಎದೆ ...ತೋಳುಗಳು ಗಾಯಗಳಿಂದ ಛಿದ್ರವಾಗಿದ್ದವು. ಕೆಲವು ...ಗಳು ಮಾಯ್ದಿದ್ದವು ಹಾಗೂ ಇನ್ನೂ ಕೆಲವು ...ದ್ದವು. ಕೆಲವಂತೂ ಅದೆಷ್ಟು ಹಸಿಯಾಗಿದ್ದವೆಂದರೆ ...ಆಗಿ ಕೊಳೆತುಬಿಟ್ಟಿದ್ದವು. ಅವುಗಳಲ್ಲಿ ಹುಳುಗಳು ...

"...ಗೋ ನೋಡು, ಇವೇ ಆ ಸುಂದರ ಕಣ್ಣುಗಳು." ...ಸಪಿಟ್ಟು ನೋಡಿದ ಮೇಲೆ ಆ ಮನುಷ್ಯ ಖಡ್ಗದ ...ಂದ ನೂರಾರು ಕಣ್ಣುಗಳನ್ನು ನಿರ್ಮಿಸಿದ್ದ ಎನ್ನುವುದು ...ಯಿತು.

...ಮನುಷ್ಯ ಕೀವು ಸುರಿಸುತ್ತಿದ್ದ ಗಾಯವನ್ನು ...ದ ಸವರುತ್ತ "ಇವು ಋಣಿಯಾಗಿದ್ದ ಸುಂದರ ..." ಎಂದ.

...ನಿಂದ ಗಾಯ ಹೇಗೆ ಸೋರತೊಡಗಿತೆಂದರೆ ...ದೋ ವೇಶ್ಯೆಯ ಪೀಕದಾನಿ ...ಯಾಯಿತೇನೋ ಎನ್ನುವಂತಿತ್ತು, ಆದರೆ ಅವನ ...ಮತ್ತೆ ಅಭಿಮಾನಪಡುವಂತಹ ಶಾಂತಿ ನೆಲೆಸಿತ್ತು, ...ಕೆ ನನಗೆ ಒಂದು ಒಗಟಾಗಿತ್ತು, ಅದನ್ನು ...ವುದು ಮನಸ್ಸಿಗೆ ಹಿತಕರವೆನಿಸಲಿಲ್ಲ, ನಾನು "ಸ್ವತಃ ...ನೀನು?" ಎಂದು ಕೇಳಿದೆ.

"...ನಾನು... ನಾನು ಅದೇ ಪ್ರತಿಬಿಂಬ."

...ತಿ, ಶೂರ ಆದರೆ ಅತ್ಯಾಚಾರ ಸಹಿಸಿಕೊಳ್ಳುವವ ...ಗಿನ ಸಾವಿರಾರು ಪಟ್ಟು ದೊಡ್ಡವನಾಗಿರುತ್ತಾನೆ ... ಗೊತ್ತಾಯಿತು.

ಮೂಲ: ಹಯಾತ್ ಉಲ್ಲಾಹ್ ಅನ್ಸಾರಿ

...: ಹಸನ್ ನಯೀಂ ಸುರಕೋಡ

ಭಾವಪೂರ್ಣ ತತ್ತ್ವನಿಷ್ಠುರಿ ನೀಲಾಂಬಿಕೆ

12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಫಲವಾಗಿ ಮಹಿಳೆಯರು ಪುರುಷರ ಜೊತೆ ಸಮಾನ ಸ್ಥಾನ ಪಡೆದರು. ಅವರಲ್ಲಿ ಅನೇಕರು ಶರಣೆಯರಾದರು. ವಚನಗಳನ್ನೂ ಬರೆದು ಅಮರರಾದರು. ಅಂಥ ಶರಣೆಯರಲ್ಲಿ ಬಸವಣ್ಣನವರ ಪತ್ನಿ ನೀಲಮ್ಮನವರ ವ್ಯಕ್ತಿತ್ವ ವಿಶಿಷ್ಟವಾಗಿದೆ. ನೀಲಮ್ಮ, ನೀಲಾಂಬಿಕೆ ಮತ್ತು ನೀಲಲೋಚನೆ ಎಂಬ ಹೆಸರುಗಳಿಂದ ನೀಲಮ್ಮ ಪ್ರಸಿದ್ಧಳಾಗಿದ್ದಾಳೆ.

ಬಿಜ್ಜಳನ ಮಂತ್ರಿ ಬಲದೇವ ಮತ್ತು ದಣ್ಣಾಯಕ ಸಿದ್ಧರಸರು ಬಸವಣ್ಣನವರ ತಾಯಿ ಮಾದಲಾಂಬಿಕೆಯ ಸಹೋದರರು. ಬಲದೇವರ ಮಗಳು ಗಂಗಾಂಬಿಕೆ ಮತ್ತು ಸಿದ್ಧರಸರ ಮಗಳು ನೀಲಾಂಬಿಕೆ ಒಡಹುಟ್ಟಿದವರಂತೆ ಬೆಳೆದವರು. ಸಿದ್ಧರಸರ ಪತ್ನಿ ಪದ್ಮಗಂಧಿ. ಬಿಜ್ಜಳನ ತಮ್ಮ ಕರ್ಣದೇವ ಜನಿಸಿದ ಸಂದರ್ಭದಲ್ಲಿ ತಂದೆ ಪೆರ್ಮಾಡಿ ತೀರಿಕೊಂಡ. ಬಿಜ್ಜಳನ ತಾಯಿ ಸತಿಹೋದಳು. ಆಗ ಪದ್ಮಗಂಧಿ ತನ್ನ ಕೂಸು ನೀಲಾಂಬಿಕೆಗೆ ಮತ್ತು ಕರ್ಣದೇವನಿಗೆ ಜೊತೆಯಾಗಿಯೆ ಮೊಲೆಯುಣಿಸಿ ಬೆಳೆಸಿದಳು. ಪದ್ಮಗಂಧಿ ಮತ್ತು ಸಿದ್ಧರಸರು ನಿಧನರಾದ ನಂತರ ಬಿಜ್ಜಳ ನೀಲಾಂಬಿಕೆಯನ್ನು ಅರಮನೆಗೆ ಕರೆತಂದು ಬೆಳೆಸಿದ. ಆಕೆಯನ್ನು ಬಿಜ್ಜಳ ತನ್ನ ತಂಗಿಯಂತೆಯೇ ನೋಡಿಕೊಂಡ. ನೀಲಲೋಚನೆ ಸಿದ್ಧರಸನ ಮಗಳು ಮತ್ತು ಬಿಜ್ಜಳನ ಸಾಕುತಂಗಿ ಎಂದು ಸಿಂಗಿರಾಜನು 'ಅಮಲ ಬಸವ ಚಾರಿತ್ರ'ದಲ್ಲಿ ಸೂಚಿಸುತ್ತಾನೆ.



ಬಲದೇವರ ಮಗಳು ಗಂಗಾಂಬಿಕೆಯೊಂದಿಗೆ ಬಸವಣ್ಣನವರ ಮದುವೆಯಾಯಿತು. ನಂತರ ಬಸವಣ್ಣನವರು ನೀಲಾಂಬಿಕೆಯನ್ನು ಮದುವೆಯಾದರು. ಈ ಎರಡನೆಯ ಮದುವೆಗೆ ವಿವಿಧ ಕಾರಣಗಳನ್ನು ಕಲ್ಪಿಸಬಹುದು. ಬಸವಣ್ಣನವರ ದಿವ್ಯ ಪ್ರತಿಭೆಯನ್ನು ಗುರುತಿಸಿದ ಬಿಜ್ಜಳ ತನ್ನ ರಾಜ್ಯದ ಪ್ರಧಾನಿಯಾಗಿ ಮಾಡುವ ಮೊದಲು ಅವರನ್ನು ತನ್ನ ರಕ್ತಸಂಬಂಧಿಯಾಗಿಸಿಕೊಳ್ಳುವುದು ಅನಿವಾರ್ಯ ಎನಿಸಿರಬೇಕು. ಅವರನ್ನು ತನ್ನ ಕರುಳಬಳ್ಳಿಯ ಸಂಬಂಧಿಕರಂತೆ ಮಾಡಿಕೊಳ್ಳುವ ಉದ್ದೇಶದಿಂದ ನೀಲಾಂಬಿಕೆಯನ್ನು ಮದುವೆ ಮಾಡಿ ಕೊಟ್ಟಿರಬಹುದು. ಗಂಗಾಂಬಿಕೆ ಮತ್ತು ನೀಲಾಂಬಿಕೆ ಎರಡು ದೇಹ ಒಂದೇ ಆತ್ಮದಂತೆ ಇದ್ದುದರಿಂದ ನೀಲಾಂಬಿಕೆ ಬಸವಣ್ಣನವರ ಎರಡನೇ ಪತ್ನಿಯಾಗಿ ಬರುವುದರಲ್ಲಿ ಯಾವುದೇ ಸಮಸ್ಯೆಗಳು ಉಂಟಾಗದಿರಬಹುದು. ನೀಲಾಂಬಿಕೆ ಬಿಜ್ಜಳನ ಅರಮನೆಯಲ್ಲೇ ಬೆಳೆದಳು. ಅರಮನೆಯ ವಾತಾವರಣದಲ್ಲಿ ಯೋಗ, ತತ್ತ್ವಜ್ಞಾನ, ಸಂಗೀತ, ಕಲೆ, ಸಾಹಿತ್ಯ ಯುದ್ಧಕಲೆ, ರಾಜನೀತಿ ಮುಂತಾದವುಗಳಲ್ಲಿ ಪಾರಂಗತಳಾದ ನೀಲಾಂಬಿಕೆಯನ್ನು ಬಸವಣ್ಣನವರು ಎರಡನೆಯ ಪತ್ನಿಯಾಗಿ ಸ್ವೀಕರಿಸಿರಬಹುದು. ಸರ್ವಸಮತ್ವದ ಮಾನವಧರ್ಮ ದ್ರಷ್ಟಾರ ಬಸವಣ್ಣನವರ ಮಹಾಕ್ರಾಂತಿಯ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿದ್ದ ನೀಲಾಂಬಿಕೆ, ಅವರ ಕನಸನ್ನು ನನಸಾಗಿಸುವುದರ ಮೂಲಕ ಸಹಸ್ರ ಸಹಸ್ರ ಕಾಯಕಜೀವಿಗಳ ಘನತೆಯನ್ನು ಎತ್ತಿಹಿಡಿದು ಎಲ್ಲ ವಿಧವಾದ ಶೋಷಣೆಗಳಿಂದ ಮುಕ್ತವಾದ ಸಮಾಜ ನಿರ್ಮಾಣದ ಉದ್ದೇಶ ಹೊಂದಿದ್ದರು. ಈ ಮಹೋನ್ನತ ಕಾರಣದಿಂದಲೇ ನೀಲಾಂಬಿಕೆಯು ಬಸವಣ್ಣನವರ ವಿಚಾರ ಪತ್ನಿಯಾಗಿ ಬದುಕುತ್ತ ಸರ್ವಶರಣರ ಯೋಗಕ್ಷೇಮ ನೋಡಿಕೊಳ್ಳುವದರೊಂದಿಗೆ ಅಪ್ರತಿಮ ಸಾಧನೆಗೈದರು. ಹೀಗೆ ನೀಲಾಂಬಿಕೆಯ ಘನವ್ಯಕ್ತಿತ್ವವನ್ನು ಅರಿಯುವುದು ಹೆಚ್ಚು ಯೋಗ್ಯವಾಗಿದೆ.

ತಬ್ಬಲಿಯಾದ ನಂತರ ಬಿಜ್ಜಳನ ತಂಗಿಯಂತೆ ಸಲುಗೆಯಿಂದ ಅರಮನೆಯಲ್ಲಿ ಬೆಳೆದ ನೀಲಾಂಬಿಕೆ ಬಿಜ್ಜಳನ ಜೊತೆ ವಾಗ್ವಾದ ಮಾಡುವ ಹಕ್ಕನ್ನು ಕೂಡ ಹೊಂದಿದವಳಾಗಿದ್ದಳು. ಬಸವಣ್ಣ ಮತ್ತು ಬಿಜ್ಜಳನ ಮಧ್ಯೆ ಬ್ರಾಹ್ಮಣ ಮಂತ್ರಿಗಳು ಭಿನ್ನಾಭಿಪ್ರಾಯ ಮೂಡಿಸುವಲ್ಲಿ ತಲ್ಲೀನರಾದಾಗ ನೀಲಮ್ಮ ಬಿಜ್ಜಳನ ಸಂಶಯ ದೂರು ಮಾಡಿ ಬಸವಣ್ಣನವರ ಲೋಕಹಿತ ಕಾರ್ಯಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಿದ್ದಳು. ವಚನಕಾರರ ಚಳವಳಿ ಮತ್ತು ಬಿಜ್ಜಳನ ರಾಜಸತ್ತೆಯ ಮಧ್ಯೆ ನೀಲಾಂಬಿಕೆಯು ಮಹತ್ವದ ಸಂಯಮಶೀಲ ಪಾತ್ರ ವಹಿಸಿದ್ದರಿಂದಲೇ ಪಟ್ಟಭದ್ರ ಪುರೋಹಿತಶಾಹಿ ಶಕ್ತಿಗಳ ಮತ್ತು ವಚನಕಾರರ ಮಧ್ಯದ ಘರ್ಷಣೆಯ ಪ್ರಸಂಗಗಳು ಮುಂದೂಡುವಂಥ ಪರಿಸ್ಥಿತಿಗಳು ನಿರ್ಮಾಣವಾಗಲು ಸಾಧ್ಯವಾಯಿತು. ಶರಣ ಚಳವಳಿಯ ಪ್ರಮುಖರಲ್ಲಿ ಒಬ್ಬಳಾಗಿದ್ದ ನೀಲಾಂಬಿಕೆ, ಬಿಜ್ಜಳನ 'ತಂಗಿ' ಎಂಬ ಹಕ್ಕಿನಿಂದಾಗಿ ಅರಮನೆಯ ಮೇಲೂ ಭಾವನಾತ್ಮಕ ಹಿಡಿತ ಸಾಧಿಸಿದ್ದು ಆಕೆಯ ಘನತೆಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಬಸವಣ್ಣನವರ ಭಕ್ತಿ ಮಾರ್ಗಕ್ಕೆ ನೀಲಮ್ಮ ಆಕರ್ಷಿತಳಾದಳು. ನಂತರ ಅವರ ವಿಚಾರಪತ್ನಿಯಾಗಿ ಎಲ್ಲ ರೀತಿಯಿಂದ ನವಸಮಾಜ ನಿರ್ಮಾಣದಲ್ಲಿ ಪಾಲ್ಗೊಂಡಳು. ನವಸಮಾಜ ಎಂದರೆ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದ ಸಮಾಜ. ಇದೊಂದು ಅತ್ಯುನ್ನತವಾದ ಸಮಾನತೆಯ ಸಮಾಜವಾಗಿದೆ. ಇಂಥ ಸುಂದರ ಸಮಾಜ ರಚನೆ ಎಲ್ಲಿಯೂ ಆಗಿದ್ದಿಲ್ಲ ಎಂಬುದು ಗಮನಾರ್ಹ.

ಮಹಾಮನೆಯ ದಾಸೋಹದ ಜವಾಬ್ದಾರಿಯನ್ನೂ ನೀಲಾಂಬಿಕೆ ಹೊತ್ತಿದ್ದಳು. ಪ್ರತಿ ಜೀವಿಯಲ್ಲೂ ದೇವರನ್ನು ಕಾಣುವಂಥ ಉನ್ನತ ಮಟ್ಟಕ್ಕೆ ನೀಲಾಂಬಿಕೆ ಬೆಳೆದಳು.

ಅನುಭಾವಿ ನೀಲಮ್ಮನ 288 ವಚನಗಳು ಸಿಕ್ಕಿವೆ. 'ಸಂಗಯ್ಯ' ಎಂಬ ವಚನಾಂಕಿತದಿಂದ ನೀಲಮ್ಮ ವಚನಗಳನ್ನು ಬರೆದಿದ್ದಾಳೆ. ಇಲ್ಲಿಯವರೆಗೆ 35 ವಚನಕಾರ್ತಿಯರ ವಚನಗಳು ಸಿಕ್ಕಿವೆ. ಅವರಲ್ಲಿ ಅಕ್ಕ ಮಹಾದೇವಿಯ ನಂತರ ಅತಿಹೆಚ್ಚು ವಚನಗಳನ್ನು ಬರೆದವಳೆಂದರೆ ನೀಲಾಂಬಿಕೆ ಎಂಬುದು ತಿಳಿದುಬರುತ್ತದೆ.

ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯಿಂದಾಗಿ ಕಲ್ಯಾಣದ ಸನಾತನವಾದಿಗಳು ಶರಣರ ಮೇಲೆ ಕಿಡಿ ಕಾರಿದರು. ಬಸವಣ್ಣನವರು ಮಂತ್ರಿ ಪದವಿ ಬಿಟ್ಟು ಕೂಡಲಸಂಗಮಕ್ಕೆ ಹೋಗಬೇಕಾಯಿತು. ಸನಾತನವಾದಿಗಳಿಂದಾಗಿ ಕಲ್ಯಾಣದಲ್ಲಿ ಭಾರಿ ಕೋಲಾಹಲ ಉಂಟಾಯಿತು. ಶರಣರ ಹೊಸ ಸಮಾಜ ವ್ಯವಸ್ಥೆಯ ವಿರೋಧಿಗಳು ಶರಣರ ವಚನಕಟ್ಟುಗಳನ್ನು ಸುಟ್ಟರು. ಶರಣರ ಮೇಲೆ ಹಲ್ಲೆ ಮಾಡಿದರು. ಈ ಹಲ್ಲೆಯಿಂದಾಗಿ ಅನೇಕ ಶರಣರು ಹುತಾತ್ಮರಾದರು. ಗಂಗಾಂಬಿಕೆಯವರು ಅಕ್ಕನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ, ಕಿನ್ನರಿ ಬ್ರಹ್ಮಯ್ಯ, ಡೋಹರ ಕಕ್ಕಯ್ಯ ಮುಂತಾದ ಶರಣರ ಜೊತೆ ಉಳವಿಯ ಕಡೆಗೆ ಹೊರಟಾಗ ಅಳಿದುಳಿದ ಶರಣರ ರಕ್ಷಣೆಗಾಗಿ ನೀಲಮ್ಮನವರು ಕಲ್ಯಾಣದಲ್ಲೇ ಉಳಿದದ್ದು ಅವರ ಯೋಜನಾಬದ್ಧ ಮುಂದಾಲೋಚನೆ ಮತ್ತು ಶೌರ್ಯದ ಪ್ರತೀಕವಾಗಿದೆ.

ಗಂಗಾಂಬಿಕೆಯವರು ಕಾದರವಳ್ಳಿಯ ಬಳಿ, ಮಡಿವಾಳ ಮಾಚಿದೇವರು ಕಾರಿಮನೆಯಲ್ಲಿ, ಡೋಹರ ಕಕ್ಕಯ್ಯನವರು ಕಕ್ಕೇರಿಯಲ್ಲಿ ಬಿಜ್ಜಳನ ಸೈನ್ಯದ ಜೊತೆ ಹೋರಾಡುತ್ತ ಲಿಂಗೈಕ್ಯರಾದ ಕಾರಣ ಉಳವಿ ತಲುಪಲಿಕ್ಕಾಗಲಿಲ್ಲ.

ಕಲ್ಯಾಣದಲ್ಲಿ ಸಂಭವಿಸಿದ ದುರಂತ ಘಟನೆಯಲ್ಲಿ ಶರಣರು ಸಾವು ನೋವಿಗೀಡಾಗಿದ್ದು ಮತ್ತು ಅಳಿದುಳಿದ ಶರಣರು ದಿಕ್ಕಾಪಾಲಾಗಿ ಹೋಗಿದ್ದರ ಬಗ್ಗೆ ಕೂಡಲಸಂಗಮದಲ್ಲಿದ್ದ ಬಸವಣ್ಣನವರು ಅರಿತು ಬಹಳ ನೊಂದುಕೊಂಡರು. ನೀಲಮ್ಮನವರನ್ನು ಕೂಡಲಸಂಗಮಕ್ಕೆ ಕರೆದುಕೊಂಡು ಬರಲು ಹಡಪದ ಅಪ್ಪಣ್ಣನವರಿಗೆ ತಿಳಿಸಿದರು. ಅಪ್ಪಣ್ಣನವರು ನೀಲಮ್ಮನವರ ಬಳಿಗೆ ಹೋಗಿ ಬಸವಣ್ಣನವರ ಇಚ್ಛೆಯ ಕುರಿತು ವಿವರಿಸಿದರು. ಆಗ ನೀಲಮ್ಮನವರು 'ಅಲ್ಲಿರುವ ಸಂಗನು ಇಲ್ಲಿಲ್ಲವೆ?' ಎಂದು ಹೇಳುವ ಮೂಲಕ ಅನುಭಾವದ ಎತ್ತರಕ್ಕೆ ಏರಿದ್ದು ಕಂಡುಬರುತ್ತದೆ.

ನೋಡು ನೋಡು ನೋಡು ನೋಡು ನೋಡು ಲಿಂಗವೆ

ನೋಡು ಬಸವಣ್ಣನವರು ಮಾಡಿದಾಟವ ||ಪ||

ಹರಳಯ್ಯ ಮಧುವಯ್ಯನವರಿಗೆ ಎಳೆಹೂಟೆ

ದುರುಳ ಬಿಜ್ಜಳನು ಕಟ್ಟಿದನೆಂದರೆ

ಇರಬಾರದಲ್ಲೀಗ ಶರಣರಿಗರುಹಿರೆಂ

ದರಸು ಬಸವರಾಜ ಪೇಳ್ದರಂತೆ.

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ

ಒಡೆಯ ಸಂಗಮನೊಳು ಬೆರೆವರಂತೆ.

ತಡ ಮಾಡಬೇಡಿರಿ ಮಡದಿಯರಿಗರುಹಿರೆಂದು

ಒಡೆಯ ಬಸವರಾಜ ನುಡಿದರಂತೆ.

ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ

ಅಲ್ಲಿದ್ದ ಸಂಗಮನಿಲ್ಲಿಲ್ಲವೆ?

ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು

ಬಲ್ಲ ಮಹಾತ್ಮರಿಗಿದು ಗುಣವೆ?

ಅಪ್ಪ ಅಣ್ಣಯ್ಯಗಳೆನ್ನ ಕರೆಯ ಬಂದಿಹರು

ಕಪ್ಪಡಿ ಸಂಗಮನಾಥ ಕೇಳೋ

ಪುಷ್ಪಕ್ಕೆ ಪರಿಮಳವ ಬೆರೆದಂತೆ ಎನ್ನ

ನಪ್ಪಿದ ಲಿಂಗವೆ ಮಾತನಾಡೋ.

ಸಂಗನಬಸವನ ನಿರೂಪವ ತಾಳುತೆ

ಹಿಂಗದೆ ಕರವೆತ್ತಿ ನಮಿಸುತಲಿ

ಸಂಗಮನಾಥನೆ ಈತನೆಂದು ಎ

ನ್ನಂಗಯ್ಯ ಲಿಂಗವೆ ಮಾತನಾಡೋ.

–ನೀಲಮ್ಮ

ನೀಲಮ್ಮನವರ ಈ ಸ್ವರವಚನ ಕಲ್ಯಾಣ ಅನಾಹುತದ ಕೊನೆಯ ದಿನಗಳ ಸ್ಥಿತಿಗತಿಗಳ ಮತ್ತು ಬಸವಣ್ಣನವರ ತೀವ್ರ ಕಾಳಜಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಯಾಗಿದೆ. ಎಳೆಹೂಟೆ ಶಿಕ್ಷೆಯಾದದ್ದು ಹರಳಯ್ಯ ಮತ್ತು ಮಧುವರಸರಿಗೆ ಮಾತ್ರ ಎಂಬುದು ಇದರಿಂದ ತಿಳಿದು ಬರುತ್ತದೆ. ಬ್ರಾಹ್ಮಣ ಮೂಲದ ಲಿಂಗವಂತ ಮಧುವರಸರ ಮಗಳು ಲಾವಣ್ಯಳನ್ನು ಸಮಗಾರ ಮೂಲಕ ಲಿಂಗವಂತ ಹರಳಯ್ಯನವರ ಮಗ ಶೀಲವಂತ ಮದುವೆಯಾದ ಕಾರಣ ಆತನಿಗೂ ಎಳೆಹೂಟೆ ಶಿಕ್ಷೆಯಾಗಿತ್ತು ಎಂಬುದನ್ನು ಈ ಐತಿಹಾಸಿಕ ದಾಖಲೆ ಅಲ್ಲಗಳೆಯುತ್ತದೆ.

ಹೀಗೆ ಹೇಳಿದರೂ ನೀಲಮ್ಮನವರು ಕಲ್ಯಾಣದಿಂದ ಕೃಷ್ಣಾ ನದಿಯ ದಡದಲ್ಲಿರುವ ತಂಗಡಗಿಗೆ ಬಂದರು. ಅಷ್ಟರೊಳಗೆ ಆಚೆದಡದಲ್ಲಿರುವ ಕೂಡಲಸಂಗಮದಲ್ಲಿ ಬಸವಣ್ಣನವರು ಲಿಂಗೈಕ್ಯರಾಗಿದ್ದರು. ಇದನ್ನರಿತ ನೀಲಮ್ಮನವರು ತಂಗಡಿಯಲ್ಲೇ ಉಳಿದು ಲಿಂಗೈಕ್ಯರಾದರು. ಲಿಂಗೈಕ್ಯರಾಗುವ ಮುಂಚೆ ನೀಲಮ್ಮನವರು ಬಸವಣ್ಣನವರ ಕುರಿತು ಅನೇಕ ಹೃದಯಸ್ಪರ್ಶಿ ವಚನಗಳನ್ನು ಬರೆದಿದ್ದಾರೆ.

"ಎನಗೆ ಲಿಂಗವು ನೀವೆ ಬಸವಯ್ಯಾ

ಎನಗೆ ಸಂಗವು ನೀವೆ ಬಸವಯ್ಯಾ

ಎನಗೆ ಪ್ರಾಣವು ನೀವೆ ಬಸವಯ್ಯಾ

ಎನಗೆ ಪ್ರಸಾದವು ನೀವೆ ಬಸವಯ್ಯಾ

ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ

ಎನಗೆ ಸಂಗಯ್ಯನು ನೀವೆ ಬಸವಯ್ಯಾ"

ಎಂದು ಹೇಳುವ ಮೂಲಕ ಭಾವಪೂರ್ಣ ತತ್ತ್ವನಿಷ್ಠುರಿ ನೀಲಮ್ಮನವರು ಪತಿ ಬಸವಣ್ಣನವರ ಬಗ್ಗೆ ಅತೀವ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ನೀಲಮ್ಮನವರ ಕುಟುಂಬ ಪ್ರೀತಿ, ಸಮಾಜಪ್ರೀತಿ, ಮಹಾಮನೆಯ ಕಾರ್ಯನಿರ್ವಹಣಾ ಸಾಮರ್ಥ್ಯ ಮತ್ತು ಶಿವಯೋಗಜ್ಞಾನ ಮಹಿಳೆಯರಿಗೆ ಆದರ್ಶಪ್ರಾಯವಾಗಿದೆ.


ಬಸವಣ್ಣನವರ ಮೊದಲ ಪತ್ನಿ ಗಂಗಾಂಬಿಕೆಯ ತ್ಯಾಗ ಕೂಡ ಅಮರವಾಗಿದೆ. ಪತಿಯ ಮಹಾನ್ ಕಾರ್ಯಕ್ಕೆ ಸರ್ವರೀತಿಯಿಂದಲೂ ಯೋಗ್ಯಳಾದ ನೀಲಾಂಬಿಕೆಯನ್ನು ತನ್ನ ಬದುಕಿನ ಭಾಗವಾಗಿ ಸ್ವೀಕರಿಸಿದ್ದು ಗಂಗಾಂಬಿಕೆಯ ಸಾಮಾಜಿಕ ಪ್ರಜ್ಞೆಯ ಪ್ರತೀಕವೂ ಆಗಿದೆ.



■ ರಂಜಾನ್ ದರ್ಗಾ

ಈ ಲೇಖನವನ್ನು ಬರೆದವರು ಕೇರಳದ ಕೋಝಿಕ್ಕೋಡ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಮೊಯ್ದು ಎನ್. ಕಾರಶೇರಿ ಎಂಬವರು. ಇವರು ಮತಾಂಧತೆ, ಮಹಿಳಾ ದೌರ್ಜನ್ಯ ಮುಸ್ಲಿಂ ಕೋಮುವಾದ, ಹಿಂದೂ ಕೋಮುವಾದ ಮುಂತಾದವುಗಳನ್ನು ವಿರೋಧಿಸಿ ಲೇಖನಗಳನ್ನು ಬರೆಯುತ್ತಿರುತ್ತಾರೆ. 2012ರಲ್ಲಿ 'ಮಾತೃಭೂಮಿ' ಎಂಬ ಕೇರಳದ ಖ್ಯಾತ ಪತ್ರಿಕೆಯಲ್ಲಿ ಈ ಲೇಖನ ಪ್ರಕಟವಾಗಿತ್ತು. ಇಂತಹ ಲೇಖನಗಳು ಕನ್ನಡ ಪತ್ರಿಕೆಗಳಲ್ಲೂ ಪ್ರಕಟವಾಗಲೆಂದು ಇದನ್ನು ಅನುವಾದಿಸಲಾಗಿದೆ.

ಪ್ರವಾದಿಗಳ ನಿಂದನೆಯ ಅಳತೆಗೋಲು!



'ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್ (ಮುಸ್ಲಿಮರ ನಿರಪರಾಧಿತನ 2012) ಎಂಬ ಸಿನಿಮಾದ ಕೆಲವು ಭಾಗಗಳನ್ನು ಇಂಟರ್‌ನೆಟ್‌ನಲ್ಲಿ ನೋಡಿದ ಲಕ್ಷಾಂತರ ಜನರಲ್ಲಿ ನಾನೂ ಒಬ್ಬನಾಗಿದ್ದೇನೆ. ಆ ಭಾಗದಿಂದಾಗಿಯೇ ಈ ಸಿನಿಮಾ ದುರುದ್ದೇಶ ಪೂರ್ವಕವಾಗಿಯೇ ಸಿದ್ಧಪಡಿಸಲಾಗಿದೆ ಎಂಬುದು ಎಂತಹ ಪೆದ್ದನಿಗೂ ಅರ್ಥವಾಗುತ್ತದೆ. ಪ್ರವಾದಿ ಮುಹಮ್ಮದ್ ಅವರನ್ನು ಅವಮಾನಿಸುವುದರ ಮೂಲಕ ಮುಸ್ಲಿಮರನ್ನು ಸಿಟ್ಟಿಗೆಬ್ಬಿಸುವುದು; ಸಮಾಜಗಳು ತಮ್ಮೊಡನೆ ಕಚ್ಚಾಡಲಿ ಎಂಬುದೇ ಇವರ ಉದ್ದೇಶವಾಗಿದೆ.

ಒಂದು ಚಿಕ್ಕ ಭಾಗ ಮುಸ್ಲಿಮರು ಕೋಪಾವಿಷ್ಟರಾದರು. ಆ ಗುಂಪಿನ ಒಂದು ಭಾಗ, ಲಿಬಿಯಾದಲ್ಲಿ ಅಮೆರಿಕದ ಪ್ರತಿನಿಧಿಯನ್ನು ಹತ್ಯೆ ಮಾಡಿತು. ಮತ್ತೊಂದು ವಿಭಾಗ ಪಾಕಿಸ್ತಾನದಲ್ಲಿ ಅಕ್ರಮವಾಗಿ ರ್‍ಯಾಲಿ ನಡೆಸಿ ಅಸಂಖ್ಯ ಜನರ ಮರಣಕ್ಕೆ ಕಾರಣವಾಯಿತು.

ಈ ರೀತಿ ಉದ್ರಿಕ್ತರಾಗುವ ಮೂಲಕ ಅವರು ಸಿನಿಮಾಕ್ಕೆ ಸಹಕರಿಸಿದರು. 'ಮುಸಲ್ಮಾನರು ಧರ್ಮದ ಹೆಸರಿನಲ್ಲಿ ಎಂತಹ ಅಕ್ರಮಗಳನ್ನೂ ಪ್ರದರ್ಶಿಸಲು ಹಿಂಜರಿಯದ ಕ್ರೂರಿಗಳಾಗಿದ್ದಾರೆ' ಎಂಬ ಸಿನಿಮಾದ ತಪ್ಪು ಸಂದೇಶ ಸರಿಯಾಗಿರಬಹುದು ಎಂಬ ಚಿಂತನೆಯನ್ನುಂಟುಮಾಡಿತು.

ಈ ಸಿನಿಮಾದ ನಿರ್ಮಾಪಕನಂತೆ ವಿಕೃತ ಮನಸ್ಸಿನ ಕೆಲವರು ಪ್ರವಾದಿಗಳನ್ನು ಅವಮಾನಿಸಿ ವ್ಯಂಗ್ಯಚಿತ್ರ ಬರೆಯುತ್ತಾರೆ; ಇಲ್ಲವಾದರೆ ಖುರಾನನ್ನು ಸುಡುತ್ತಾರೆ; ಅದೂ ಅಲ್ಲವಾದರೆ ಜನರು ಉದ್ರಿಕ್ತರಾಗುವಂತೆ ಬೇರೇನಾದರೂ ಮಾಡುತ್ತಾರೆ. ಅವೆಲ್ಲವೂ ಪ್ರತಿಭಟನೆಗೆ ಯೋಗ್ಯವಲ್ಲದ, ಅವಗಣನೆಗೆ ಅರ್ಹವಾದುದಾಗಿದೆ ಎಂದು ತಿಳಿದುಕೊಳ್ಳುವಂತಹ ವಿವೇಕ ವಿಶ್ವಾಸಿಗಳಿಗಿರಬೇಕು. ಮುಸಲ್ಮಾನರು ಉದ್ರೇಕಗೊಳ್ಳುವುದಿಲ್ಲ ಎಂದು ಕಂಡರೆ ಆ ಬಳಿಕ ಪ್ರವಾದಿಗಳನ್ನು ಅವಮಾನಿಸುವಂತಹ ಕೆಲಸ ಮಾಡಲು ಜನರಿರುವುದಿಲ್ಲ.

ಓರ್ವ ವ್ಯಂಗ್ಯಚಿತ್ರಕಾರನೊ, ಸಿನಿಮಾ ನಿರ್ಮಾಪಕನೊ ಪ್ರಯತ್ನಿಸಿ ಪ್ರವಾದಿಗಳನ್ನು ಅವಮಾನಿಸಲು ಸಾಧ್ಯವಿಲ್ಲ; ಮಾನವ ಸಂಸ್ಕೃತಿಯ ಚರಿತ್ರೆಯಲ್ಲಿ ಅವರಿಗಿರುವ ಉನ್ನತ ಸ್ಥಾನವನ್ನು ನಿರಾಕರಿಸಲೂ ಸಾಧ್ಯವಾಗದು. ಇಂತಹ ದೃಢಚಿತ್ತವಿರುವ ಯಾರೂ ಕೂಡಾ ದ್ವೇಷದಿಂದ ಈ ರೀತಿ ಉರಿದು ಬೀಳುವುದಿಲ್ಲ.

ಒಮ್ಮೆ ಯೋಚಿಸಿ ನೋಡಿ; ಅಮೆರಿಕದಲ್ಲಿ ಒಂದು ಮುಸ್ಲಿಂ ವಿರೋಧಿ ಸಿನಿಮಾ ನಿರ್ಮಿಸಿದ್ದಕ್ಕಾಗಿ ಪಾಕಿಸ್ತಾನದಲ್ಲಿ ಮುಸ್ಲಿಮರು ಪರಸ್ಪರ ಹೊಡೆದಾಡಿ ಕಡಿದು ಕೊಲೆ ಮಾಡುವುದೇಕೆ? ಅದರಿಂದ ಪ್ರವಾದಿಗಳಿಗೋ ಧರ್ಮಕ್ಕೋ ದೋಷವಲ್ಲದೆ ಒಳಿತೇನಾದರೂ ಇದೆಯೇ? ಸಿನಿಮಾ ಪ್ರವಾದಿಗಳ ಹೆಸರು ಕೆಡಿಸಿದೆಯೆಂದಾದರೆ ಈ ಅಕ್ರಮಗಳು ಅವರಿಗೆ ಒಳ್ಳೆಯ ಹೆಸರು ತರುತ್ತದೆಯೇ? ಇದು ಪ್ರವಾದಿಗಳ ಹೆಸರನ್ನು ಕೆಡಿಸುತ್ತದಷ್ಟೇ! ವಿರೋಧವನ್ನು ಉತ್ಪಾದಿಸುವ ಆ ಸಿನಿಮಾ ಮತ್ತು ಅಕ್ರಮವನ್ನು ಉತ್ಪಾದಿಸುವ ಈ ಪ್ರತಿಭಟನೆ ಪ್ರವಾದಿಗಳ ಹೆಸರನ್ನು ಕೆಡಿಸುತ್ತದೆ ಎಂಬುದಷ್ಟೆ ಈ ಎರಡು ಕ್ರಿಯೆಗಳ ಪರಿಣಾಮವಾಗಿದೆ.

ಸಲ್ಮಾನ್ ರಶ್ದಿಯ 'ಸಟಾನಿಕ್ ವರ್ಸಸ್ (1988) ಎಂಬ ಕಾದಂಬರಿಗೆ ಜಾಗತಿಕ ಖ್ಯಾತಿ ದೊರಕಿಸಿಕೊಟ್ಟದ್ದು ಮತ್ತು ಕೋಟಿ ಕೋಟಿ ಪ್ರತಿಗಳ ಮಾರಾಟಕ್ಕೆ ಪ್ರಚಾರ ದೊರಕಿಸಿಕೊಟ್ಟದ್ದು ಹಲವಾರು ದೇಶಗಳಲ್ಲಿ ಮೇಲೆದ್ದ ಪ್ರತಿಭಟನೆಗಳೇ ಆಗಿದೆ. ರಶ್ದಿಗೆ ಮರಣದಂಡನೆಗೆ ಇರಾನಿಗಳ ಪ್ರೀತಿಯ ಮುಖಂಡ ಆಯಾತುಲ್ಲಾ ಖುಮೈನಿ ಫತ್ವಾ (1989) ಹೊರಡಿಸಿದ ಕಾರಣ ಅದು ಮತ್ತಷ್ಟು ಪ್ರಜ್ವಲಿಸುವಂತಾಯಿತು. ಇಂಡಿಯಾ, ಪಾಕಿಸ್ತಾನ ಹಾಗೂ ಇತರ ಹಲವು ದೇಶಗಳಲ್ಲಿ ಅಕ್ರಮದ ಹಲವು ರ್‍ಯಾಲಿಗಳು ನಡೆದವು. ಎಷ್ಟೋ ಮನುಷ್ಯರು ಪ್ರಾಣ ಕಳೆದುಕೊಂಡರು. ಕೋಟಿ ಕೋಟಿ ರೂಪಾಯಿಗಳ ಸ್ವತ್ತು ನಾಶವಾಯಿತು. ಇದರೆಲ್ಲದರಿಂದ ಏನು ಪ್ರಯೋಜನವೆಂದು ಯೋಚಿಸಲಿಲ್ಲ. ಮುಂದೆಯಾದರೂ ಯೋಚಿಸುತ್ತಾರೆಯೋ? ರಶ್ದಿಗೆ ಲೆಕ್ಕವಿಲ್ಲದಷ್ಟು ಹಣ ಮತ್ತು ಹೆಸರು ದೊರೆತದ್ದಲ್ಲದೆ ಅವನಿಗೇನಾದರೂ ದೋಷವುಂಟಾಯಿತೇ? ಇಸ್ಲಾಂ ಸಂಸ್ಕೃತಿಗೂ ಪ್ರವಾದಿ ಮುಹಮ್ಮದ್ ಅವರಿಗೂ ಅದರಿಂದ ಉಂಟಾದುದು ಸತ್ಕೀರ್ತಿಯೋ ದುಷ್ಕೀರ್ತಿಯೋ?

ಆ ಚರಿತ್ರೆಯಿಂದ ಧರ್ಮದ ಹೆಸರಿನಲ್ಲಿ ವಿಕೃತಿಯುಂಟುಮಾಡುವವರು ವಿಶೇಷವಾದ ಯಾವ ಪಾಠವನ್ನೂ ಕಲಿತಿಲ್ಲ ಎಂಬುದು ಈಗಿನ ಸಿನಿಮಾ ಗಲಾಟೆಯಿಂದ ತಿಳಿದು ಬರುತ್ತದೆ.

ವಿಕಾರವಲ್ಲ; ಧರ್ಮ ವಿವೇಕವಾಗಿದೆ.

ಈ ವಿಷಯಗಳಿಡೆಗೆ ಇತ್ತೀಚಿನ ಚರಿತ್ರೆಯಿಂದ ಒಂದು ಅನುಭವವಿದೆ.

ಸ್ವಲ್ಪ ಕಾಲ ಅಫಘಾನಿಸ್ತಾನದಲ್ಲಿ ಆಡಳಿತ ನಡೆಸುತ್ತಿದ್ದ ತಾಲಿಬಾನ್ ಎಂಬ ತೀವ್ರವಾದಿಗಳು ಅಲ್ಲಿನ ಬಾಮಿಯಾನ್ ಗುಡ್ಡೆಗಳಲ್ಲಿ ಶತಮಾನಗಳಿಂದ ನೆಲೆ ನಿಂತಿದ್ದ ಬುದ್ಧನ ಪ್ರತಿಮೆಗಳನ್ನು ಡೈನಾಮಿಟ್ ಇಟ್ಟು ಸಿಡಿಸಿದರು. (2001) ಆಲೋಚಿಸಿ, ತೀರ್ಮಾನಿಸಿ, ಮುಂದಡಿ ಇಟ್ಟು ಪ್ರಚಾರ ನೀಡಿ ನಡೆಸಿದ ಆ ವಿನಾಶ ಇಂಡಿಯಾದಲ್ಲಿ ಹಿಂದೂಗಳ ನಡುವಿನಲ್ಲಿರುವ ತೀವ್ರವಾದಿಗಳು ಬಾಬರಿ ಮಸೀದಿ ಕೆಡವಿದಂತಹ (1992) ಹೀನಕೃತ್ಯವಾಗಿದೆ. ಸಾಮಾಜಿಕ ಸಂಘರ್ಷ ಉತ್ಪಾದಿಸಿ ಗಲಭೆ ಸೃಷ್ಟಿಸುವ ಗುರಿ ಇದಾಗಿತ್ತು. ಇಂಡಿಯಾ, ಚೈನಾ, ಜಪಾನ್ ಥಾಯ್ಲೆಂಡ್, ಶ್ರೀಲಂಕಾ ಮುಂತಾದ ಹಲವಾರು ದೇಶಗಳಲ್ಲಿ ವಾಸಿಸುತ್ತಿದ್ದ ಕೋಟಿ ಕೋಟಿ ಬೌದ್ಧ ಧರ್ಮೀಯರಲ್ಲಿ ಒಬ್ಬರಾದರೂ ಬುದ್ಧನ ಪ್ರತಿಮೆಯನ್ನು ಕೆಡವಿದ್ದಕ್ಕಾಗಿ ಯಾವ ರೀತಿಯ ಪ್ರತಿಭಟನೆಯನ್ನೂ ತೋರಿಸಲಿಲ್ಲ. ಓರ್ವ ಮುಸ್ಲಿಮನ ಒಂದೇ ಒಂದು ಸ್ಟೇಷನರಿ ಅಂಗಡಿಯನ್ನಾದರೂ, ಯಾವ ದೇಶದಲ್ಲೂ, ಓರ್ವ ಬೌದ್ಧ ಧರ್ಮಿಯನೂ ಕೆಡವಿ ನಾಶ ಮಾಡಲಿಲ್ಲ. ಆ ಪ್ರತಿಮೆ ಬುದ್ಧನೆಂದು ತಾಲಿಬಾನ್ ಊಹಿಸಿರಬಹುದು. ಬುದ್ಧನು ಪ್ರತಿಮೆಯಲ್ಲ ಎಂಬುದು ಅವನ ಅನುಯಾಯಿಗಳಿಗೆ ತಿಳಿದಿತ್ತು. ಸಂಘರ್ಷವುಂಟು ಮಾಡುವಲ್ಲಿ ಬೌದ್ಧ ಧರ್ಮೀಯರ ವಿವೇಕದಿಂದಾಗಿ ತಾಲಿಬಾನಿಗಳು ಪರಾಜಿತರಾದರು. ಹಾಗೆ ತಾಲಿಬಾನ್ ಸೋತು ಬುದ್ಧನ ಮೌನ ಮಂದಹಾಸ ಗೆಲುವು ಪಡೆಯಿತು.


ಇಂತಹ ಪ್ರತಿಭಟನೆಗಳಲ್ಲಿ ಕೇರಳದಲ್ಲಿ ಅಕ್ರಮಗಳ ಪದ್ಧತಿಯೇನೂ ಇರುವುದಿಲ್ಲ. ಆಯೋಗ, ಲೇಖನ, ಪ್ರಕಟಣೆ ಮುಂತಾದವುಗಳು ಮಾತ್ರ ಉಂಟಾಗುತ್ತದೆ. ಈಗಲೂ ಅಷ್ಟೇ ಇತ್ತು. ಅದರೆಡೆಯಲ್ಲಿ 'ಸಿನಿಮಾ ಬ್ಯಾನ್ ಮಾಡಬೇಕು.' ಅದರ ಕೆಲವು ಭಾಗಗಳನ್ನು ತೋರಿಸುವ 'ಯೂ ಟ್ಯೂಬ್ ಬ್ಯಾನ್ ಮಾಡಬೇಕು' ಮುಂತಾದ ಸಾಮಾನ್ಯ ಅಗತ್ಯಗಳನ್ನು ನಾವು ನಿರ್ಲಕ್ಷಿಸಬೇಕು ಎಂದುಕೊಳ್ಳಬಹುದು.

ಅಕ್ರಮ ಮಾಡಬಾರದೆನ್ನುವ ಸಮಾಜದ ಮುಖಂಡರೂ, ಧರ್ಮ ಗುರುಗಳೂ, ಪತ್ರಕರ್ತರೂ ಧ್ವನಿ ಎತ್ತಿದ ಒಂದು ಅಗತ್ಯ ವಿಷಯವೇನೆಂದರೆ ಪ್ರವಾದಿಗಳ ಅವಮಾನ, ಧರ್ಮನಿಂದೆ ಮುಂತಾದುವನ್ನು ಅಪರಾಧವೆಂದು ತೀರ್ಮಾನಿಸಬೇಕು ಹಾಗೂ ಹಾಗೆ ಮಾಡುವವರನ್ನು ನ್ಯಾಯಾಲಯದ ಮುಂದೆ ತಂದು ಶಿಕ್ಷಿಸಬೇಕು ಎಂಬುದಾಗಿತ್ತು.

ಬಹಳ ಸರಳವೆಂದು ಕಾಣುವ ಈ ನಿಲುವು ಸಂಕೀರ್ಣವಾದುದಾಗಿದೆ. ಪ್ರವಾದಿ ನಿಂದನೆ, ಧರ್ಮ ನಿಂದನೆ ಮೊದಲಾದವುಗಳನ್ನು ವಿಶದೀಕರಿಸುವುದು ಮತ್ತು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲ. ಅದನ್ನು ವಿವರಿಸಲು ಒಂದು ಉದಾಹರಣೆ ನೀಡುವೆ.

ಕೇರಳದ ಸುನ್ನಿ ಮುಸ್ಲಿಮರ ಒಂದು ವಿಭಾಗ ಮುಹಮ್ಮದ್ ನೆಬಿಯವರ ತಿರುಮುಡಿ (ತಲೆಗೂದಲು) ತಂದಿಡಲು ಕೋಝಿಕ್ಕೋಡು ಜಿಲ್ಲೆಯಲ್ಲಿ ದೊಡ್ಡ ಮಸೀದಿ ಕಟ್ಟಿಸಲು ತೀರ್ಮಾನಿಸಿದ್ದರು.

ಆ ಮಸೀದಿ ಮೂಢನಂಬಿಕೆಗಳಿಗೆ ಪ್ರಚಾರ ನೀಡುತ್ತದೆ ಎಂದು ಕೆಲವು ರಾಜಕೀಯ ಮುಖಂಡರು ವಿಮರ್ಶಿಸಿದಾಗ, 'ಪ್ರವಾದಿ ನಿಂದನೆ' ಎಂಬ ಆಕ್ಷೇಪವುಂಟಾಯಿತು.



ಸುನ್ನಿಗಳಲ್ಲಿಯೇ ಇನ್ನೊಂದು ವಿಭಾಗ, 'ಕೂದಲು ಸ… ಎಂದೂ ಅದನ್ನು ಸ್ಥಾಪಿಸುವುದರಿಂದ ಪ್ರವಾದಿ… ಅವಮಾನವಾಗುತ್ತದೆ ಎಂದೂ ವಾದಿಸುತ್ತಾರೆ.

ಮುಜಾಹಿದ್ ಎಂಬ ಇನ್ನೊಂದು ವಿಭಾಗ, 'ಕೂ… ಪ್ರವಾದಿಗಳದ್ದೇ ಆಗಿದ್ದರೂ ಸ್ಥಾಪಿಸಬಾರದು. ಅ… ವಸ್ತುಗಳನ್ನು ಪುಣ್ಯವಸ್ತುಗಳಾಗಿಸುವುದು ಪ್ರವಾದಿ… ವಿರೋಧಿಸಿದ ವಿಗ್ರಹಾರಾಧನೆಗೆ ಮುಸ್ಲಿಮರ ನಡುವೆ… ದೊರೆತಂತಾಗುತ್ತದೆ. ಅದು ಪ್ರವಾದಿಗಳಿಗೆ ಅವ… ಮಾಡಿದಂತಾಗುತ್ತದೆ' ಎಂದರು.

ಇದರಲ್ಲಿ ಪ್ರವಾದಿಗಳಿಗೆ ಅವಮಾನ ಮಾಡುವ… ಯಾರೆಂದು ತೀರ್ಮಾನಿಸಲು ಹೇಗೆ ಸಾಧ್ಯ? … ಗುಂಪಿನ ಮದನೆ ಇನ್ನೊಂದು ಗುಂಪಿನ ನಿಂದನೆಯಾಗು… ಇದರಲ್ಲೆಲ್ಲಾ ಸರಕಾರ ಅಥವಾ ನ್ಯಾಯಾಲಯಕ್ಕೆ ತೀ… ನೀಡಲು ಸಾಧ್ಯವಿಲ್ಲ; ಎಲ್ಲಾ ಭಿನ್ನಮತಗಳನ್ನೂ … ರೀತಿ ಅರಳಲು ಬಿಡಬೇಕು ಎಂಬುದು ವ… ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಾಧ್ಯವಾಗುತ್ತದೆ.

ಎಲ್ಲರಿಗೂ ಅರ್ಥವಾಗುವಂತೆ ತಾಲಿಬಾನಿನ ಆ … ನಾಶ, ಪ್ರವಾದಿಗಳು ಮತ್ತು ಇಸ್ಲಾಂ ಧರ್ಮ… ಅವಮಾನಿಸುವ ಪ್ರವೃತ್ತಿಯೇ ಆಗಿದೆ. ಅನ್ಯ ಮ… ಯಾಯಿಗಳ ಆರಾಧನಾ ರೀತಿಗಳನ್ನು ಹಾಸ್ಯ ಮಾಡಬ… ಎಂದೂ, ಅವರ ಆರಾಧನಾಲಯಗಳನ್ನು ಗೌರವಿಸಬೇಕ… ಕಲಿಸುತ್ತಿರುವ ಖುರಾನ್ ಹೆಸರಿನಲ್ಲೇ ಅದನ್ನು ಮಾಡಲ… ಈ ಧರ್ಮನಿಂದನೆಯ ವಿರುದ್ಧ ಕೇರಳದ ವಿಶ್ವಾ… (ಮುಸ್ಲಿಮರು) ಏನಾದರೂ ಮಾಡಿದ್ದಿದೆಯೇ?

ಇಸ್ಲಾಂ ಶರಿಯತ್ ಜಾರಿಗೆ ತಂದ ಕಾ… (ಸೆಪ್ಟೆಂಬರ್ 1996-ಅಕ್ಟೋಬರ್ 2… ಅಫಘಾನಿಸ್ತಾನದಲ್ಲಿ ಮಹಿಳೆಯರಿಗೆ ಶಿಕ್ಷಣ, … ಸಾಮಾಜಿಕ ಬದುಕು ಎಲ್ಲವನ್ನೂ ನಿಷೇಧಿಸಲಾ… ಅವೆಲ್ಲವೂ 'ಅನಿಸ್ಲಾಮಿಕ' (ಇಸ್ಲಾಂ ವಿರೋಧಿ)… ಎಂಬುದು ಆ ಭಯೋತ್ಪಾದಕರ ಆಜ್ಞೆಯಾಗಿತ್ತು. ಖುರ… 'ಓದಿರಿ' ಎಂಬ ವಾಕ್ಯದಿಂದಲೇ ಪ್ರಾರಂಭವಾಗುತ್ತದೆ. … ಪಡೆಯಲೇಬೇಕು ಎಂದು ನಿರ್ಬಂಧಿಸಿದಲ್ಲಿ ಖುರ… ಗಂಡು-ಹೆಣ್ಣೆಂಬ ಭೇದ ಸೃಷ್ಟಿಸಿಲ್ಲ. ಯುದ್ಧದ ಯಾತ್… ಕೂಡಾ ಪ್ರವಾದಿಗಳು ತಮ್ಮ ಪತ್ನಿ ಆಯಿಷಾ ಬೀಬಿ… ತಮ್ಮೊಡನೆ ಕರೆದೊಯ್ಯುತ್ತಿದ್ದರು. ಹೀಗೆಲ್ಲ ಇದ್ದರೂ… ಧರ್ಮ ನಿಂದನೆಯ ವಿರುದ್ಧ ಪ್ರತಿಭಟಿಸಲು ನಮ್ಮ ನಾ… ವಿಶ್ವಾಸಿಗಳಿರಲಿಲ್ಲ!

ಇತ್ತೀಚಿಗಿನ ಒಂದು ಹೊಸ ಅನುಭವ ನ… ಪಾಕಿಸ್ತಾನಿನ ಹಳೆಯ ಸಾಂಸ್ಕೃತಿಕ ಕೇಂದ್ರವಾದ … ಕಣಿವೆಯ ಮಹಿಳಾ ವಿದ್ಯಾಲಯಗಳನ್ನು ತಾಲಿ… ಬಾಂಬ್ ಹಾಕಿ ನಾಶ ಮಾಡಿತು. ಈಗ ಮಹಿಳಾ ಶಿಕ್ಷ… ನಡೆಯುತ್ತಿರುವ ನಾಗರಿಕ ಹಕ್ಕುಗಳಿಗೆ ಬೆಂಬಲ ನೀ… ಬ್ಲಾಗ್ ಮತ್ತು ಡೈರಿ ಬರೆದ ಮಲಾಲಾ ಯುಸುಫ್… ಎಂಬ ಹೆಣ್ಣು ಮಗಳ ತಲೆಗೆ ತಾಲಿಬಾನ್ … ಹಾಕಿದರು. ಹದಿನಾಲ್ಕು ವರ್ಷದ ಆ ಹೆಣ್ಣು … ಬ್ರಿಟನ್ನಿನ ಆಸ್ಪತ್ರೆಯಲ್ಲಿ ಬದುಕಿಗಾಗಿ ಹೋರಾಡಿ…

ಇಸ್ಲಾಂ ಯಾರ ಧರ್ಮವಾಗಿದೆ? ತಾಲಿಬಾ… ಮಲಾಲಳದಾ?

ಸ್ತ್ರೀ ಶಿಕ್ಷಣವನ್ನು 'ಹರಾಂ' ಮಾಡಿದ್ದು ಮ… ವಿದ್ಯಾಲಯಗಳನ್ನು ಬಾಂಬ್ ಹಾಕಿ ಕೆಡವಿದ್ದು … ಮಲಾಲಾಳನ್ನು ಗುಂಡಿಟ್ಟದ್ದು ಮುಂತಾದ ತಾ… ತೋರಿದ ಧರ್ಮನಿಂದನೆ ನಮ್ಮ ನಾಡಿನ ವಿ… ಹೃದಯದಲ್ಲಿ ಪ್ರತಿಭಟನೆಯನ್ನುಂಟು ಮಾಡ… ಕಾರಣವೇನು?

'ತಾಲಬ್' ಎಂಬ ಅರಬಿ ಶಬ್ದಕ್ಕೆ ವಿದ್ಯಾರ್ಥಿ ಎ… ಅರ್ಥವಾಗಿದೆ. ಟರ್ಕಿ ಭಾಷೆಯ ಬಹುವಚನ … ವಿದ್ಯಾರ್ಥಿಗಳು ಎಂಬ ಅರ್ಥದಲ್ಲಿ 'ತಾಲಿಬಾನ್' … ಪ್ರಯೋಗಿಸಲಾಗಿದೆ. ಮಹಿಳಾ ವಿದ್ಯಾರ್ಥಿಗಳನ್ನು ನಿಷೇ… ಸಂಘ ಹೇಗೆ 'ವಿದ್ಯಾರ್ಥಿಗಳು' ಎಂಬ ಹೆಸರು ಪಡೆ…

ಅಫಘಾನಿಸ್ತಾನದ ಕಮ್ಯುನಿಸ್ಟ್ ಆಡಳಿತ (197… ಆಯುಧದಿಂದ ನಾಶಪಡಿಸಲು ಯುವಕರಿಗೆ ಪ… ಪಡಿಸುವ ಸಲುವಾಗಿ ಅಮೆರಿಕದ ಮುಂದಾ… ಪ್ರಾರಂಭಿಸಿದ ಮದ್ರಸಾಗಳಲ್ಲಿ ಉತ್ಪಾದಿಸಲ್ಪಟ್ಟ ಭಯೋ… ರಾಗಿದ್ದಾರೆ ತಾಲಿಬಾನ್. ಅವರು ಇಸ್ಲಾಂ … ಕಲಿತುಕೊಂಡದ್ದು ಖುರ್‌ಆನಿನಿಂದಲೋ ಪ್ರವ… ನಡವಳಿಕೆಗಳಿಂದಲೋ ಅಲ್ಲ, ಅಮೆರಿಕಾದಿಂದ! ಯ… ವಾದ, ಮರಣ ಸನ್ನದ್ಧತೆ (ಆತ್ಮಹತ್ಯಾ ಬಾಂಬ್)… ಮುಂತಾದುವುಗಳನ್ನು ಇಸ್ಲಾಮಿ ಜಿಹಾದ್‌ನ … ಅವರಿಗೆ ಕಲಿಸಿದರೆ ಮಾತ್ರ ಅಂದು ಅಮೆರಿಕಾದ … ನೆರವೇರುತ್ತಿತ್ತು. ಅದು ನೆರವೇರಿತು! ಏನು ಮಾಡ… ಮೂರು ದಶಕಗಳು ಕಳೆದರೂ ತಾಲಿಬಾನ್‌ನ ಆ… ಇಳಿಯಲಿಲ್ಲ.

ಮತಾಂಧರಾದ ಭಯೋತ್ಪಾದಕರಿಗೆ ಬೇ… ಅರ್ಥವಾದರೂ ಧರ್ಮ ಅರ್ಥವಾಗುವುದಿಲ್ಲ!

ಮಲಯಾಳದ ಮೂಲ : ಮೊಯ್ದು ಎನ್. ಕಾ…

ಕನ್ನಡಕ್ಕೆ :ಸಾರಾ ಅಬೂಬ…



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಧ್ಯಾನ ಶಿಬಿರಗಳಲ್ಲಿ ಅಮಲುಗಳು

ಸುಮಾರು ಹತ್ತು ವರ್ಷಗಳ ಹಿಂದೆ ತುಮಕೂರು ...ಬಳಿಯಿರುವ ಮಾಕಳಿಯ ಸಮೀಪದ ವಿಪಸ್ಸನ ಧ್ಯಾನ ...ದಲ್ಲಿ ನಾನು ಧ್ಯಾನವನ್ನು ಅಭ್ಯಾಸ ಮಾಡುವುದಕ್ಕೆ ...ದ್ದೆ. ಅಲ್ಲಿಯೇ ಸುಮಾರು (10 ಅಥವಾ 15) ದಿನಗಳ ನೆಲೆಸಿದ್ದು ಧ್ಯಾನವನ್ನು ಅಭ್ಯಾಸ ಮಾಡಬೇಕಾಗಿತ್ತು. ...ಧ್ಯಾನವನ್ನು ಮಾಡುವುದಕ್ಕೆ ಕುಳಿತಾಗಲೆಲ್ಲಾ ನನಗೆ ...ವಾದ ನಿದ್ರೆ ಬರುತ್ತಿತ್ತು. ಅಲ್ಲಿನ ಧ್ಯಾನವನ್ನು ...ಕೊಡುವ 'ಗುರು' ನನಗೆ ಹೇಳುತ್ತಿದ್ದುದ್ದೇನೆಂದರೆ ...ಬಂದರೆ ಅದು ಧ್ಯಾನವಲ್ಲ. ಎಚ್ಚರವಾಗಿರಬೇಕು. ...ಸಿದುವ ಕಾಲುಗಳು ಮತ್ತು ದೇಹದ ಇತರ ಅಂಗಗಳು ...ವಿಗೆ ಒಳಗಾದರೂ ಅವನ್ನು ಗಮನಿಸುತ್ತಿರಬೇಕು. ...ಮಾಡುತ್ತಿರಬೇಕು" ಇತ್ಯಾದಿ ಸಲಹೆ ಸೂಚನೆಗಳನ್ನು ...ತ್ತಿದ್ದರು. ಅಲ್ಲಿ ಸಂಪೂರ್ಣವಾಗಿ ಮೌನವಾಗಿದ್ದು, ...ರೂ ಯಾರೊಂದಿಗೂ ಸಂಭಾಷಿಸುವುದಕ್ಕೆ ...ಕಾಶವಿರಲಿಲ್ಲ. ನನಗೆ ಮೊದಲ ಐದಾರು ದಿನಗಳು ...ಮವಾಗಿದ್ದು ನಂತರ ಕಸಿವಿಸಿಯಾಗತೊಡಗಿತ್ತು. ಅಲ್ಲಿ ...ದ್ದವರೂ ತಮ್ಮನ್ನು ಬಲವಂತದಿಂದ ಅದಕ್ಕೆ ...ಕೊಂಡು ಒಗ್ಗಿಕೊಂಡಿರಲು ಯತ್ನಿಸುತ್ತಿದ್ದರು. ಒಬ್ಬ ...ಯರು ನನಗೆ ಚೀಟಿ ಕಳುಹಿಸಿದ್ದರು "ನಾನು ಇಲ್ಲಿಂದ



...ಹೋಗಬೇಕು. ಏನು ಮಾಡಲಿ?" ಎಂದು. "ನೇರವಾಗಿ ...ಎಂದು ಉತ್ತರಿಸಿದ್ದೆ.

...ಆದರೆ ಅವರು ನೇರವಾಗಿ ಕೇಳಲೇ ಇಲ್ಲ. ಬದಲಾಗಿ ...ನವೂ ಕಳೆದಂತೆ ಅವರು ಮಂಕಾಗಿ ಮತ್ತು ...ಷ್ಟರಂತೆ ಕುಳಿತುಕೊಂಡಿರುತ್ತಿದ್ದರು. ನಾನು ಒಂದು ...ನಿರ್ದೇಶಕರ ಬಳಿಗೆ ಹೋಗಿ ಹೇಳಿದೆ. ಅವರಿಗೆ ...ಸಮಸ್ಯೆಯಾಗುತ್ತಿರುವಂತೆ ಕಾಣುತ್ತಿದೆ ಮತ್ತು ...ಕೂಡ ಹೋಗಬೇಕೆಂದುಕೊಂಡಿರುವೆ ...ಕೊಡುವಿರಾ? ಎಂದು. ಆದರೆ ಅವರು ನಿರಾಕರಿಸಿದ್ದು ...ವಲ್ಲದೇ "ಅದು ಹಾಗೆಯೇ ಆಗುವುದು. ಧ್ಯಾನಕ್ಕೆ ...ಗಿದಾಗ ಮಾಯೆಗೆ ಒಳಗಾಗುವುದು ಮತ್ತು ...ಭಗಳಿಗೆ ಒಳಗಾಗುವುದು, ಹೊರಗಿನ ಪ್ರಾಪಂಚಿಕ ...ಗಳಿಗೆ ಎಳೆಯುವುದು ಇತ್ಯಾದಿಗಳೆಲ್ಲಾ ಆಗುವುದು. ...ಮೀರಿ ನಿಲ್ಲಲು ಧ್ಯಾನಕ್ಕೇ ಮೊರೆಹೋಗಬೇಕು. ...ಹೆಚ್ಚು ಹೆಚ್ಚು ಸಾಧನೆ ಮಾಡಬೇಕು. ಆಗ ನಿಮಗೆ ...ವನ್ನೂ ಮೀರಿ ನಿಲ್ಲುವ ಸಾಮರ್ಥ್ಯವು ಬರುವುದು. ...ಆಗ್ರಹ, ಆವೇಶ ಇತ್ಯಾದಿಗಳೆಲ್ಲಾ ನಿಗ್ರಹವಾಗುವುದು. ...ಸಂತಾಗುವುದು" ಹೀಗೆ ಸುಮಾರು ಉದ್ದದ ...ದೇಶ ನೀಡಿದರು. ನನಗೆ ಇವೆಲ್ಲವೂ ಪ್ರಾಥಮಿಕ ...ವಾಗಿದ್ದು ನಾನು ಇನ್ನೂ ಹೆಚ್ಚಿನ ಪ್ರಬುದ್ಧವಾದ ...ಯನ್ನೋ ಅಥವಾ ಪ್ರತಿಕ್ರಿಯೆಯನ್ನೋ ನಿರೀಕ್ಷಿಸುತ್ತಿದ್ದೆ. ...ಅವರು ಪದೇ ಪದೇ ಇದನ್ನೇ ಹೇಳುತ್ತಿದ್ದರು ...ನಾನೂ ಅದನ್ನೇ ಹೇಳುತ್ತಿದ್ದೆ. "ನನಗೆ ಇನ್ನೂ ...ಬುದು ಇಲ್ಲಿ ಆಗಲೇ ಇಲ್ಲ. ನೀವು ನಿಮ್ಮ ...ಗೆ ನೀವು ಸುಮ್ಮನೆ ಕುಳಿತಿರುತ್ತೀರಿ. ನಾವೂ ...ಕೊಂಡಿರಬೇಕು. ನೀವು ನೀಡುತ್ತಿರುವ ...ಯಾಗಲಿ, ಮಾರ್ಗದರ್ಶನವಾಗಲಿ ಯಾವುದೇ ...ಮತ್ತು ಅಥವಾ ತಂತ್ರವನ್ನು ತೋರುತ್ತಿಲ್ಲ, ನಾನು ...ದಾದ ಕೆಲಸ ಕಾರ್ಯವನ್ನು ಬಿಟ್ಟು ವ್ಯರ್ಥವಾಗಿ ...ಕಿದ್ದೇನೆ ಎಂದು ನನಗೆ ತೋರುತ್ತಿದೆ. ಅದರಿಂದಲೇ ..."ಟೈಮ್ ವೇಸ್ಟ್ ಆಗುತ್ತಿರುವುದು" ಎಂದೆಲ್ಲಾ ಹೇಳಿದೆ. ...ಸೂಲವಾದದೇ ಕೋಪದಿಂದ ಬೈಯುತೊಡಗಿದರು. ...ಎಂದರೆ ಏನು? ವಿಪಸ್ಸನ ಎಂದರೆ ಏನು? ಅದೆಷ್ಟು ...ದಷ್ಟು ನೀವು ಕಾಲ ಕಳೆಯಲು ಇಲ್ಲಿ ಬರಲಿಲ್ಲ, ...ಬಂದಾಗ ನೀವು ಹೋಗುವಂತಿಲ್ಲ, ನಾವು ...ವುದಿಲ್ಲ, ನೀವು ಮುಂಚೆಯೇ ಬರುವಾಗ ಇಲ್ಲಿ ...ದಿನ ಇರಬೇಕೆಂದು ಸೂಚಿಸಲಾಗಿತ್ತು" ಎಂದು ...ಸಿದ್ದರು. ಜೊತೆಗೆ ಇನ್ನಷ್ಟು ಹೇಳಿದರು. ನಿಮಗೆ ...ದೇನು ಬಾಧಿಸಿದೆ ಎಂದೂ, ಇದರಿಂದ ಮಾನಸಿಕ ...ಮತ್ತು ದೈಹಿಕ ಆರೋಗ್ಯವು ವೃದ್ಧಿಸುವುದು ...ನಿಮ್ಮ ಮುಂದಿನ ದಾರಿಯ ವ್ಯವಹಾರಗಳೆಲ್ಲವೂ ...ನಿಮಗೆ ಕೂಡುವುದು ಎಂದೂ ಹೇಳಿದರು.

ನಾನು "ಆಸೆಗಳನ್ನು ಹಿಡಿಸದೇ, ಭಯಪಡಿಸದೇ, ಪ್ರಲೋಭನೆಗಳಿಗೆ ಒಡ್ಡದೇ, ನನ್ನ ಮನವೊಲಿಸಿ, ನನಗೆ ಮನವರಿಕೆ ಮಾಡಿ ನಾನು ಏಕೆ ಇಲ್ಲಿ ಇರಬೇಕೆಂದು? ನಾನೊಬ್ಬ ಸಾಧಾರಣ ಮನುಷ್ಯ, ಏನೂ ತಿಳಿಯದೇ ಇಲ್ಲಿಗೆ ಬಂದಿದ್ದೇನೆ ಎಂದಾದರೆ ನೀವು ಇದರ ಬಗ್ಗೆ ತಿಳಿದಿರುವವರು ನನಗೆ ತರಬೇತಿ ನೀಡಿ. ನನಗೆ ಇಲ್ಲಿ ಇರಬೇಕು ಎಂದು ಅನಿಸಬೇಕು. ನನ್ನ ನಾನು ಇಲ್ಲಿರಲು ಒತ್ತಾಯ ಮಾಡಿಕೊಳ್ಳಬಾರದು. ಇಲ್ಲಿ ನೋಡಿದರೆ ನೀವೇ ನನಗೆ ಒತ್ತಾಯ ಮಾಡುತ್ತಿದ್ದೀರಿ" ಎಂದು ಹೇಳಿದೆ. ನನಗೆ ಆಸೆ ಹಿಡಿಸದೇ ಧ್ಯಾನದ ಅಗತ್ಯವನ್ನು ಮನವರಿಕೆ ಮಾಡಲು ಅವರಿಗೆ ಸಾಧ್ಯವಾಗಲೇ ಇಲ್ಲ. "ನಿಮ್ಮಂತವರು ಬಂದು ಇಲ್ಲಿನ ಪಾವಿತ್ರ್ಯತೆಯನ್ನು ಹಾಳು ಮಾಡುತ್ತೀರಿ. ನಿಮ್ಮಿಂದ ಇತರರೂ ಇದೇ ರೀತಿ ಪಲಾಯನ ಮಾಡುತ್ತಾರೆ" ಎಂದೆಲ್ಲಾ ಬೈಯತೊಡಗಿದರು. ನನಗೆ ಸಿಟ್ಟು ನೆತ್ತಿಗೇರಿ ಅಲ್ಲಿಯೇ ಇದ್ದ ಒಂದು ಕಲ್ಲನ್ನು ಕೈಗೆತ್ತಿಕೊಂಡು ಕೂಗಿದೆ, "ನನ್ನ ಕಳುಹಿಸುತ್ತೀರೋ. ಇದರಲ್ಲಿ ಹೊಡೆಯಲೋ" ಎಂದು. ನನಗೆ ಆಶ್ಚರ್ಯವಾಗುವಂತೆ ಅವರು ಕೂಡಲೇ ಒಪ್ಪಿದರು. ಅವರಿಗೆ ನನ್ನ ಕಂಡು ಭಯವಾಗಿತ್ತು, ಅವರು ನಾನು ಹುಚ್ಚನೆಂದು ತಿಳಿದಿರಲಿಕ್ಕೂ ಸಾಧ್ಯ. ಸೈತಾನಗಳಿಗೆ ಒಳ್ಳೆಯ ಧ್ಯಾನದ ಪ್ರಭಾವದಲ್ಲಿ ಇರಲು ಆಗುವುದಿಲ್ಲವೆಂದೂ, ಅದು ಅಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುವುದೆಂದೂ ತಮ್ಮ ಆಫೀಸಿನಲ್ಲಿ ಇದ್ದವರ ಬಳಿ ಹೇಳುತ್ತಿದ್ದರು. ಈ ಸೈತಾನ್‌ನನ್ನು ಕಳುಹಿಸಿದರು. ಆದರೆ ನನಗೆ ಪತ್ರ ಬರೆದ ಅವರನ್ನೂ ನನ್ನ ಜೊತೆ ಕರೆದುಕೊಂಡು ಹೋಗುತ್ತೇನೆಂದರೆ ಅದಕ್ಕೆ ಒಪ್ಪಲಿಲ್ಲ. ಸೈತಾನ ತನ್ನ ಜೊತೆಗೆ ಇತರರನ್ನೂ ಕರೆದುಕೊಂಡು ಹೋಗಿ ಅವರನ್ನೂ ಸೈತಾನರನ್ನಾಗಿ ಮಾಡುವುದು ಅವರಿಗೆ ಇಷ್ಟವಿರಲಿಲ್ಲ ಅಥವಾ ಅದಕ್ಕೆ ಬಿಡಲಿಲ್ಲ. ಅದರ ಬಗ್ಗೆ ನನಗೆ ತೀರಾ ಖೇದವಾಯಿತು. ಧ್ಯಾನವನ್ನು ಹೇಳಿಕೊಡುವವರ ಬಗ್ಗೆಯೂ ಮತ್ತು ಧ್ಯಾನಕ್ಕೆಂದು ಬರುತ್ತಿರುವವರ ಬಗ್ಗೆಯೂ ತೀರಾ ಕನಿಕರವೆನಿಸಿತು. ಇಬ್ಬರೂ ಕೂಡ ಧ್ಯಾನದ ಗುರಿಯನ್ನಾಗಲಿ ಅಥವಾ ಧ್ಯಾನದ ಪರಿಯನ್ನಾಗಲಿ ಕಂಡುಕೊಳ್ಳುತ್ತಲೇ ಇಲ್ಲವೆಂದು ಎನಿಸಿತು.

ವಿಪಸ್ಸನ ಧ್ಯಾನ

ವಿಪಸ್ಸನ ಎಂದರೆ ಇರುವುದನ್ನು ಇರುವಂತೆಯೇ ನೋಡುವುದು. ತನ್ನನ್ನು ತಾನು ನೋಡಿಕೊಳ್ಳುವ ಮೂಲಕ ತನ್ನನ್ನು ತಾನು ಶುದ್ಧೀಕರಿಸಿಕೊಳ್ಳುವ ಒಂದು ಪ್ರಕ್ರಿಯೆ. ತನ್ನ ಸಾಮಾನ್ಯವಾದ ಉಸಿರಾಟವನ್ನು ಗಮನಿಸಿಕೊಂಡು ಇರುವಾಗ್ಗೆ ದೇಹದಲ್ಲಿ ಮತ್ತು ಮನಸ್ಸಿನಲ್ಲಿ ಉಂಟಾಗುವ ಬದಲಾವಣೆಗಳನ್ನು ಕಂಡುಕೊಳ್ಳುವುದು. ಅಹಂಕಾರರಹಿತವಾದ, ದುಃಖರಹಿತವಾದಂತಹ ಸತ್ಯವನ್ನು ಗ್ರಹಿಸುವುದು ಅದರ ಉದ್ದೇಶವಾಗಿದೆ. ಹಾಗೆಯೇ ವಿಪಸ್ಸನವು ದುಃಖದ ಮೂರು ಮುಖ್ಯ ಕಾರಣಗಳಾದ 1. ವಸ್ತುಗಳು, ವ್ಯಕ್ತಿಗಳು ಅಥವಾ ಅಧಿಕಾರವೇ ಮೊದಲಾದ ಸ್ಥಿತಿ ಅಥವಾ ಭಾವುಕ ಮತ್ತು ಭ್ರಾಮಕ ಸಾಂತ್ವಾನಗಳಿಗೆ ಹಾತೊರೆಯುವಿಕೆ ಅಥವಾ ಹಂಬಲಿಸುವಿಕೆ. 2. ತಿರಸ್ಕಾರ ಅಥವಾ ಉದ್ದೇಶಪೂರ್ವಕವಾಗಿಯೋ ಅಥವಾ ಅನುದ್ದೇಶಪೂರ್ವಕವಾಗಿಯೋ ನಿರಾಕರಿಸುವಿಕೆ ಮತ್ತು 3. ಅಜ್ಞಾನ ಅಥವಾ ಅರಿವಿಲ್ಲದಿರುವುವಿಕೆ. ಆದರೆ ವಿಪಸ್ಸನವೆಂದರೇನೆಂದೇ ಅದನ್ನು ಹೇಳಿಕೊಡುವವರಿಗೆ ತಿಳಿದಿರಲಿಲ್ಲ. ತಮ್ಮ ಕಷ್ಟ ಮತ್ತು ತೊಂದರೆಗಳಿಂದ ಪಲಾಯನ ಮಾಡುವುದೋ ಅಥವಾ ಅದು ಬರದಿರುವಂತೆ ತಡೆಯುವುದೋ ಎಂಬಂತೆ ವರ್ತಿಸುತ್ತಿದ್ದರು.

ಧ್ಯಾನವು ಗುರಿಯೇ, ದಾರಿಯೇ?

ಮೊದಲನೆಯದಾಗಿ ಧ್ಯಾನವನ್ನು ಮಾಡುವುದಲ್ಲ ಆಗುವುದು ಎಂಬ ಸತ್ಯವೇ ಎಷ್ಟೋ ಧ್ಯಾನಿಗಳಿಗೆ ತಿಳಿದಿಲ್ಲ. ಧ್ಯಾನವೆಂಬುದು ಮಾರ್ಗವಲ್ಲ ಗುರಿ. ಆದರೆ ಬಹಳಷ್ಟು ಜನರು ಧ್ಯಾನವನ್ನು ದಾರಿ ಎಂದು ತಿಳಿದು, ಅದೆಂತದ್ದೋ ಅಭೂತಪೂರ್ವ, ಅನುರೂಪವಾದ, ಅಪ್ರತಿಮವಾದಂತಹ ಅನುಭವಕ್ಕೆ ಎದುರು ನೋಡುತ್ತಾ ಧ್ಯಾನತಂತ್ರಗಳಿಗೆ ಮೊರೆಹೋಗುತ್ತಾರೆ. ತಂತ್ರಗಳನ್ನೇ ಧ್ಯಾನವೆಂದು ತಿಳಿಯುತ್ತಾರೆ. ಹಾಗಾಗಿಯೇ ಧ್ಯಾನ ಮಾಡುವುದು ಎಂದು ಹೇಳುವುದು. ಪದ್ಮಾಸನದಲ್ಲಿ ಕುಳಿತುಕೊಂಡು ಕಣ್ಣುಮುಚ್ಚಿ ಚಿನ್ಮುದ್ರೆಯನ್ನೋ ಅಥವಾ ಇನ್ನ್ಯಾವುದೋ ಮುದ್ರೆಯನ್ನೋ ಹಾಕಿಕೊಂಡು ಕುಳಿತುಕೊಳ್ಳುವುದು ಧ್ಯಾನವಲ್ಲ. ಅದು ತಂತ್ರ. ಧ್ಯಾನವು ಸಂಭವಿಸುವುದು. ಅದು ಯಾವಾಗಲಾದರೂ ಆಗ ಬಹುದು. ಅದರ ಅನುಭವ ಇಂತದ್ದೇ ಅಂತೇನೂ ಹೇಳಲು ಸಾಧ್ಯವಾಗುವುದಿಲ್ಲ.

ಎಷ್ಟೆಷ್ಟೋ ಧ್ಯಾನ ಶಿಬಿರಗಳಲ್ಲಿ ಹಾದುಹೋಗಿದ್ದೇನೆ. ಮೈಮರೆಯುವಂತೆ, ಕುಡಿದಾಗಲೋ ಅಥವಾ ಮಾದಕವಸ್ತುಗಳನ್ನು ತೆಗೆದುಕೊಂಡಾಗ ಆಗುವಂತೆ, ಅವುಗಳನ್ನು ತೆಗೆದುಕೊಳ್ಳದೆಯೇ ಮೈಮರೆಯುವುದು ಅಲ್ಲಿನವರ ಒಂದು ನಿರೀಕ್ಷೆಯಾಗಿರುತ್ತದೆ. ಮೈ ಜುಂ ಎನಿಸಬೇಕು. ತನ್ನ ತಾನು ಮರೆಯಬೇಕು. ಹಿಂದಿನದು ಮತ್ತು ಮುಂದಿನದನ್ನು ಮರೆತು ಬರಿದೇ ಅಲ್ಲಿ ಆರಾಮವಾಗಿ ಇರುವುದಾದರೆ ಧ್ಯಾನವೆಂದೇಕೆ ಮಾಡಬೇಕು?

ಬರಿದಾಗಿಸಿಕೊಳ್ಳುವ ಮನದ ಬಟ್ಟಲುಗಳನ್ನು

ಓಶೋ ಧ್ಯಾನ ಶಿಬಿರಗಳಲ್ಲಿ ಮನಸ್ಸಿನಲ್ಲಿ ಮಡುಗಟ್ಟಿರುವ ಹಳೆಯ ಜಡ್ಡುಗಟ್ಟಿರುವ ಭಾವನೆಗಳನ್ನು, ವಿಚಾರಗಳನ್ನು, ಕೋಪಾವೇಶ, ನಿರಾಶೆ ಮತ್ತು ಹತಾಶೆಗಳನ್ನು ಹೊರಗೆ ದಬ್ಬಲು ಕೆಲವು ತಂತ್ರಗಳನ್ನು ಉಪಯೋಗಿಸುತ್ತಾರೆ. ಅವುಗಳು ಕೆಲವೊಮ್ಮೆ ಕ್ರೀಡೆಯಂತೆಯೂ, ಮನರಂಜನೆಯಂತೂ ಕಾಣಬಹುದು. ಆದರೆ ಸಂಪೂರ್ಣ ಮುಕ್ತವಾದ ವಾತಾವರಣವೂ ಮತ್ತು ಮನಸ್ಕರೂ ಅಲ್ಲಿ ಇರುವುದರಿಂದ ಅಥವಾ ಇರುತ್ತಾರೆಂದು ಭಾವಿಸುವುದರಿಂದ ಮುಕ್ತವಾಗಿ ಮನಸ್ಸಿನ ಕ್ಲೇಶಗಳನ್ನು ಹೊರಗೆ ಹಾಕಿಕೊಳ್ಳಲು ಸಾಕಷ್ಟು ಅಸ್ಪದ ದೊರೆಯುತ್ತದೆ. ಅದಾದ ಮೇಲೆ ಒಂದು ಹಂತಕ್ಕೆ, ಅವುಗಳಂತವನ್ನು ಮತ್ತೆ ಮನಸ್ಸಿಗೆ ತಂದುಕೊಳ್ಳದಿರುವಂತಹ ತಿಳಿವಳಿಕೆಯನ್ನು ಪ್ರವಚನ ಮತ್ತು ಧ್ಯಾನ ತಂತ್ರಗಳ ಮೂಲಕ ಇರುವುದಕ್ಕೆ ಹೇಳಿಕೊಡುತ್ತಾರೆ. ಭಿನ್ನರೀತಿಯ ಧ್ಯಾನ ಮತ್ತು ಮುಕ್ತವಾದ ಅಧ್ಯಾತ್ಮಗಳನ್ನು ತಿಳಿದಿರುವವರಿಗೆ ಓಶೋ ಧ್ಯಾನ ಶಿಬಿರಗಳು ಪೂರಕವಾಗಿ ಕೆಲಸ ಮಾಡಿದರೆ, ಸಂಪ್ರದಾಯಸ್ಥ ಅಥವಾ ಕುಲಾಚಾರಗಳ ಮೂಲಕ ಬಂದಿರುವವರಿಗೆ ಒಪ್ಪಿಕೊಳ್ಳಲಾಗದಿರುವಂತೆ ಅಥವಾ ಬೇರೆಯೇ ಹೊಸತಾದ ಮಾದರಿ ಚಿಂತನೆಗಳನ್ನು ಕೊಡುವುದು ಕೂಡ ಆಗಬಹುದು.ಧ್ಯಾನ ಶಿಬಿರಗಳಲ್ಲಿ ಕೆಲವರು ವರ್ತಿಸುವುದನ್ನು ನೋಡಿದರೆ, ಮಾಂಕಾಳಿ ದೇವಸ್ಥಾನದಲ್ಲಿ ದೇವರು ಮೈಮೇಲೆ ಬರುವಾಕೆಗೂ, ಶನಿದೇವರ ಪೂಜಾರಿ ಮೇಲೆ ಶನಿದೇವರು ಬಂದು ಆಡುವುದಕ್ಕೂ ಹೆಚ್ಚೇನೂ ವ್ಯತ್ಯಾಸವಿರುತ್ತಿರಲಿಲ್ಲ. ಹೆಚ್ಚೂಕಡಿಮೆ ಅದೇ ಬಗೆಯ ಕೂಗಾಟ, ಚೀರಾಟ. ಅದೂ ಪ್ರಾಮಾಣಿಕವಾಗಿ ಹೊರಬಿದ್ದು, ಧ್ಯಾನಶಿಬಿರದಿಂದ ಹೊರಗೆ ಹೋಗುವಾಗ ಹೊಸ ಮನುಷ್ಯನಾಗಿ ಹೋಗುವಂತೆಯೂ ಇರುತ್ತಿರಲಿಲ್ಲ.

ಸಂನ್ಯಾಸಿ

ತಮಿಳುನಾಡಿನ ಹೊಸೂರು ಬಳಿಯ ತಳಿಯ ಬಳಿ ಒಂದು ಆಶ್ರಮ. ಅಲ್ಲಿನ ಓಶೋ ಧ್ಯಾನ ಶಿಬಿರದಲ್ಲಿ ಓರ್ವ ವಿದೇಶಿ ಧ್ಯಾನಿಯು ನನ್ನ ಜೊತೆ ಮಾತಾಡುವಾಗ ಹೇಳಿದ "ಧ್ಯಾನಕ್ಕೂ ಮತ್ತು ಮೈಮರೆಯುವಿಕೆಗೂ ವ್ಯತ್ಯಾಸವಿದೆ ಎಂದು ಇಲ್ಲಿ ಬಹಳಷ್ಟು ಜನಕ್ಕೆ ಗೊತ್ತಾಗುತ್ತಿಲ್ಲ. ನಿರ್ದೇಶನಗಳನ್ನು ಕೊಡುವಾಗ ಇರುವಂತಹ ವ್ಯಕ್ತಿ ಧ್ಯಾನದ ಸ್ಥಳದಿಂದ ಹೊರಕ್ಕೆ ಬಂದಕೂಡಲೇ ಇನ್ನಾವುದೋ ರೀತಿಯಲ್ಲಿ, ಪ್ರಾಯಶಃ ತನ್ನ ಹಳೆಯ ರೀತಿಯಲ್ಲಿಯೇ ವರ್ತಿಸುತ್ತಾನೆ. ಅವನಿಗೆ ಧ್ಯಾನಕ್ಕಿಂತ ಉತ್ತಮವೆಂದರೆ ಬಾರ್‌ನಲ್ಲಿ ಕುಡಿಯುವುದು. ಅದು ಅಷ್ಟೇ ಪರಿಣಾಮ ಬೀರುತ್ತದೆ."

"ಆದರೆ, ಹಾಗೆ ಹೆಚ್ಚು ಹೆಚ್ಚು ಕುಡಿಯುವುದರಿಂದ ಮೈ ಆರೋಗ್ಯ ಹಾಳಾಗುತ್ತದೆ. ಇಲ್ಲಿ ಆ ಅಪಾಯವಿಲ್ಲ" ಎಂದೆ.

"ಈ ರೀತಿಯ ಹುಸಿ ಧ್ಯಾನಗಳನ್ನು ಮಾಡುತ್ತಾ ಧ್ಯಾನದ ಭ್ರಾಂತಿಯಿಂದಾಗಿ ಮನಸ್ಸಿನ ಆರೋಗ್ಯ ಹಾಳಾಗುತ್ತದೆಯಲ್ಲಾ, ಇದು ದೈಹಿಕ ತೊಂದರೆಗಿಂತ ಪರವಾಗಿಲ್ಲವೆಂದು ಹೇಳುವೆಯಾ?" ಎಂದು ಕೇಳಿದ.

ಆ ಶಿಬಿರದಲ್ಲಿಯೇ ನಾನು ಓಶೋ ಆರ್ಡರ್‌ನಲ್ಲಿ ಸಂನ್ಯಾಸಿಯಾದೆ. ನನ್ನ ಹೆಸರು ಸ್ವಾಮಿ ಚೇತನ್ ಪ್ರೇಮೇಂದ್ರ ಎಂದು ಆದರಿಟ್ಟಿದ್ದರು. ನನ್ನ ಕೊರಳಲ್ಲಿರುವ ಮಣಿಯ ಸರವನ್ನೂ ಅದರಲ್ಲಿರುವ ಓಶೋವಿನ ಡಾಲರ್ ನೋಡಿ ಆ ವಿದೇಶಿ ಮತ್ತಷ್ಟು ಜೋರಾಗಿ ನಕ್ಕ. ನಾನು ಖಂಡಿತವಾಗಿ ಓಶೋ ಅನುಯಾಯಿ ಅಲ್ಲ, ಆದರೆ ಯಾವ ಪೂರ್ವಾಗ್ರಹವೂ ಇಲ್ಲದೇ ಆತನ ಮಾತನ್ನು ಕೇಳಿಸಿಕೊಳ್ಳಲು ತೆರೆದುಕೊಂಡಿದ್ದೇನೆ ಎಂದಿದ್ದ ನನ್ನ ಮಾತನ್ನು ನೆನಪಿಸಿ "ನೀನೂ ಕೂಡ ಸಿಕ್ಕಿಬಿದ್ದೆ" ಎಂದ. ನಾನು "ನಾನು ಸಿಕ್ಕಿಬೀಳುವುದಿಲ್ಲ ಎಂಬ ಭ್ರಾಂತಿಗೆ ನಾನು ಸಿಕ್ಕಿ ಬಿದ್ದಿಲ್ಲ, ಆದರೆ ಈ ಒಂದು ಮಣಿಸರ ಸುಂದರವಾಗಿದೆ. ಈಗ ತೊಡುತ್ತೇನೆ. ಈ ಡಾಲರ್ ಚೆನ್ನಾಗಿದೆ. ಇರಲಿ ತೊಂದರೆಯೇನೂ ಇಲ್ಲ, ಯಾವ ಪೂರ್ವಾಗ್ರಹವೂ ಇಲ್ಲದೇ ಇದನ್ನು ಪ್ರಶಂಸೆ ಮಾಡಲು ನನಗೇನೂ ಸಮಸ್ಯೆಯಿಲ್ಲ, ಇಂದು ನಾನು ಸಂನ್ಯಾಸಿ. ಆದರೆ ನನ್ನ ಸಂನ್ಯಾಸವು ಹೀಗೇ ಇರಬೇಕೆಂದು ನಾನು ಹಟಕ್ಕೆ ಬಿದ್ದಿಲ್ಲ" ಎಂದೆ.


ಆತನಿಗೆ ನನ್ನ ಮಾತು ಹಿಡಿಸಿತು. ನಾವಿಬ್ಬರೂ ಬಹಳ ಕಾಲ ಭಾರತದಲ್ಲಿ ಜೊತೆಜೊತೆಯಾಗಿ ಅಲೆದಾಡಿದೆವು. ಆತ ಜರ್ಮನಿಯವನು. ಫ್ರಾನ್ಸಿಸ್ ಜೇವಿಯರ್ ಎಂಬ ಕ್ರೈಸ್ತ ಪಾದ್ರಿ. ಯಾವುದಕ್ಕೂ ಅಂಟಿಕೊಳ್ಳದೇ ಎಲ್ಲವನ್ನೂ ಸಾಕ್ಷೀಕರಿಸುವ ನನ್ನ ಮಾತುಗಳನ್ನು ಕೇಳುತ್ತಾ, ನಾವಿಬ್ಬರೂ ನಾನಾ ವಿಷಯವಾಗಿ ಸಂವಾದ ಮಾಡುತ್ತಾ ಯಾವುದ್ಯಾವುದೋ ಧಾರ್ಮಿಕ ಸಂಸ್ಥೆಗಳಿಗೆ, ದೇವಸ್ಥಾನ, ಮಸೀದಿ - ದರ್ಗಾಗಳಿಗೆ, ಗುರುದ್ವಾರ, ಚರ್ಚುಗಳಿಗೆ, ಚಿನ್ಮಯ ಮಿಷನ್, ಪರಮಹಂಸ ಯೋಗಾನಂದರ ಧ್ಯಾನ ಕೇಂದ್ರ, ಇಸ್ಕಾನ್, ರವಿಶಂಕರ್‌ನ ಆರ್ಟ್ ಆಫ್ ಲೀವಿಂಗ್‌ನ ಸುದರ್ಶನ ಕ್ರಿಯಾ ಮೊದಲಾದ ಧ್ಯಾನ ತರಬೇತಿಗಳಿಗೆ, ಶಿರಡಿ ಬಾಬಾನ ದೇವಸ್ಥಾನಕ್ಕೂ, ಸತ್ಯಸಾಯಿಬಾಬಾನ ಭಾಷಣಗಳಿಗೂ, ಮಾತೆ ಮಹಾದೇವಿಯ, ಜೆ.ಕೃಷ್ಣಮೂರ್ತಿಯ ಪ್ರವಚನಗಳಿಗೂ ಹೋಗುತ್ತಿದ್ದೆವು. ಬಹುಪಾಲು ಅಲ್ಲಿಗೆ ಬಂದವರಲ್ಲಿ ನಾವು ಕಾಣುತ್ತಿದ್ದದ್ದು ಹುಸಿ ಗಾಂಭೀರ್ಯವನ್ನು, ಆಧ್ಯಾತ್ಮವೆಂದರೆ ಇಂಥದ್ದೇನೋ ಎಂಬಂತೆ ವಿಶೇಷವಾದ ರೀತಿಯ ಮಾತುಗಳನ್ನು, ಚಲನವಲನಗಳನ್ನು ತೋರಿಸುತ್ತಿದ್ದರು. ಕೆಲವರಷ್ಟೇ ತೀರಾ ಸಹಜವಾಗಿ ಮತ್ತು ಯಾವ ಕೃತಕತೆಗಳಿಲ್ಲದೇ ಇರುತ್ತಿದ್ದದ್ದು. ನಮ್ಮ ಗ್ರಹಿಕೆಯಲ್ಲಿ ಅವರು ಈ ಧ್ಯಾನ ಶಿಬಿರಗಳಿಗೆ ಬರದಿದ್ದರೂ ಹಾಗೇ ಇರುವವರು ಎನಿಸುತ್ತದೆ. ಆದರೆ, ಅಂತಹ ವಿಚಾರಗಳು ಇದ್ದುದರಿಂದ ಅವರು ಇಲ್ಲಿ ಸಮಯವನ್ನು ವ್ಯಯ ಮಾಡುತ್ತಿದ್ದರು ಎಂದೇ ಎನಿಸುತ್ತದೆ.

ಇದ್ದಲ್ಲೇ ಕಂಡುಕೊಳ್ಳಲು ಸಾಧ್ಯವಿರುವಂತಹ ಸಂಕೋಲೆ ಮುಕ್ತ ಅನುಭವ ಮತ್ತು ಅವಕಾಶವನ್ನು ಹುಡುಕುತ್ತಾ ನಾವಿಬ್ಬರೂ ಈ ರೀತಿಯ ಅನ್ವೇಷಣೆಗಳನ್ನು ಮಾಡುತ್ತಾ ಎಲ್ಲಿ ಮತ್ತು ಯಾವ ರೀತಿಯ ತಂತ್ರವನ್ನು ಮತ್ತು ಬೋಧನೆಯನ್ನು ನೀಡಿ ಧ್ಯಾನದ ಸ್ಥಿತಿಯನ್ನು ಸಾಮಾನ್ಯ ಜನರಿಗೆ ಪರಿಚಯಿಸುವರು ನೋಡೋಣ ಎಂದು ಬಹಳಷ್ಟು ಅಲೆದಾಡಿದೆವು. ಒಂದು ಕಡೆ ನೈತಿಕತೆಗೆ ಪ್ರಾಮುಖ್ಯತೆ ಕೊಡುತ್ತಾ ಅನೈತಿಕತೆಯ ಮತ್ತೊಂದರ ಬಗ್ಗೆ ಹೆದರಿಸಿಡುತ್ತಿದ್ದರು. ಮತ್ತೊಂದು ಕಡೆ ಪಾವಿತ್ರ್ಯತೆ ಮತ್ತು ಅಪವಿತ್ರತೆ ಬಗ್ಗೆ ದಿಗಿಲು ಹುಟ್ಟಿಸುತ್ತಿದ್ದರು. ಮತ್ತೊಂದು ಕಡೆ ಮಾನಸಿಕ ರೋಗಿಗಳಿಗೆ ಸಮಾಲೋಚನೆಗಳ ದ್ವಂತಿರುತ್ತಿತ್ತು. ಮತ್ತೊಂದು ಕಡೆ ತಮ್ಮ ಲಾಂಛನವೇ ಮುಕ್ತಿದಾಯಕ, ಇತರ ಎಲ್ಲಾ ಲಾಂಛನಗಳನ್ನು ಕಟ್ಟಿಕೊಂಡಿರುವುದರಿಂದಲೇ ಮುಕ್ತಿಯೆಂಬುದಿಲ್ಲ ಎಂಬ ಭ್ರಾಮಕ ಭಾಷಣಗಳು.

ಕೊನೆಗೆ ಆ ರೋಮನ್ ಕ್ಯಾಥೋಲಿಕ್ ಪಾದ್ರಿ ಫ್ರಾನ್ಸಿಸ್ ಜೇವಿಯರ್ ತಮ್ಮ ಭಾರತದಲ್ಲಿರುವ ಅವಧಿಯು ತೀರಿದ ಬಳಿಕ ಜರ್ಮನಿಗೆ ಹೋದರು. ಮೂರಾಲ್ಕು ತಿಂಗಳಲ್ಲಿ ಒಂದು ಪತ್ರ ಬರೆದರು. ಅದರಲ್ಲಿ ತಾನು ಇನ್ನು ಪಾದ್ರಿಯಾಗಿ ಉಳಿದಿಲ್ಲವೆಂದೂ, ಅದನ್ನು ಬಿಟ್ಟುಬಿಟ್ಟಿರುವುದಾಗಿಯೂ, ತನ್ನನ್ನು ಈಗ ಕ್ರೈಸ್ತನೆಂದುಕೊಂಡರೂ ತಮಾಷೆಯಾಗಿ ಕಾಣುವುದಲ್ಲದೇ, ತಾನು ಸುಳ್ಳು ಹೇಳುತ್ತಿದ್ದೇನೆ ಎನಿಸುತ್ತದೆ ಎಂದು ತಿಳಿಸಿದ್ದರು. ಅದಕ್ಕೆ ಕಾರಣ ನಿನ್ನೊಡನೆಯ ಒಡನಾಟವೇ ಎಂದು (ಹಾಸ್ಯಕ್ಕೆ) ಹೇಳಿದ್ದರು. ಇದು ಕಾಂಪ್ಲಿಮೆಂಟ್ ಅಥವಾ ಕಂಪ್ಲೇಂಟ್ ಯಾವುದೇ ಆದರೂ ಒಪ್ಪುವುದೂ ಇಲ್ಲ ಮತ್ತು ನಿರಾಕರಿಸುವುದೂ ಇಲ್ಲ ಬರಿದೇ ನೋಡುತ್ತೇನೆ ಎಂದು ಉತ್ತರಿಸಿದೆ.


"ಆಹಾ, ತಪ್ಪಿಸಿಕೊಳ್ಳುವುದಕ್ಕೆ ಕ್ಲಳನಿಗೆ ಸುಲಭವಾಗಿರುವುದು ಸಾಕ್ಷೀಕರಿಸುವುದಕ್ಕಿಂತ ಯಾವುದಿರಬೇಕು?" ಎಂದು ಕೀಟಲೆಯ ಮತ್ತೊಂದು ಪತ್ರ ನನಗೆ ತಲುಪಿತ್ತು.

ಆದರೆ, ಹರ್ಮನ್ ಹೆಸ್ಸೆಯ 'ಸಿದ್ಧಾರ್ಥ' ಇವರ ಬಗ್ಗೆ ಮತ್ತಷ್ಟು ಒಳನೋಟಗಳನ್ನು ನಮಗೆ ಕೊಟ್ಟಿತು. ಸಿದ್ಧಾರ್ಥನನ್ನು ಮುಂದಿನವಾರದಲ್ಲಿ ಅರ್ಥೈಸಿಕೊಳ್ಳೋಣ.



ಯೋಗ ಜನರಿಗೆ ಕೈಕೊಡುತ್ತಿದೆ

ಜೂನ್ 21 ಕ್ಕೆ ಮೋದಿಯವರ ಕೇಂದ್ರ ಸರಕಾರ 35 ಕೋಟಿ ರೂಪಾಯಿ ಖರ್ಚು ಮಾಡಿ ವಿಶ್ವ ಯೋಗ ದಿನವನ್ನು ಆಚರಿಸಿತು. ಇತರ ಸರಕಾರಿ ಇಲಾಖೆಗಳು ಸಂಘಸಂಸ್ಥೆಗಳು ಮತ್ತು ಶಾಲೆ-ಕಾಲೇಜುಗಳು ಮಾಡಿದ ಖರ್ಚುಗಳನ್ನು ಒಟ್ಟುಗೂಡಿಸಿದರೆ ಈ ವಿಶ್ವ ಯೋಗ ದಿನಾಚರಣೆಗೆ ನೂರು ಕೋಟಿ ರೂಪಾಯಿಗೂ ಹೆಚ್ಚು ಕರದಾತರ ಹಣ ಖರ್ಚಾಗಿದೆ. ಆದರೆ ಕೇವಲ ಎರಡೇ ತಿಂಗಳಲ್ಲಿ ತಮ್ಮ ಹಿಂದಿನ ವ್ಯಾಯಾಮಗಳನ್ನು ಬಿಟ್ಟು ಹೊಸದಾಗಿ ಯೋಗ ಶುರು ಮಾಡಿದವರಿಗೆ ಆರೋಗ್ಯ ಸಮಸ್ಯೆಗಳು ಒಮ್ಮೆಲೇ ಮರುಕಳಿಸುತ್ತಿವೆ.



ನಡು ವಯಸ್ಸು ದಾಟಿದವರಿಗೆ ನಿಯಮಿತ ದೇಹ ದಣಿಸುವ ವ್ಯಾಯಾಮಗಳನ್ನು ಡಾಕ್ಟರು ಸೂಚಿಸಿದ್ದು ಅದನ್ನು ತುಂಬಾ ಸಮಯದಿಂದ ಮಾಡುತ್ತಿದ್ದವರಿಗೆ ಒಮ್ಮೆಲೇ ಅದನ್ನು ನಿಲ್ಲಿಸಿ ಸ್ಲೋ-ಮೋಷನ್ ವ್ಯಾಯಾಮವೆಂದೇ ಕರೆಯಲಾಗುವ ಯೋಗ ಶುರು ಮಾಡಿದ ಕೂಡಲೇ ಆರೋಗ್ಯ ಸಮಸ್ಯೆಗಳು ಉಲ್ಬಣಿಸಿವೆ. ಬೆಳಗಿನ ವೇಗ ನಡಿಗೆ ಜಾಗಿಂಗ್ ಇವುಗಳಿಗೆ ಯೋಗ ಎಂದೂ ಪರ್ಯಾಯವಾಗಲಾರದು ಎಂದು ಆರೋಗ್ಯ ಪರಿಣಿತರೇ ಹೇಳುತ್ತಾರೆ. ಆದರೆ ಯೋಗದ ಪರವಾಗಿ ಸರಕಾರದ ಹೈ-ಪಿಚ್ ಪ್ರಚಾರದ ನಡುವೆ ಆರೋಗ್ಯ ಪಂಡಿತರ ಅಭಿಪ್ರಾಯಗಳಿಗೆ ಮನ್ನಣೆ ಸಿಗಲಿಲ್ಲ. ಆದರ ಪರಿಣಾಮ ಈಗ ಕೆಲವರು ಅನುಭವಿಸುತ್ತಿದ್ದಾರೆ.

ಟಿವಿಗಳಲ್ಲಿ ಚೆಂದುಳ್ಳಿ ಚೆಲುವೆಯರು ಅತ್ಯಲ್ಪ ಬಟ್ಟೆ ಧರಿಸಿ ತಮ್ಮ ಆಸ್ತಿಪಾಸ್ತಿ ಪ್ರದರ್ಶಿಸುತ್ತಾ ಮಾಡುವ ಯೋಗಾಸನಗಳನ್ನು ನೋಡುವಾಗ ಪಡ್ಡೆಗಳ ಮನದಲ್ಲಿ ಬುರುಗು ಹುಟ್ಟುವುದು ಮತ್ತು ಬಾಯಲ್ಲಿ ಜೊಲ್ಲು ಸುರಿಯುವುದು ನಿಜ. ಆದಕ್ಕಾಗಿಯೇ ಟಿವಿಯವರು ಟಿಆರ್‌ಪಿ ಏರಿಸಲು ಸೆಕ್ಸ್ ಅಪೀಲ್ ಮೂಲಕ ಯೋಗದ ಪ್ರಚಾರಕ್ಕೆ, ಹದಿಹರೆಯದ ಮಾಟವಾದ ಮೈಯ ಹುಡುಗಿಯರನ್ನೇ ಬಳಸುತ್ತಾರೆ. ಆದರೆ ಅವರ ಮೈಮಾಟದ ಗುಟ್ಟು ಯೋಗವಲ್ಲ ಶ್ರಮವುಳ್ಳ ವ್ಯಾಯಾಮಗಳಿಂದ ಅವರು ಮೈಮಾಟ ಗಳಿಸಿದ್ದು ಎಂಬ ಗುಟ್ಟು ಜನರು ಅರಿತುಕೊಳ್ಳಬೇಕು. ಟಿವಿಗಳಲ್ಲಿ ಯೋಗ ಪ್ರಚಾರಕ್ಕೆ ಗಂಡಸರನ್ನು ಯಾಕೆ ಬಳಸುತ್ತಿಲ್ಲವೆಂದರೆ ಯೋಗದಿಂದ ಗಂಡಸರು ಹುರಿಗಟ್ಟಿದ ದೇಹ ದಾರ್ಢ್ಯ ಗಳಿಸಲು ಸಾಧ್ಯವಿಲ್ಲ ಎಂದು ಸಾಬೀತಾಗುತ್ತದೆ. ಯೋಗದಲ್ಲಿ ಉಸಿರಾಟದ ವ್ಯಾಯಾಮಗಳಿಂದ ನಿಜವಾದ ಲಾಭವಿದೆಯೆಂದು ಮಾತ್ರ ಆರೋಗ್ಯ ಪಂಡಿತರು ಹೇಳುತ್ತಾರೆ. ಹಾಗಾಗಿ ತಮ್ಮ ಹಳೆಯ ದೇಹ ದಣಿಸುವ ಪರಿಶ್ರಮದ ವ್ಯಾಯಾಮಗಳೊಟ್ಟಿಗೆ ಸ್ವಲ್ಪ ಸಮಯ ತೆಗೆದು ಯೋಗದ ಉಸಿರಾಟದ ವ್ಯಾಯಾಮ ಮಾಡುವುದು ಒಳಿತು ಎಂಬುದು ಡಾಕ್ಟರುಗಳ ಸಲಹೆ. ವೇಗವಾದ ವ್ಯಾಯಾಮಗಳಿಗೆ ಯೋಗ ಎಂದೂ ಸರಿಸಾಟಿ ಆಗಲಾರದೆಂದು ಕೇವಲ ಎರಡೇ ತಿಂಗಳಲ್ಲಿ ಸಾಬೀತಾಗಿದೆ.

ಅದೇ ಜೂನ್ ತಿಂಗಳ ಕೊನೆಯ ವಾರದ ಮನ್-ಕೀ-ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಅದೇ ಪ್ರಧಾನಿ ಮೋದಿಯವರು ಮಳೆ ನೀರಿನ ಕೊಯ್ಲಿನ ಅಗತ್ಯದ ಬಗ್ಗೆ ಹೇಳಿದ್ದು ನಿಜಕ್ಕೂ ಸ್ವಾಗತಾರ್ಹ. ಆದರೆ ಪ್ರಧಾನಿಯವರ ಈ ಸಲಹೆಗೆ ಅವರ ಸರಕಾರವೇ ಹೆಚ್ಚು ಪ್ರಚಾರ ಕೊಡಲಿಲ್ಲ. ಯೋಗಕ್ಕೆ ಕೊಟ್ಟಷ್ಟೇ ಪ್ರಚಾರ ಮತ್ತು ಹಣವನ್ನು ಮಳೆ ನೀರಿನ ಕೊಯ್ಲಿನ ಪ್ರಚಾರಕ್ಕೂ ಕೊಟ್ಟಿದ್ದರೆ ಅದು ಸಾರ್ಥಕ ಎನಿಸುತ್ತಿತ್ತು. ನಮ್ಮ ದೇಶದಲ್ಲಿ ಭೂಮಿಯಡಿಯ ಅಂತರ್-ಜಲ ತೀವ್ರವಾಗಿ ಕುಸಿಯುತ್ತಿದ್ದು ಭವಿಷ್ಯದಲ್ಲಿ ಎಲ್ಲೆಡೆಯೂ ನೀರಿನ ಕೊರತೆ ತೀವ್ರವಾಗಿ ಕಾಡಲಿದೆ. ಹಾಗಾಗಿ ಮಳೆ ನೀರಿನ ಕೊಯ್ಲನ್ನು ಯಾವುದಾದರೂ ದೇವರಿಗೆ ಜೋಡಿಸಿದರೆ ಕಡೇ ಪಕ್ಷ ಮೂಢನಂಬಿಕೆಯಿಂದಾದರೂ ಬಿಜೆಪಿ ಸರಕಾರ ಮತ್ತು ಜನಸಾಮಾನ್ಯರು ಮಳೆ ನೀರಿನ ಕೊಯ್ಲಿಗೆ ಹೆಚ್ಚು ಮಹತ್ವ ಕೊಡುಬಹುದೇನೋ!

- ಆರ್.ಬಿ. ಶೆಣವ, ಮಂಗಳೂರು

ಸರ್ಕಾರಕ್ಕೆ ಕೇಳಿಸುತ್ತಿಲ್ಲ ಅನ್ನಪೂರ್ಣೆಯರ ಗೋಳು

ರಾಜ್ಯದಲ್ಲಿ 2004 ರಿಂದ ಪ್ರಾರಂಭವಾಗಿರುವ ಜನಪ್ರಿಯ ಯೋಜನೆ ಸರ್ಕಾರಿ ಶಾಲೆಗಳಲ್ಲಿನ ಬಿಸಿ ಊಟ ಯೋಜನೆ. 1ನೇ ತರಗತಿಯಿಂದ 10ನೇ ತರಗತಿವರೆಗೆ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಬಂದ ಸರ್ಕಾರಗಳೆಲ್ಲ ಬಿಸಿ ಊಟ ಯೋಜನೆಯನ್ನು ಅಭಿವೃದ್ಧಿಪಡಿಸುತ್ತಾ ಬಂದಿವೆ. ತರಹೇವಾರಿ ಭಕ್ಷ್ಯಗಳನ್ನು ಘೋಷಿಸುವ ಸರ್ಕಾರ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಶ್ರಮಿಕರನ್ನು ಮರೆತುಬಿಟ್ಟಿದೆ. ಶಾಲೆಗಳ ಅಡುಗೆ ಕಾರ್ಮಿಕರ ಗೋಳು ಕೇಳುತ್ತಿಲ್ಲವೇ?

ಮುಖ್ಯಅಡುಗೆ ಕಾರ್ಮಿಕರ ವೇತನ 1900/ ರೂ, ಸಹಾಯಕರಿಗೆ 1700/ರೂ ನೀಡುತ್ತಿದೆ. ಸರ್ಕಾರ 80 ಮಕ್ಕಳಿಗೆ ತಲಾ ಒಬ್ಬರಂತೆ ನೇಮಿಸಿದೆ. ರಾಜ್ಯಾದ್ಯಂತ ಸಮೀಕ್ಷೆಯ ಪ್ರಕಾರ ಶೇ 90 ಭಾಗ ಮಹಿಳಾ ಕಾರ್ಮಿಕರಿದ್ದು ಅವರ ಬವಣೆಗಳಿಗೆ ಬೆಲೆ ಇಲ್ಲದಂತಾಗಿದೆ. ಈ ಕಾರ್ಮಿಕರಿಗೆ ಯಾವುದೇ ರೀತಿಯ ಇಎಸ್‌ಐ, ಪಿಫ್ ರೀತಿಯ ಸೌಲಭ್ಯವಿಲ್ಲ, ದಿನಗೂಲಿಯಂತೆ ಅವರಿಗೆ ಸಂಬಳ ನೀಡುತ್ತಾರೆ. ಅವರಿಗೆ ರಜೆಯೇ ಇಲ್ಲ, ಆಕಸ್ಮಿಕವಾಗಿ ರಜೆಯಾದರೆ ಸಂಬಳ ಕಡಿತಗೊಳಿಸುತ್ತಾರೆ. ಲೆಕ್ಕಾಚಾರವಾಗಿ ನೋಡಿದರೆ ಅವರಿಗೆ ದಿನಕ್ಕೆ 63 ರೂ. ಆಗುತ್ತದೆ. ನರೇಗಾದಲ್ಲಿ ದಿನಕ್ಕೆ 204 ರೂ. ಕೂಲಿ ಕೊಡುತ್ತಾರೆ. ಯಾಕೆ ಈ ತಾರತಮ್ಯ?

ಇದು ನಮ್ಮ ಮುಂದೆ ನಡೆಯುತ್ತಿರುವ ಅನ್ಯಾಯ ಎಂದರೆ ತಪ್ಪಾಗಲಾರದು. ಕಾಯಂ ನೌಕರಾತಿ ಇಲ್ಲ, ಅವರ ಮಕ್ಕಳಿಗೆ ಯಾವುದೇ ಸೌಕರ್ಯವಿಲ್ಲ, ದಶಕಗಳಿಂದ ಹೋರಾಟ ನಡೆಸಿದರೂ ಪ್ರಯೋಜನವಿಲ್ಲ, ಕೆಲಸ ಮಾಡುವ ಜಾಗದಲ್ಲಿ ಕಿರುಕುಳ ಹೇಳತೀರದು. ಶಾಲೆಯಿಂದ ಹಿಡಿದು ಎಸ್‌ಡಿಎಂಸಿವರೆಗೆ ಕಿರುಕುಳ ಕಟ್ಟಿಟ್ಟ ಬುತ್ತಿ, ಇದರಲ್ಲಿ ಜಾತೀಯತೆ ಬೇರೆ ತಾಂಡವವಾಡುತ್ತಿದೆ. ಪ್ರತಿದಿನ ದೈಹಿಕವಾಗಿ, ಮಾನಸಿಕವಾಗಿ ಹಲ್ಲೆಗೊಳಗಾಗುತ್ತಿದ್ದಾರೆ. ಸಕಲ ಸೌಲಭ್ಯವನ್ನು ನೀಡಿ ತಳಮಟ್ಟದ ನೌಕರಿಗೆ ಅನುವು ಮಾಡಕೊಡಬೇಕಿದೆ. ರಾಜ್ಯ ಸರ್ಕಾರ ಇತ್ತ ಗಮನಿಸಬೇಕಾಗಿದೆ.

- ಯಶಸ್ ಮಾವತ್ತೂರು, ಮೈಸೂರು

ಜನರ ಮನಸ್ಸು ಗೆದ್ದ 'ಭಜರಂಗಿ ಭಾಯ್‌ಜಾನ್'

ಪತ್ರಿಕೆಯಲ್ಲಿ ಸಲ್ಮಾನ್ ಖಾನ್ ನಾಯಕತ್ವದ 'ಭಜರಂಗಿ ಭಾಯ್‌ಜಾನ್' ಚಿತ್ರದ ವಿಮರ್ಶೆ ತುಂಬಾ ಅಚ್ಚುಕಟ್ಟಾಗಿ, ಮಾರ್ಮಿಕವಾಗಿ ಇತ್ತು, ಜನರಲ್ಲಿ ಒಳ್ಳೆಯ ಭಾವನೆಗಳನ್ನು ಬೆಳೆಸುವ, ಚಿಂತನೆಗೆ ದೂಡುವ, ಉತ್ತಮ ಸಂದೇಶ ಸಾರುವ ಚಿತ್ರಗಳು ಬಂದರೆ ಆ ಚಿತ್ರದ ಬಗ್ಗೆ ಜನರಿಗೆ ತಿಳಿಹೇಳುವ ಸಾಮಾಜಿಕ ಜವಾಬ್ದಾರಿಯನ್ನು ನಮ್ಮ ಪತ್ರಿಕೆ ಖಂಡಿತ ಮಾಡುತ್ತದೆ ಎಂಬುದಕ್ಕೆ ಸಾಕ್ಷಿ 'ಭಜರಂಗಿ ಭಾಯಜಾನ್' ಚಿತ್ರದ ಕುರಿತು ಬಂದ ನಿಮ್ಮ ವಿಮರ್ಶೆ. ನಿಜಕ್ಕೂ ಈ ಚಿತ್ರ ಮನೋಜ್ಞವಾಗಿದ್ದು ಎರಡು ದೇಶಗಳ ನಡುವೆ



ಉತ್ತಮ ಸೌಹಾರ್ದತೆ, ಬಾಂಧವ್ಯ ಬೆಳೆಸಲು ಸಹಕಾರಿಯಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಕೋಟಿ ಕೋಟಿ ಸುರಿದು ನಿರ್ಮಿಸಿದ ಚಿತ್ರದಲ್ಲಿ ಸಮಾಜಕ್ಕೆ ಉಪಯೋಗ ವಾಗುವಂತಹ ಯಾವುದೇ ಸಂದೇಶ ಇಲ್ಲವೆಂದರೆ ಆರ್ಥಿಕವಾಗಿ ಆ ಚಿತ್ರ ಗೆದ್ದಿದ್ದರೂ ನೈತಿಕವಾಗಿ ಆ ಚಿತ್ರ ಸೋತಂತೆಯೇ. ಆದರೆ 'ಭಜರಂಗಿ ಭಾಯ್‌ಜಾನ್' ಚಿತ್ರ ಆ ಸಾಲಲ್ಲಿ ಸೇರದೆ ಎರಡು ದೇಶಗಳ ಜನರ ಮನಸ್ಸು ಗೆದ್ದಿದೆ. ನಿಮ್ಮ ಅಚ್ಚುಕಟ್ಟಾದ ವಿಮರ್ಶೆಯಲ್ಲಿ ಕಂಡುಬಂದ ಒಂದೇ ತಪ್ಪು ಎಂದರೇ ...ಚಿತ್ರದ ನಾಯಕಿ ಹೆಸರು ನೀವು ಬರೆದಿರೋ ಹಾಗೆ ಕರಿಷ್ಮಾ ಕಪೂರ್ ಅಲ್ಲ... ಕರೀನಾ ಕಪೂರ್...

- ಲಕ್ಷ್ಮೀಕಾಂತ ಮಿರಜಕರ, ಶಿಗ್ಗಾಂವ

ಡಬ್ಬಿಂಗ್ ವಿರೋಧಿಗಳು ಜನರ ವಿರೋಧಿಗಳು

ಪರಭಾಷಾ ಚಲಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವುದನ್ನು ಕನ್ನಡ ಚಿತ್ರರಂಗದವರು ವಿರೋಧಿಸಿದಂತೆ ಪರಭಾಷೆಯ ಕಾದಂಬರಿಗಳನ್ನೂ ಕನ್ನಡಕ್ಕೆ ಅನುವಾದ ಮಾಡುವುದನ್ನು ಕನ್ನಡ ಸಾಹಿತಿಗಳು ವಿರೋಧಿಸಿದ್ದರೆ ಕನ್ನಡ ಸಾರಸ್ವತ ಲೋಕಕ್ಕೆ ಎಷ್ಟು ದೊಡ್ಡ ನಷ್ಟವಾಗುತ್ತಿತ್ತು ಎಂದು ಇತ್ತೀಚಿಗೆ ನಾನು ಇಂಗ್ಲಿಷ್ ಭಾಷೆಯ 'ದಿ ಆಲ್ಕೆಮಿಸ್ಟ್' (ಮೂಲ ಪೋರ್ಚುಗೀಸ್ ಭಾಷೆ, ಮೂಲ ಲೇಖಕ ಪಾವ್ಲೋ ಕೊಯ್ಲೋ) ಎಂಬ ಕಾದಂಬರಿಯ ಕನ್ನಡ ಅನುವಾದ ಓದಿದ ಮೇಲೆ ಅರ್ಥವಾಯಿತು. ಈ ಕಾದಂಬರಿ ಜಗತ್ತಿನ ಎಂಬತ್ತು ಭಾಷೆಗಳಿಗೆ ಅನುವಾದಗೊಂಡು 19 ಕೋಟಿ ಪ್ರತಿಗಳು ಮಾರಾಟವಾಗಿ ಗಿನ್ನಿಸ್ ದಾಖಲೆ ಸ್ಥಾಪಿಸಿದೆ. 'ರಸವಾದಿ' ಎಂಬ ಕನ್ನಡ ಹೆಸರಿಟ್ಟು 'ಆಲ್ಕೆಮಿಸ್ಟ್' ಕಾದಂಬರಿಯ ಅನುವಾದ ಮಾಡಿದವರು ದಕ್ಷಿಣ ಕನ್ನಡ ಮೂಲದ ಅಬ್ದುಲ್ ರಹೀಮ್ ಟೀಕೆ ಎಂಬ ಲೇಖಕರು.

ಮೂಲ ಕೃತಿಗೆ ಒಂದಿಷ್ಟೂ ಲೋಪವಾಗದಂತೆ ಅವರು ಕನ್ನಡಕ್ಕೆ ಅಚ್ಚುಕಟ್ಟಾಗಿ ಅನುವಾದ ಮಾಡಿದ್ದಾರೆ. ಮೇ ತಿಂಗಳ ಮೊದಲ ವಾರದಲ್ಲಿ ಈ 'ರಸವಾದಿ' ಕಾದಂಬರಿಯ ಮೊದಲ ಆವೃತ್ತಿ ಬಿಡುಗಡೆಯಾಯಿತು. ನಂತರ ಕೇವಲ ಎರಡೇ ತಿಂಗಳಲ್ಲಿ ಅದರ ಎರಡನೇ ಆವೃತ್ತಿ ಪ್ರಕಟವಾಗಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. ಆಗಸ್ಟ್ 8 ಕ್ಕೆ ಸರಳ ಸಮಾರಂಭದಲ್ಲಿ ಈ ಎರಡನೇ ಆವೃತ್ತಿ ಮಂಗಳೂರಿನಲ್ಲಿ ಬಿಡುಗಡೆಯಾಯಿತು. ಭೈರಪ್ಪನವರ ಕಡೆಯ ಕಾದಂಬರಿ 'ಯಾನ' ಇದರ ಎರಡನೇ ಆವೃತ್ತಿ ಅಲ್ಪ ಕಾಲದಲ್ಲಿಯೇ ಹೊರಬಂದಾಗ ಹಿಂದೂತ್ವವಾದಿ ಕನ್ನಡ ಪತ್ರಿಕೆಗಳು ಕೊಟ್ಟ ಭಯಂಕರ ಪ್ರಚಾರಕ್ಕೆ ಹೋಲಿಸಿದರೆ



'ರಸವಾದಿ' ಕಾದಂಬರಿಯ ಎರಡನೇ ಆವೃತ್ತಿಯ ಬಿಡುಗಡೆ ತುಂಬಾ ಸರಳವಾಗಿ ಕಿಕ್ಕಿರಿದು ತುಂಬಿದ ಸಭಾಗೃಹದಲ್ಲಿ ನಡೆದದ್ದು ಮನಸ್ಸಿಗೆ ಮುದ ನೀಡಿತು.

ಕರ್ನಾಟಕದ ಮುಸ್ಲಿಮರಲ್ಲಿ ಐದು ಬೇರೆ ಬೇರೆ ಮಾತೃ ಭಾಷೆಯುಳ್ಳವರಿದ್ದಾರೆ. ಕೇವಲ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಮಾತ್ರ ಕನ್ನಡ ಮಾತೃಭಾಷೆಯುಳ್ಳ ಮುಸ್ಲಿಮರಿದ್ದರೆ ಕರ್ನಾಟಕದ ಉಳಿದ ಒಳನಾಡಿನಲ್ಲಿ ದಕ್ಖಣಿ-ಉರ್ದು ಮಾತೃಭಾಷೆಯವರೇ ಹೆಚ್ಚು ಇರುವುದು. ಕೇವಲ ಕೊಡಗಿನಲ್ಲಿ ಕೊಡವ ಮಾತೃಭಾಷೆಯ ಮುಸ್ಲಿಮರಿದ್ದರೆ ಕರಾವಳಿಯಲ್ಲಿ ಮಾತ್ರ ಬ್ಯಾರಿ ಭಾಷೆ ಮಾತನಾಡುವ ಮುಸ್ಲಿಮರೇ ಹೆಚ್ಚು, ಸ್ವಲ್ಪಮಟ್ಟಿಗೆ ಕೊಂಕಣಿ ಮತ್ತು ಉರ್ದು ಮಾತೃಭಾಷೆಯವರೂ ಕರಾವಳಿಯಲ್ಲಿ ಇದ್ದಾರೆ ನಿಜ. ಆದರೆ ಕನ್ನಡ ಸಾಹಿತ್ಯ ಲೋಕಕ್ಕೆ ಮುಸ್ಲಿಮರ ಕಾಣಿಕೆ ನೋಡಿದಾಗ ಹೆಚ್ಚಿನವರೆಲ್ಲ ಕರಾವಳಿಯ [illegible] ಭಾಷಿಕರೇ ಆಗಿರುವುದು ವಿಶೇಷ. ಕನ್ನಡ ಸಾ[illegible] ಕರ್ನಾಟಕದ ಒಳನಾಡಿನ ಮುಸ್ಲಿಮರ ಕಾಣಿಕೆ [illegible] ಬಹುಶಃ ಇದಕ್ಕೆ ಮೂಲಕಾರಣ ಒಳನಾಡಿನ ಮುಸ್[illegible] ತಮ್ಮ ಮಕ್ಕಳನ್ನು ಉರ್ದು ಅಥವಾ ಇಂಗ್ಲಿಷ್ ಮಾ[illegible] ಶಾಲೆಗಳಿಗೆ ಕಳುಹಿಸಿದರೆ ಕರಾವಳಿಯ ಬ್ಯಾರಿ ಮುಸ್[illegible] ತಮ್ಮ ಮಕ್ಕಳನ್ನು ಹೆಚ್ಚಾಗಿ ಕನ್ನಡ ಮಾಧ್ಯಮ ಶಾಲೆ[illegible] ಕಳುಹಿಸುತ್ತಾರೆ. ಬ್ಯಾರಿಗಳು ಮೂಲತಃ ವ್ಯಾಪಾರಿಗಳ[illegible] ಕನ್ನಡ ಸಾಹಿತ್ಯಕ್ಕೂ ಅವರ ಕಾಣಿಕೆ ಅಪಾರ. 'ರಸವಾದಿ' ಕೃತಿ ಒಂದು ಸಣ್ಣ ಉದಾಹರಣೆ ಅ[illegible]

ಬಹುಚರ್ಚಿತ ವಿದೇಶಿ ಕಾದಂಬರಿಗಳ ಅನುವಾದದ ಜನಪ್ರಿಯತೆಯಿಂದ ಕನ್ನಡ ಚಿತ್ರರಂಗ[illegible] ಪಾಠ ಕಲಿತು ಹಾಲಿವುಡ್ ಚಿತ್ರಗಳನ್ನು ಕನ್ನಡಕ್ಕೆ [illegible] ಮಾಡುವುದನ್ನು ವಿರೋಧಿಸುವುದು ನಿಲ್ಲಿಸಲಿ. ಒಂದ[illegible] ಹಾಲಿವುಡ್ ಚಿತ್ರಗಳ ಯುದ್ಧ ದೃಶ್ಯಗಳನ್ನು ಎಲ್ಲಿ ಕನ್[illegible] ಮೊದಲೇ ನೋಡಿದ್ದರೆ ಅವರಿಗೆ ತೆಲುಗು ಬಾ[illegible] ಚಿತ್ರದ ದೃಶ್ಯಗಳು ಬರಿ ಸಪ್ಪೆ ಎನಿಸಿ ಆ ತೆಲುಗು [illegible] ಕರ್ನಾಟಕದಲ್ಲಿ ಸೋಲುತ್ತಿದ್ದುದು ಖಂಡಿತ. ನಿಯಮಿ[illegible] ಹಾಲಿವುಡ್ ಇಂಗ್ಲಿಷ್ ಚಿತ್ರಗಳನ್ನು ನೋಡುವ[illegible] ಭಾರತೀಯ ಚಿತ್ರಗಳ ದೃಶ್ಯ ವೈಭವಗಳು ತೀರಾ ಸಾ[illegible] ಎನಿಸುತ್ತವೆ. ಆದರೆ ಹಾಲಿವುಡ್ ಚಿತ್ರಗಳ [illegible] ಸಂಭಾಷಣೆ ಹೆಚ್ಚಾಗಿ ಇರುವುದು ಅಮೆರಿಕನ್ ಉಚ್ಚಾ[illegible] ಈ ಅಮೆರಿಕನ್ ಉಚ್ಚಾರ ಹೆಚ್ಚಿನ ಭಾರತೀಯ[illegible] ಅರ್ಥವಾಗದ ಕಾರಣ ಸಣ್ಣ ಪಟ್ಟಣಗಳಲ್ಲಿ ಇಂಗ್ಲಿಷ್ [illegible] ನಡೆಯುವುದಿಲ್ಲ, ಹಾಗಾಗಿ ಅಲ್ಲಿಯ ಕನ್ನಡಿಗರು ಹಾ[illegible] ಚಿತ್ರಗಳ ಅತ್ಯುನ್ನತ ತಾಂತ್ರಿಕತೆಯ ಅದ್ಭುತ ದೃಶ್ಯ[illegible] ವಂಚಿತರಾಗುತ್ತಿದ್ದಾರೆ. ಮೆಟ್ರೊ-ನಗರಗಳಲ್ಲಿ ಹಾ[illegible] ಚಿತ್ರಗಳ ಹಿಂದಿ ಅವತರಣಿಕೆ ಪ್ರದರ್ಶಿತವಾಗುವು[illegible] ಸ್ವಲ್ಪಮಟ್ಟಿಗೆ ಮೆಟ್ರೊ-ಕನ್ನಡಿಗರು ಈ ಹಿಂದಿ ಅವ[illegible] ನೋಡುತ್ತಾರೆ. ಇದೇ ಚಿತ್ರ ಕನ್ನಡ ಅವತರಣಿ[illegible] ಬಂದಿದ್ದರೆ ಹೆಚ್ಚು ಒಳ್ಳೆಯದಾಗುತ್ತಿತ್ತು ಎಂದು ಅ[illegible] ಪ್ರತಿಸಲ ಅನ್ನಿಸಿರಬಹುದು.

ನನ್ನ ಮಕ್ಕಳು ಚಿಕ್ಕಂದಿನಿಂದ ಇಂಗ್ಲಿಷ್ ಕಾಟ[illegible] ಗಳನ್ನೇ ನೋಡುತ್ತಾ ಬೆಳೆದಿದ್ದರಿಂದ ಅವರಿಗೆ ಅಮೆ[illegible] ಇಂಗ್ಲಿಷ್ ಉಚ್ಚಾರ ಸಂಪೂರ್ಣ ಅರ್ಥವಾಗುತ್ತದೆ. ನನಗೆ ಈ ವಯಸ್ಸಿನಲ್ಲೂ ಅಮೆರಿಕನ್ ಇ[illegible] ಡೈಲಾಗುಗಳು ಮುಕ್ಕಾಲು ಪಾಲು ಅರ್ಥವಾಗು[illegible] ಎಂದು ಹೇಳಲು ಮುಜುಗರ ಆಗುವುದಿಲ್ಲ. ಅ[illegible] ನಾನೂ ಹೆಚ್ಚಾಗಿ ಹಾಲಿವುಡ್ ಚಿತ್ರಗಳ [illegible] ಅವತರಣಿಕೆಯನ್ನೇ ನೋಡುವುದು. ಟಿವಿಯಲ್ಲೂ [illegible] ಜಿಯೋ, ಹಿಸ್ಟರಿ, ಡಿಸ್ಕವರಿ, ಅನಿಮಲ್ ಪ್ಲಾನೆಟ್ ಮ[illegible] ಜ್ಞಾನದಾಯಕ ಇಂಗ್ಲಿಷ್ ಚಾನೆಲ್ಲುಗಳ ಸಂಭಾಷಣೆ ವಿವರಣೆ ಪೂರ್ಣ ಅರ್ಥಮಾಡಿಕೊಳ್ಳಲು ಗತ್ಯಂತರವಿಲ್ಲದೇ ಹಿಂದಿ ಅವತರಣಿಕೆಯನ್ನೇ ನೋಡಬೇಕಾಗುತ್ತದೆ. ಈ ಚಾನೆಲ್ಲುಗಳು ಕನ್ನಡ[illegible] ಬಂದಿದ್ದರೆ ಎಷ್ಟು ಒಳ್ಳೆಯದಿತ್ತು ಎಂದು [illegible] ಅನಿಸುತ್ತಲೇ ಇರುತ್ತದೆ. ಆದರೆ ಕರ್ನಾಟಕದ ಹರಿಯುವ ನದಿಗೆ ದೊಣ್ಣೆ ನಾಯಕನ [illegible] ಎಂಬಂತಾಗಿರುವುದು ದುರದೃಷ್ಟಕರ.

ಸಣ್ಣ ಮಗುವನ್ನು ಪಾಲಕರು ಕೈಹಿಡಿದು ನಡೆಸ[illegible] ಖಂಡಿತಾ ಸರಿ. ಆದರೆ ಆ ಮಗು ಬೆಳೆದು ಧಡಿ[illegible] ಮೇಲೂ ತನ್ನನ್ನು ಪಾಲಕರು ಕೈಹಿಡಿದು ನಡೆ[illegible] ಎಂದು ಹಠ ಹಿಡಿದರೆ ಅವನು ವಿಕಲಚೇತನ [illegible] ಪರಿಗಣಿತನಾಗುತ್ತಾನೆ. ಪ್ರತ್ಯೇಕ ಕನ್ನಡ ರಾಜ್ಯ ಉ[illegible] 59 ವರ್ಷಗಳಾದರೂ ಕನ್ನಡ ಚಿತ್ರರಂಗವು ಸ್ವಾವಲಂಬಿಯಾಗದೇ ಈಗಲೂ ಊರುಗೋಲು [illegible] ಸರಕಾರವೇ ಕೈಹಿಡಿದು ನಡೆಸಬೇಕು ಎಂದು ಬಯ[illegible] ಕನ್ನಡ ಚಿತ್ರರಂಗವು ವಿಕಲಚೇತನರ ಕೈಯಲ್[illegible] ಎಂದಂತಾಯಿತು. ಡಬ್ಬಿಂಗ್ ನಿಷೇಧ ಮುಂದು[illegible] ಈ ವಿಕಲಚೇತನ ಮನಸ್ಥಿತಿಯವರೆಲ್ಲಾ ಸ್ವಾವಲಂಬಿ[illegible] ಬದಲು ಪರಾವಲಂಬಿಗಳಾಗಿಯೇ ಮುಂದುವ[illegible] ಅನುಕೂಲ ಮಾಡಿಕೊಟ್ಟಂತಾಗಬಹುದು ಅಷ್ಟೇ[illegible]


- ಪ್ರವೀಣ್ ಎಸ್. ಶೆಟ್ಟಿ, ಮಂಗ[illegible]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದ[illegible]
ಪ್ರತಿಕ್ರಿಯೆಗಳನ್ನು 9980331427 ನಂಬ[illegible]
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸ[illegible]





ಕನ್ನಡ ಸಿನಿರಂಗಕ್ಕೆ ಹೊಸ ಹುಡುಗರು ಲಗ್ಗೆ

ಸ್ಯಾಂಡಲ್‌ವುಡ್ ಹೊಸ ನಾಯಕರಿಂದ ಕಂಗೊಳಿಸುತ್ತಿದೆ. ಹಳೆ ನಾಯಕರು ಗಗನ ಕುಸುಮವಾದ ಕಾರಣ ಹೊಸ ಹುಡುಗರಿಗೆ ನಿರ್ದೇಶಕರು ಮಣೆ ಹಾಕಿದ್ದಾರೆ.









ಸಿನಿಮಾ ಗೆಲ್ಲದೇ ಇದ್ದರೂ, ಸದ್ಯದ ಸೂಪರ್ ಸ್ಟಾರ್‌ಗಳ ರೇಟು ಗಗನ ಕುಸುಮ ಆಗಿದೆ. ಅಲ್ಲದೇ ಪ್ರಯೋಗಾತ್ಮಕ ಚಿತ್ರಗಳಿಗೆ ಇವರ ಕಾಲ್‌ಶೀಟ್ ದೊರೆಯದ ಕಾರಣ, ಬಹುತೇಕ ನಿರ್ದೇಶಕರು ಹೊಸ ಹುಡುಗರಿಗೆ ಮಣೆ ಹಾಕಿದ್ದಾರೆ. ಹೀಗಾಗಿ ಸದ್ಯ ಸ್ಯಾಂಡಲ್‌ವುಡ್‌ನಲ್ಲಿ ಹೊಸ ಹುಡುಗರ ಹವಾ ಜೋರಾಗಿದೆ.

'ನಮಕ್ ಹರಾಮ್' ಮೂಲಕ ಗಣೇಶ್ ಸಹೋದರ ಮಹೇಶ್ ಸಿನಿಮಾ ರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಅಂದುಕೊಂಡಂತೆ ಆಗಿದ್ದರೆ, ಮಹೇಶ್ ಈಗಾಗಲೇ ಸಿನಿಮಾ ರಂಗದಲ್ಲಿ ಗುರುತಿಸಿಕೊಳ್ಳಬೇಕಿತ್ತು, ಅದು ಸಾಧ್ಯ ಆಗಿರಲಿಲ್ಲ. ಈಗ ನಾಗರಾಜ್ ಪೀಣ್ಯ ನಿರ್ದೇಶನ ಚಿತ್ರದ ಮೂಲಕ ಪ್ರಥಮ ಖಾತೆ ತೆಗೆದಿದ್ದಾರೆ. ಇದು ಪಕ್ಕಾ ಮಾಸ್ ಸಿನಿಮಾ. ಜತೆಗೆ ಅಲ್ಲೊಂದು ಪ್ರೇಮಕತೆ ಇದೆ. ಎಲ್ಲಾ ವರ್ಗದ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡೇ ಈ ಪಾತ್ರವನ್ನು ಸೃಷ್ಟಿ ಮಾಡಿದ್ದಾರಂತೆ ನಿರ್ದೇಶಕರು.

ಈ ಹಿಂದೆ 'ಪದೇ ಪದೇ' ಸಿನಿಮಾದ ಮೂಲಕ ಭರವಸೆ ಮೂಡಿಸಿದ್ದ ನಾಗರಾಜ್ ಅವರ ಎರಡನೇ ಸಿನಿಮಾ ಇದು. 'ಪದೇ ಪದೇ' ಸಿನಿಮಾಗೆ ಉತ್ತಮ ಹಾಡುಗಳನ್ನು ಕೊಟ್ಟಿದ್ದ ಸತೀಶ್ ಆರ್ಯನ್ ಈ ಚಿತ್ರಕ್ಕೂ ಸಂಗೀತ ನೀಡಿದ್ದಾರೆ. ರ್‍ಯಾಪಿಡ್ ರಶ್ಮಿ ಸಿನಿಮಾದ ನಾಯಕಿ.

'ಪ್ರೀತಿಯಲ್ಲಿ ಸಹಜ' ಸಿನಿಮಾದ ಮೂಲಕ ಸೂರ್ಯ ಕೂಡ ಸಿನಿಮಾರಂಗಕ್ಕೆ ಪ್ರವೇಶ ಮಾಡಿದ್ದಾರೆ. ಪ್ರತಿ ಬಾರಿಯೂ ಹೊಸಬರಿಗೆ ಅವಕಾಶ ಕೊಡುವ ನಿರ್ದೇಶಕ ರತ್ನಜ, ಈ ಬಾರಿಯೂ ಅದನ್ನು ಮುಂದುವರೆಸಿದ್ದಾರೆ. ಕಿರುತೆರೆಯಲ್ಲಿ ಅನುಭವ ಇರುವ ಸೂರ್ಯನಿಗೆ, ಇದು ಮೊದಲ ಸಿನಿಮಾವಾದರೂ, ತರಬೇತಿ ನೀಡಿ, ಕ್ಯಾಮೆರಾ ಮುಂದೆ ನಿಲ್ಲಿಸಿದ್ದಾರೆ ನಿರ್ದೇಶಕರು.

"ಪ್ರತಿ ಬಾರಿಯೂ ನಾನು ಹೊಸಬರಿಗೆ ಅವಕಾಶ ಕೊಡುತ್ತೇನೆ. ಸೂರ್ಯ ಕೂಡ ಸಿನಿಮಾರಂಗಕ್ಕೆ ಹೊಸಬರು. ಅಲ್ಲದೇ ನನ್ನ ಕತೆಗೆ ಹೇಳಿಮಾಡಿಸಿದ ನಟ. ಹೀಗಾಗಿಯೇ ಆಯ್ಕೆ ಮಾಡಿಕೊಂಡೆ. ಇಲ್ಲಿ ಇವರು ಇನ್ನೋಸೆಂಟ್ ಹುಡುಗನ ಪಾತ್ರ ಮಾಡುತ್ತಿದ್ದಾರೆ" ಅಂತಾರೆ ರತ್ನಜ.

ಚೊಚ್ಚಲು ಸಿನಿಮಾದಲ್ಲೇ ರತ್ನಜ ಫಿಲ್ಮ್‌ಫೇರ್ ಸೇರಿದಂತೆ ಹಲವು ಪ್ರತಿಷ್ಠಿತ ಪ್ರಶಸ್ತಿ ಪಡೆದವರು. ಕನ್ನಡದಲ್ಲಿ ವಿಭಿನ್ನ ಪ್ರಯತ್ನ ಮಾಡಿದ ನಿರ್ದೇಶಕರಲ್ಲಿ ಇವರೂ ಕೂಡ ಒಬ್ಬರು. ಈಗ ಮತ್ತೆ ಚಿತ್ರ ನಿರ್ದೇಶನಕ್ಕೆ ವಾಪಸ್ಸಾಗಿದ್ದಾರೆ. ಜತೆಗೆ ಅಪರೂಪದ ಕತೆ ತಂದಿದ್ದಾರೆ.

ನಿರ್ದೇಶಕ ಮಹೇಶ್ ಬಾಬು ಸಿನಿಮಾದ ಮೂಲಕ ದಿಲೀಪ್ ಎಂಬ ನವನಾಯಕನ ಪ್ರವೇಶ ಆಗುತ್ತಿದೆ. ಸ್ಟಾರ್ ನಟರ ಜತೆಯೇ ಕೆಲಸ ಮಾಡಿರುವ ನಿರ್ದೇಶಕರು, ಇದೇ ಮೊದಲ ಬಾರಿಗೆ ಹೊಸ ಹುಡುಗನಿಗೆ ಅವಕಾಶ ಕೊಟ್ಟಿದ್ದಾರೆ. ದಿಲೀಪ್ 'ಕ್ರೇಜಿ ಬಾಯ್ಸ್' ಚಿತ್ರದ ಮೂಲಕ ಸಿನಿಮಾರಂಗದಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಇದು ಪಕ್ಕಾ ಕ್ರೇಜಿ ಹುಡುಗರ ಕತೆಯಂತೆ. ಶೀರ್ಷಿಕೆಯೇ ಹೇಳುವಂತೆ ಇದು ಪಕ್ಕಾ ಯುವ ಸಮುದಾಯಕ್ಕಾಗಿ ತಯಾರಾಗುತ್ತಿರುವ ಚಿತ್ರ. ಅದರಲ್ಲೂ ಹದಿಹರೆಯ ಕ್ರೇಜಿ ಘಟನೆಗಳ ಸುತ್ತ ಸಿನಿಮಾ ಇರಲಿದೆ. ಈ ಹೊತ್ತಿನ ಹುಡುಗರ ಲೈಫ್ ಸ್ಟೈಲ್‌ನ್ನು ಸಿನಿಮಾದ ಮೂಲಕ ಕಟ್ಟಿಕೊಡಲಿದ್ದಾರೆ ನಿರ್ದೇಶಕರು. ದಿಲೀಪ್ ಪಾತ್ರಕ್ಕೆ, ಅಶಿತಾ ನಾಯಕಿ. ಈ ಜೋಡಿ ಇದೇ ಮೊದಲ ಬಾರಿಗೆ ಬಣ್ಣ ಹಚ್ಚುತ್ತಿದೆ.

'ರಾಜಧಾನಿ-2' ಚಿತ್ರದ ಮೂಲಕ ಪ್ರೀತಮ್ ಸ್ಯಾಂಡಲ್‌ವುಡ್‌ಗೆ ಪ್ರವೇಶ ಮಾಡಿದ್ದಾರೆ. ಈ ಹಿಂದೆ 'ಬ್ರಹ್ಮ ವಿಷ್ಣು ಮಹೇಶ್ವರ' ಚಿತ್ರದಲ್ಲಿ ಪುಟ್ಟದೊಂದು ಪಾತ್ರ ಮಾಡಿದ್ದರೂ 'ರಾಜಧಾನಿ'ಯಲ್ಲಿ ಇವರೇ ನಾಯಕ. 'ರಾಜಧಾನಿ' ಚಿತ್ರದ ಮೂಲಕ ಹಲವು ಅಚ್ಚರಿ ಮೂಡಿಸಿದ್ದ ರಘುಜಯ, ಅಂದು ಯಶ್ ಜತೆ ಕೆಲಸ ಮಾಡಿದ್ದರು. ಇಬ್ಬರ ಮಧ್ಯೆ ಗಲಾಟೆಯೂ ಆಗಿತ್ತು, ಈಗ ಯಶ್ ಜಾಗಕ್ಕೆ ಪ್ರೀತಮ್‌ನನ್ನು ಕರೆತಂದಿದ್ದಾರೆ. ಮಾಸ್‌ಲುಕ್‌ನಲ್ಲಿ ಇವರು ಕಾಣಿಸಿಕೊಂಡಿದ್ದಾರೆ. ಮೊದಲ ಸಿನಿಮಾ 'ರಾಜಧಾನಿ'ಯು ನಾಲ್ವರ ಯುವಕರ ಕತೆ ಆಗಿತ್ತು. ಅದರಲ್ಲಿಯ ಒಬ್ಬನ ಕತೆ ಈ ಚಿತ್ರದಲ್ಲಿ ಮುಂದುವರೆದಿದೆ. ಪ್ರೀತಮ್‌ಗೆ ನಾಯಕಿಯಾಗಿ ಹರಿಪ್ರಿಯಾ ಇದ್ದಾರೆ.

ಒಪ್ಪಂದವೇ ಅಲ್ಲದ "ಒಪ್ಪಂದ"

ನಾಗಾ ಜನರ ಹೋರಾಟ ಇಂದು ನಿನ್ನೆಯದಲ್ಲ. ವಿಶಿಷ್ಟ ಸಂಸ್ಕೃತಿ ಮತ್ತು ಇತಿಹಾಸವನ್ನು ಹೊಂದಿರುವ ನಾಗಾಗಳು ತಮ್ಮ ಅನನ್ಯತೆಗಾಗಿ, ಆಸೆಆಕಾಂಕ್ಷೆಗಳ ಈಡೇರುವಿಕೆಗಾಗಿ ಸುಮಾರು ಒಂದು ಶತಮಾನದಿಂದಲೂ ಚಳವಳಿ ನಡೆಸುತ್ತಾ ಬಂದಿದ್ದಾರೆ. ಇಂತಹದೊಂದು ಹೋರಾಟಕ್ಕೆ ತಕ್ಷಣದ ಪರಿಹಾರಗಳನ್ನು ಕಂಡುಕೊಳ್ಳುವುದು ಅಷ್ಟೊಂದು ಸುಲಭವೇನಲ್ಲ. ಹಾಗಾಗಿಯೆ ಇದ್ದಕ್ಕಿದ್ದಂತೆ ಅದಿನ ಟಿವಿ, ಪತ್ರಿಕೆಗಳಲ್ಲೆಲ್ಲಾ ನಾಗಾಗಳ ಜೊತೆ ಶಾಂತಿ ಒಪ್ಪಂದಕ್ಕೆ ಬರಲಾಗಿದೆ ಎಂಬ ದೊಡ್ಡ ತಲೆಬರಹದ ಚಿತ್ರ ಸುದ್ದಿ ಪ್ರಕಟವಾದಾಗ ಜನ ಬೆಕ್ಕಸಬೆರಗಾಗಿದ್ದಾರೆ. ...ವರೆ ಈ ತಥಾಕಥಿತ "ಒಪ್ಪಂದ"ದ ವಿವರಗಳನ್ನು ಬಹಿರಂಗಗೊಳಿಸದಿರುವುದು ಮತ್ತಷ್ಟು ಅಚ್ಚರಿಗೆ ಕಾರಣವಾಗಿದೆ. ಪರಿಣಾಮವಾಗಿ, ಇದು ನಿಜಕ್ಕೂ ಒಂದು ...ಶ್ವತ ಪರಿಹಾರ ರೂಪದ ಒಪ್ಪಂದವೇ ಅಥವಾ ಬರೀ ...ದು ಚೌಕಟ್ಟೇ ಎಂಬ ಬಗ್ಗೆ ಭಾರಿ ಗೊಂದಲಗಳು ...ಟ್ಟಿಕೊಂಡಿವೆ. ಪರಿಣಾಮವಾಗಿ ಇಂದು ಸಾರ್ವಜನಿಕ ...ಯಗಳಲ್ಲಿ ಹಲವಾರು ಪ್ರಶ್ನೆಗಳು ಹರಿದಾಡುತ್ತಿವೆ. ಉದಾಹರಣೆಗೆ, ಒಪ್ಪಂದಕ್ಕೆ ಬರಲಾಗಿದೆಯೆಂದು ದೊಡ್ಡದಾಗಿ ಘೋಷಿಸಿದ ನಂತರ ವಿವರಗಳನ್ನು ರಹಸ್ಯವಾಗಿಡುವುದರ ಉದ್ದೇಶವೇನು? ಯಾವುದೋ ಒಂದು ರೀತಿಯ ಒಪ್ಪಂದಕ್ಕೆ ಬರಲಾಗಿದ್ದು ದೇಶದ ಜನತೆಗೆ ವಿವರಗಳು ಅಗತ್ಯವಿಲ್ಲವೆಂಬ ...ಬವನ್ನು ತಾಳಲಾಗಿದೆಯೇ? ಇದು ಬರೀ ಕರಡು ...ತ್ರವೇ? ಅಂತಿಮ ನಿರ್ಧಾರ ಇನ್ನೂ ಆಗಿಲ್ಲವೇ? ಆಗಿದ್ದರೆ ಅದನ್ನು ಇಷ್ಟೊಂದು ತರಾತುರಿಯಲ್ಲಿ ...ಶವಿದೇಶಗಳಿಗೆ ಸಾರುವ ಅಗತ್ಯ ಏನಿತ್ತು?........ ...ಾರೆಯಾಗಿ ಜನ ಈಗ ಒಪ್ಪಂದದಲ್ಲಿ ಏನಿದೆ ಎಂದು ...ುವ ಬದಲು ಒಪ್ಪಂದ ಆಗಿದೆಯೇ ಎಂದು ಕೇಳುವ ಪರಿಸ್ಥಿತಿ ಇದೆ.

ನಾಗಾಲ್ಯಾಂಡ್ ರಾಷ್ಟ್ರೀಯ ಸಮಾಜವಾದಿ ಮಂಡಳಿಯ ಇಸಾಕ್-ಮುಯಿವಾ ಗುಂಪಿನ (ಎನ್‌ಎಸ್‌ಸಿಎನ್ (ಐಎಂ)) ...ಬ್ಬರು ಮುಖ್ಯಸ್ಥರಲ್ಲಿ ಒಬ್ಬನಾದ ತಿಯುಂಗಲೆಂಗ್ ಮುಯಿವಾ ಮತ್ತು ಜಂಟಿ ಬೇಹುಗಾರಿಕಾ ಸಮಿತಿಯ ಮುಖ್ಯಸ್ಥನೂ ಪ್ರಧಾನಿ ನರೇಂದ್ರ ಮೋದಿಯ ಪ್ರಧಾನ ಸಂವಾದಕನೂ ಆಗಿರುವ ಆರ್.ಎನ್.ರವಿ ಇದೇ ಆಗಸ್ಟ್ ...ಂದು ಮೋದಿ ಸಮ್ಮುಖದಲ್ಲಿ ಮೂರು ತಥಾಕಥಿತ "...ಪ್ಪಂದ" ಪತ್ರಗಳಿಗೆ ಸಹಿಹಾಕಿದರು. ವಾಸ್ತವವಾಗಿ ರವಿಗೆ ...ದ್ರ ಸರ್ಕಾರದ ಪರವಾಗಿ ಸಹಿ ಹಾಕಲು ಯಾವುದೇ ...ಸನಾಬದ್ಧ ಹಕ್ಕಿಲ್ಲ, ನಿಯಮಾನುಸಾರವಾಗಿ ಯಾವುದೇ ...ಪ್ಪಂದಕ್ಕೆ ಮೊದಲು ಅದರ ಕರಡು ಪ್ರತಿಯನ್ನು ...ಂಧಪಟ್ಟ ಎಲ್ಲ ಬಣಗಳು, ವ್ಯಕ್ತಿಗಳು, ಪ್ರಾಧಿಕಾರಗಳು ...ತ್ತು ಸಚಿವಾಲಯಗಳಿಗೆ ಕಳುಹಿಸಿ ಅವರೆಲ್ಲರ ...ಪ್ರತಿಕ್ರಿಯೆಗಳನ್ನು ಗಣನೆಗೆ ತೆಗೆದುಕೊಂಡ ನಂತರ ...ತಿಮ ಒಪ್ಪಂದವನ್ನು ತಯಾರಿಸಿ ಅದಕ್ಕೆ ...ಪುಮಂಡಲದ ಅನುಮೋದನೆ ಪಡೆದ ಬಳಿಕವೆ ...ದು ಸಹಿ ಬೀಳಬೇಕೆಂದಿದೆ. ಆದರೆ ಇಲ್ಲಿ ಎಲ್ಲವೂ ...ಲ್ಲ! ಈ ಶಾಂತಿ "ಒಪ್ಪಂದ" ಪ್ರಕ್ರಿಯೆಯಲ್ಲಿ ...ಕೇಂದ್ರ ಗೃಹ ಸಚಿವಾಲಯ ಕಾರ್ಯದರ್ಶಿ ಮತ್ತು ಇತರೆ ...ಗಳು, ಈಶಾನ್ಯ ರಾಜ್ಯಗಳ ಉಸ್ತುವಾರಿಗಾಗಿರುವ ... ಕಾರ್ಯದರ್ಶಿ, ನಾಗಾಲ್ಯಾಂಡ್ ರಾಜ್ಯಪಾಲ ಮತ್ತು ನೆರೆಹೊರೆಯ ರಾಜ್ಯಗಳ ಮುಖ್ಯಮಂತ್ರಿಗಳನ್ನು ಒಳಗೊಳ್ಳದಿರುವುದು ವಿಚಿತ್ರವಷ್ಟೆ ಅಲ್ಲ ತೀರ ಅಪ್ರಜಾತಾಂತ್ರಿಕ ಕ್ರಮವೂ ಆಗಿದೆ.

ಒಪ್ಪಂದ ದ ಸಂದರ್ಭ

ಈ "ಒಪ್ಪಂದ" ಮತ್ತು ಅದರ ವ್ಯಾಪಕ ಪ್ರಚಾರ ನಡೆದುದು ಲಮೋ, ವ್ಯಾಪಂ ಹಗರಣಗಳ ಬಗ್ಗೆ ಸಂಸತ್ತಿನಲ್ಲಿ ಕೋಲಾಹಲ ನಡೆಯುತ್ತಿದ್ದ ಸಂದರ್ಭದಲ್ಲಿ, ಪ್ರತಿಪಕ್ಷಗಳು ಮೋದಿಯ ಹೇಳಿಕೆಗಾಗಿ ಆಕಾಶಪಾತಾಳ ಒಂದುಮಾಡುತ್ತಿದ್ದಾಗ ಮಾಧ್ಯಮಗಳಲ್ಲಿ ಸರ್ಕಾರದ ಕುರಿತು ಋಣಾತ್ಮಕ ಸುದ್ದಿಗಳೇ ಹೆಚ್ಚಾಗಿದ್ದ ಸನ್ನಿವೇಶದಲ್ಲಿ ಜನರ ಗಮನವನ್ನು ಆಚೆ ಸೆಳೆದು ಮೋದಿಯನ್ನು "ಛಪ್ಪನ್ ಛಾತಿ ಹೀರೊ" ಎಂದು ಬಿಂಬಿಸುವ ಸಲುವಾಗಿ ಈ ಅರೆಬೆಂದ "ಒಪ್ಪಂದ"ವನ್ನು ಎಳೆದುತರಲಾಗಿದೆ. ಸಹಿ ಹಾಕುವ ಕಾರ್ಯಕ್ರಮದ ನಂತರ ನಗು ಬೀರಿದ ಮೋದಿ, ಹಲವಾರು ವರ್ಷಗಳ ಮಾತುಕತೆಗಳ ಬಳಿಕ ಕೊನೆಗೂ ಒಮ್ಮತಕ್ಕೆ ಬರಲಾಗಿದೆ ಎಂದು ಹೇಳಿದ. "ಇವತ್ತು ಸಮಸ್ಯೆ ಕೊನೆಗೊಂಡಿರುವುದಷ್ಟೆ ಅಲ್ಲ ಹೊಸ ಭವಿತವ್ಯವೂ ಆರಂಭವಾಗಿದೆ" ಎಂದು ಟ್ವೀಟ್ ಕೂಡ ಮಾಡಿದ!

ವಿವರಗಳೆಲ್ಲಿ?

ಹೀಗೆ ಭಾರಿ ಮಹತ್ವದ, ಸ್ಥಿತ್ಯಂತರದ, ಚಾರಿತ್ರಿಕ ಘಟನೆಯೆಂದು ಬಣ್ಣಿಸಲಾದ "ಒಪ್ಪಂದ"ದ ವಿವರಗಳನ್ನು ಬಹಿರಂಗಪಡಿಸದಿರುವುದು ನಿಜಕ್ಕೂ ವಿಚಿತ್ರವಲ್ಲವೇ? ಅದಕ್ಕೆ ಕಾರಣಗಳೇನೇ ಇರಲಿ ಅದನ್ನು ಆಮೇಲೆ ನೋಡೋಣ, ಆದರೆ ಸಮಸ್ಯೆಗಳಂತೂ ಈಗಾಗಲೆ ಆರಂಭವಾಗಿವೆ. ವಿಶೇಷವಾಗಿ ಈಶಾನ್ಯ ರಾಜ್ಯಗಳಿಂದ ಬರುತ್ತಿರುವ ಟೀಕಾಪ್ರಹಾರವನ್ನು ಎದುರಿಸಲಾರದ ಸರ್ಕಾರಿ ವಕ್ತಾರರು ನಿರ್ವಾಹವಿಲ್ಲದೆ ಇದು ಅಂತಿಮ ಅಲ್ಲ, ಕೇವಲ ಕರಡು ಒಪ್ಪಂದ ಎಂದು ಒಪ್ಪಿಕೊಳ್ಳಲೇಬೇಕಾಗಿ ಬಂದಿದೆ. ಅರ್ಥಾತ್ ಇದು ಬರೀ ಒಂದು ಒಪ್ಪಂದದ ಚೌಕಟ್ಟು ಅಷ್ಟೆ. ಮೂಲಗಳ ಪ್ರಕಾರ 2015ರ "ಒಪ್ಪಂದ"ಕ್ಕೂ 2011ರದಕ್ಕೂ ಹೆಚ್ಚೇನೂ ವ್ಯತ್ಯಾಸಗಳಿಲ್ಲವೆಂದು ತಿಳಿದುಬಂದಿದೆ. "ವಿವರಗಳನ್ನು ಜನತೆಗೆ ಮತ್ತು ಸಂಸತ್ತಿಗೆ ಸೂಕ್ತ ಸಮಯದಲ್ಲಿ ಒದಗಿಸಲಾಗುವುದು" ಎಂದು ರವಿ ಹೇಳಿರುವುದನ್ನು ನೋಡಿದರೆ ವಿವರಗಳು ಸದ್ಯದಲ್ಲಂತೂ ಲಭ್ಯವಾಗುವ ಲಕ್ಷಣಗಳಿಲ್ಲ.

ಸುಮಾರು ಇಪ್ಪತ್ತು ಲಕ್ಷ ಜನಸಂಖ್ಯೆ ಇರುವ ನಾಗಾಲ್ಯಾಂಡ್ ರಾಜ್ಯಕ್ಕೆ ಗಣನೀಯ ಸಂಖ್ಯೆಯ ನಾಗಾ ಜನರಿರುವ ನೆರೆಹೊರೆಯ ರಾಜ್ಯಗಳ ಭೂಭಾಗಗಳನ್ನು ಸೇರಿಸಿ ವಿಶಾಲ ಸಾರ್ವಭೌಮ ನಾಗಾಲ್ಯಾಂಡ್ ರಚಿಸಬೇಕು ಎಂಬುದು ಎನ್‌ಎಸ್‌ಸಿಎನ್ (ಐಎಂ)ನ ಮೂಲ ಬೇಡಿಕೆಗಳಲ್ಲೊಂದು. ಹೀಗಾಗಿ "ಒಪ್ಪಂದ"ದ ಸುದ್ದಿ ತಿಳಿದಾಕ್ಷಣ ನೆರೆಹೊರೆಯ ರಾಜ್ಯಗಳಾದ ಅಸ್ಸಾಂ, ಮಣಿಪುರ, ಅರುಣಾಚಲ ಪ್ರದೇಶಗಳು ತೀವ್ರ ಆತಂಕಕ್ಕೊಳಗಾಗಿವೆ. ಭಾರತ ಸರ್ಕಾರ ಎಲ್ಲಾದರೂ ವಿಶಾಲ ನಾಗಾಲ್ಯಾಂಡ್ ರಚನೆಗೆ ಒಪ್ಪಿಬಿಟ್ಟಿದೆಯೆ ಎಂದು ತಿಳಿಯಲು ವಿವರಗಳಿಗಾಗಿ ಹುಡುಕಾಡತೊಡಗಿವೆ. ಮಾತುಕತೆಗಳಿಂದ ತಮ್ಮನ್ನು ಹೊರಗಿಟ್ಟುದರ ವಿರುದ್ಧ ಆ ಮೂರೂ ಮುಖ್ಯಮಂತ್ರಿಗಳು ಪ್ರತಿಭಟಿಸಿದ್ದಾರೆ. ಈ ವರದಿಯನ್ನು ಪ್ರಸಾರ ಮಾಡಿದ್ದಕ್ಕಾಗಿ ಆಕಾಶವಾಣಿಯ ಇಬ್ಬರು ಸಂಪಾದಕರ ಮೇಲೆ ಕ್ರಮ ಜರಗಿಸಲು ಮುಂದಾಗಿರುವುದು ಮೋದಿ ಸರ್ಕಾರದ ಸರ್ವಾಧಿಕಾರಿ ನಡೆಗೆ ಇನ್ನೊಂದು ನಿದರ್ಶನವಾಗಿದೆ.

ಯಾಕಿಷ್ಟು ತರಾತುರಿಯ ಒಪ್ಪಂದ

ಈ ತರಾತುರಿಯ "ಒಪ್ಪಂದ"ಕ್ಕೆ ಒಂದು ವಿವರಣೆ ಹೀಗಿದೆ. ಎನ್‌ಎಸ್‌ಸಿಎನ್ (ಐಎಂ) ಸಂಘಟನೆಗೆ ವಿಶ್ವಾಸಾರ್ಹತೆ ಬಂದಿರುವುದು ಎರಡನೆ ನಾಯಕನಾದ ಇಸಾಕ್ ಚಿಶಿ ಸ್ವು ಅವರಿಂದ. ಏಕೆಂದರೆ ತಿಯುಂಗಲೆಂಗ್ ಮುಯಿವಾ ನಾಗಾ ಜನಾಂಗದವನಲ್ಲ, ಹಾಗಾಗಿ ನಾಗಾಗಳಿಗೆ ಆತನ ಬಗ್ಗೆ ಸ್ವಲ್ಪ ಅನುಮಾನ ಇದ್ದೇ ಇದೆ. ಆದರೆ ಇಸಾಕ್ ಈಗ ಅಸ್ವಸ್ಥನಾಗಿದ್ದು ದೆಹಲಿಯ ಆಸ್ಪತ್ರೆಯೊಂದರ ತೀವ್ರ ನಿಗಾ ವಿಭಾಗದಲ್ಲಿದ್ದಾನೆ. ಆದುದರಿಂದ ಹತಾಶೆಗೊಳಗಾಗಿರುವ ಎನ್‌ಎಸ್‌ಸಿಎನ್ (ಐಎಂ) ಈತ ಬದುಕಿರುವಾಗಲೆ ಏನಾದರೊಂದು ಒಪ್ಪಂದಕ್ಕೆ ಬರಲೇಬೇಕೆಂದು ನಿರ್ಧರಿಸಿದಂತೆ ತೋರುತ್ತದೆ. ಆದರೆ ಭಾರತ ಸರ್ಕಾರದೊಂದಿಗೆ ಯಾವುದೇ ಮಧ್ಯಮಮಾರ್ಗ ಕಂಡುಕೊಳ್ಳಲು ಸಾಧ್ಯವಾಗಿಲ್ಲದ ಕಾರಣ ಅದೀಗ ಭಾರತದ ಸಂವಿಧಾನವನ್ನು ಒಪ್ಪಿಕೊಂಡಿದೆ ಎಂದು ಮೂಲಗಳು ಹೇಳುತ್ತಿವೆ. ಇದರರ್ಥ ಅದು ಸಾರ್ವಭೌಮತೆಯ ಪ್ರಶ್ನೆಯನ್ನು ಕೈಬಿಟ್ಟಿದೆ ಎಂದಾಗುತ್ತದೆ. ಹಾಗಾದರೆ ಅದು ಸಾಧಿಸಿದ್ದಾದರೂ ಏನನ್ನು ಎಂಬ ಪ್ರಶ್ನೆಯಿದೆ. ಲೋಕಸಭೆಯ ಮಾಜಿ ಸ್ಪೀಕರ್ ಸಂಗ್ಮಾ ಪ್ರಕಾರ ಮುಂದೆ ಯಾವುದೇ ಪರಿಹಾರ ಬಂದರೂ ಅದು ಭಾರತೀಯ ಸಂವಿಧಾನದ ಚೌಕಟ್ಟಿನ ಒಳಗೇ ಇರುತ್ತದೆ. ಅಂದರೆ ಎನ್‌ಎಸ್‌ಸಿಎನ್ (ಐಎಂ) ತನ್ನ ಸಾರ್ವಭೌಮತೆಯ ಬೇಡಿಕೆಯನ್ನು ಬಿಟ್ಟುಕೊಟ್ಟಿದೆ ಎಂದರ್ಥ. ಮತ್ತೊಂದು ವಿಷಯವೆಂದರೆ ಮುಯಿವಾ ಇಂದು ಮೋದಿ ನಾಯಕತ್ವವನ್ನು ಹಾಡಿಹೊಗಳಲು ಆರಂಭಿಸಿದ್ದಾನೆ. ಆತ ಈ ಮಟ್ಟಕ್ಕೆ ತಲಪಿರುವುದರ ಹಿಂದೆ ಯಾವ ಸತ್ಯಗಳು ಅಡಗಿವೆ? ಅತ್ತ ಕೇವಲ ಒಂದೇ ಬಣದೊಂದಿಗೆ ಮಾತುಕತೆ ನಡೆಸಿ ತಮ್ಮನ್ನೆಲ್ಲ ಹೊರಗಿಟ್ಟ ಬಗ್ಗೆ ಇತರ ನಾಗಾ ಗುಂಪುಗಳಲ್ಲಿ ಅಸಮಾಧಾನ ಹೊಗೆಯಾಡುತ್ತಿದೆ ಮಾತ್ರವಲ್ಲ "ಒಪ್ಪಂದ"ದ ಬಗ್ಗೆ ಸಂಶಯವೂ ಮೂಡಿದೆ. ನಾಗಾಲ್ಯಾಂಡ್ ಜನತೆ "ಒಪ್ಪಂದ"ವನ್ನು ಸಂಪೂರ್ಣವಾಗಿ ತಿರಸ್ಕರಿಸಿಲ್ಲವಾದರೂ ತಮಗೆಲ್ಲ ಮಂಕುಬೂದಿ ಎರಚಲಾಗಿದೆಯೆಂದು ಸಿಟ್ಟಿಗೆದ್ದಿದ್ದಾರೆ. ಆದುದರಿಂದಲೆ ನಾಗಾಗಳಿಗೆ ನಿರ್ದಿಷ್ಟವಾಗಿ ಏನೆಲ್ಲ ಭರವಸೆಗಳನ್ನು ನೀಡಲಾಗಿದೆಯೆಂದು ತಿಳಿಯುವುದು ಅತ್ಯಗತ್ಯವಿದೆ. ಪ್ರಾದೇಶಿಕ ಮಿತಿಗಳಿಲ್ಲದ ಕದನವಿರಾಮ ಮುಂದುವರಿಸಲು ಅನುಮತಿ ನೀಡಿದಂತಹ 2001ರ ಬ್ಯಾಂಗ್‌ಕಾಕ್ ಒಪ್ಪಂದದ ಬಳಿಕ ವ್ಯಾಪಕ ಹಿಂಸಾಚಾರ ನಡೆದಿರುವುದನ್ನು ಗಮನಿಸಬೇಕು.

ಈ "ಒಪ್ಪಂದ"ಕ್ಕೆ ಇನ್ನೊಂದು ಕಾರಣವೂ ಇದ್ದಿರಬಹುದು. ಅದೇನೆಂದರೆ ಗುಪ್ತಚರ ವರದಿಗಳ ಪ್ರಕಾರ ಮಾತುಕತೆಗಳ ನಿಧಾನಗತಿಯಿಂದಾಗಿ ಸಹನೆ ಕಳೆದುಕೊಂಡ ಎನ್‌ಎಸ್‌ಸಿಎನ್ (ಐಎಂ) ಗುಂಪಿನ ಕೆಳಹಂತದ ಕಾರ್ಯಕರ್ತರು ಸ್ವಲ್ಪ ಹೆಚ್ಚು ಉಗ್ರವಾದಿ ಆಗಿರುವ ಎನ್‌ಎಸ್‌ಸಿಎನ್ ಕಾಪ್‌ಲಾಂಗ್ ಬಣಕ್ಕೆ ಸೇರತೊಡಗಿದ್ದಾರಂತೆ. ಕಾಪ್‌ಲಾಂಗ್ ಬಣ ಮಾರ್ಚ್ ತಿಂಗಳಲ್ಲಿ ಕದನವಿರಾಮ ಉಲ್ಲಂಘಿಸಿದ್ದಲ್ಲದೆ ಜೂನ್‌ನಲ್ಲಿ ಎಂಟು ಭಾರತೀಯ ಸೈನಿಕರನ್ನೂ ಹತ್ಯೆ ಮಾಡಿದೆ. ಇದರ ಜೊತೆ ದೊಡ್ಡ ಮಟ್ಟದ ದಾಳಿಗೆ ಸಿದ್ಧತೆಗಳಾಗುತ್ತಿರುವ ವರ್ತಮಾನಗಳ ಹಿನ್ನೆಲೆಯಲ್ಲಿ ಆತುರಾತುರವಾಗಿ "ಒಪ್ಪಂದ"ದ ಒಂದು ಚೌಕಟ್ಟನ್ನು ತಯಾರಿಸಿ ಸಹಿಹಾಕುವ ಡ್ರಾಮಾ ನಡೆದಿರಬಹುದು. ಚೌಕಟ್ಟಿನಲ್ಲಿ ಕ್ಲಿಷ್ಟಕರ ಅಂಶಗಳನ್ನು ನಿಜವಾಗಿಯೂ "ಬಗೆಹರಿಸಿ"ರುವುದಾದರೆ ಎರಡು ಪಕ್ಷಗಳಿಗೂ ರಾಜಕೀಯ ಸಮಸ್ಯೆಗಳು ಎದುರಾಗಬಹುದು. ಮೋದಿ ಸರ್ಕಾರ ವಿಶಾಲ ನಾಗಾಲ್ಯಾಂಡ್ ರಚನೆಗೆ ಒಪ್ಪಿಬಿಟ್ಟಿದೆಯಾದರೆ ಈಶಾನ್ಯ ರಾಜ್ಯಗಳಿಂದ ತೀವ್ರ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಬಹುದು. ಇವು ಹಿಂಸಾತ್ಮಕ ರೂಪವನ್ನೂ ತಾಳುವ ಸಾಧ್ಯತೆಗಳಿವೆ. ಸಾರ್ವಭೌಮತೆಯ ವಿಷಯದಲ್ಲಿ ಮೋದಿ ಸರ್ಕಾರ ಒಂದು ವಿಧದ ರಾಜಿಗೆ ಸಮ್ಮತಿಸಿದೆ ಎಂದಾದರೆ ಇದು ಈಶಾನ್ಯ ರಾಜ್ಯಗಳಲ್ಲಿ ಕಾರ್ಯಾಚರಿಸುತ್ತಿರುವ ಇತರ ಸಶಸ್ತ್ರ ಬಂಡಾಯಗಾರರ ಜೊತೆಗಿನ ಮಾತುಕತೆಗಳ ಮೇಲೆ ಪ್ರಭಾವ ಬೀರಲಿದೆ.


ಇತಿಹಾಸದ ಪುನರಾವರ್ತನೆ ಆಗಲಿದೆಯೇ?

1975ರಲ್ಲಿ ನಡೆದಿದ್ದ ಒಪ್ಪಂದವನ್ನು ನಾಗಾ ಜನರಿಗೆ ಬಗೆದ ದ್ರೋಹವೆಂದು ಕರೆದು ಅದನ್ನು ವಿರೋಧಿಸಿದ್ದ ಇಸಾಕ್, ಮುಯಿವಾ, ಕಾಪ್‌ಲಾಂಗ್ ಎಂಬ ಯುವನಾಯಕರು ನಂತರ ಎನ್‌ಎಸ್‌ಸಿಎನ್ ಸ್ಥಾಪನೆಗೆ ಕಾರಣರಾಗಿದ್ದರು. ಆದರೆ ತರುವಾಯ ಅಂತಃಕಲಹದ ಪರಿಣಾಮವಾಗಿ ಎನ್‌ಎಸ್‌ಸಿಎನ್ ಹಲವು ಹೋಳುಗಳಾಗಿ ಒಡೆದು ಇಸಾಕ್-ಮುಯಿವಾ, ಕಾಪ್‌ಲಾಂಗ್, ಖಿಟೊವಿ-ಝಿಮೋಮಿ ಮೊದಲಾದ ಬಣಗಳಾಗಿವೆ. ಒಂದು ವೇಳೆ ಇವತ್ತಿನ ನಾಗಾ ಯುವಜನರು ಈ ತಥಾಕಥಿತ "ಒಪ್ಪಂದ"ದಿಂದ ಅತೃಪ್ತರಾದರೆ 75ರ ಘಟನೆಗಳು ಮರುಕಳಿಸುವ ಸಾಧ್ಯತೆಗಳನ್ನು ಪೂರ್ತಿ ತಳ್ಳಿಹಾಕಲಾಗುವುದಿಲ್ಲ.

(ವಿವಿಧ ಮೂಲಗಳಿಂದ)

ಬೂಸಿ ಬಸ್ಯ... ಮೋದಿ!

76



Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 02-09-2015 RNI No. KARKAN200

ಆಗಸ್ಟ್‌ನಲ್ಲೂ ಐರಾವತ ಇಲ್ಲ



ದರ್ಶನ್ ನಟನೆಯ 'ಐರಾವತ' ಸಿನಿಮಾ ಈ ತಿಂಗಳು ಕೊನೆಯ ವಾರದಲ್ಲಿ ಬಿಡುಗಡೆ ಆಗುತ್ತದೆ ಎಂಬ ಸುದ್ದಿ ಇತ್ತು, ಸದ್ಯ ಸಿಕ್ಕಿರುವ ಮಾಹಿತಿಯ ಪ್ರಕಾರ ಮುಂದಿನ ತಿಂಗಳೂ ಆ ಸಿನಿಮಾ ರಿಲೀಸ್ ಆಗುವುದು ಡೌಟು ಎನ್ನಲಾಗುತ್ತಿದೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ಈ ಚಿತ್ರವು ಮೂರು ತಿಂಗಳ ಹಿಂದೆಯೇ ಬಿಡುಗಡೆ ಆಗಬೇಕಿತ್ತು, ದರ್ಶನ್ ಮತ್ತು ನಿರ್ದೇಶಕ ಎ.ಪಿ.ಅರ್ಜುನ್ ನಡುವಿನ ಕಿತ್ತಾಟದಿಂದಾಗಿ ಅದು ಸಾಧ್ಯವಾಗಲಿಲ್ಲ, ಅಲ್ಲದೇ ಅರ್ಜುನ್‌ನನ್ನು ದೂರವಿಟ್ಟು ಹಾಡುಗಳ ಚಿತ್ರೀಕರಣ ಮುಗಿಸಿಕೊಂಡು ಬಂದರೂ, ಸಿನಿಮಾ ಸಂಬಂಧಿ ಕೆಲಸ ಇನ್ನೂ ಪೂರ್ಣವಾಗಿಲ್ಲ, ಹೀಗಾಗಿ ಮುಂದಿನ ತಿಂಗಳೂ ಬಿಡುಗಡೆ ಆಗುವುದಿಲ್ಲ ಎಂಬ ಸುದ್ದಿ ಇದೆ. ಮ್ಯಾಜಿಕ್ ಏನಾದರೂ ನಡೆದರೆ, ಸೆಪ್ಟೆಂಬರ್ ಎರಡನೇ ವಾರದಲ್ಲಿ ರಿಲೀಸ್ ಆಗಬಹುದು ಎನ್ನಲಾಗುತ್ತಿದೆ.

ಬುಗುರಿಗೆ ಕೈ ಕೊಟ್ಟ ಗಣೇಶ್



ಮಾರುಕಟ್ಟೆಯಲ್ಲಿ ಗೋಲ್ಡ್ ರೇಟ್ ಕಡಿಮೆಯಾದಂತೆ ಗಾಂಧಿನಗರದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ರೇಟ್ ಕೂಡ ಬಿದ್ದುಹೋಗಿದೆ. ಸದ್ಯ ಎರಡ್ಮೂರು ಸಿನಿಮಾಗಳಲ್ಲಿ ಅವರು ಬಿಜಿ ಆಗಿದ್ದರೂ, ಗೆಲುವಿನ ರೇಟು ಮಾತ್ರ ಪಾತಾಳಕ್ಕೆ ಇಳಿದಿದೆ. ಆದರೂ, ಅದರ ಬಗ್ಗೆ ಗಣೇಶ್ ತಲೆ ಕೆಡಿಸಿಕೊಳ್ಳುತ್ತಿಲ್ಲ. ತಮ್ಮದೇ ಸಿನಿಮಾ ಬಿಡುಗಡೆ ಆದರೂ ಆತ ಪ್ರಚಾರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಹೀಗಾಗಿ ನಿರ್ದೇಶಕರು ಮತ್ತು ನಿರ್ಮಾಪಕರು ಗಣೇಶ್ ಬಗ್ಗೆ ಗರಂ ಆಗಿದ್ದಾರೆ.

ಮೊನ್ನೆಯಷ್ಟೇ ಬಿಡುಗಡೆ ಆದ 'ಬುಗುರಿ' ಸಿನಿಮಾ ಗಣೇಶ್ ಅವರ 25ನೇ ಚಿತ್ರ. ಅಂಥದ್ದೊಂದು ಸಂಭ್ರಮ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ತಮಗೂ ಆ ಸಿನಿಮಾಗೂ ಸಂಬಂಧವೇ ಇಲ್ಲ ಅನ್ನುವಂತೆ ಗಣೇಶ್ ದೂರ ಉಳಿದರು. 'ಬುಗುರಿ' ಚಿತ್ರದ ಕುರಿತು ಅವರು ಎಲ್ಲಿಯೂ ಮಾತಾಡಲಿಲ್ಲ, ಸಿನಿಮಾ ಹೇಗಿದೆ ಅಂತ ಯಾರನ್ನೂ ಕೇಳಲಿಲ್ಲ. ಈ ವರ್ತನೆ 'ಬುಗುರಿ' ಟೀಮ್‌ನ್ನು ಕೆರಳಿಸಿದೆ. ಅದಕ್ಕೆ ಕಾರಣವನ್ನೂ ಹುಡುಕುತ್ತಿದೆ.

ಬಬ್ಲಿ ಅಮೂಲ್ಯ



ಅಮೂಲ್ ಬೇಬಿ ಅಮೂಲ್ಯ ಇದೇ ಮೊದಲ ಬಾರಿಗೆ ಬಬ್ಲಿ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಅದಕ್ಕಾಗಿ ಅವರು ಸಾಕಷ್ಟು ತಯಾರಿಯನ್ನೂ ಮಾಡಿಕೊಂಡಿದ್ದಾರೆ. ಇದು ರಫ್ ಅಂಡ್ ಟಫ್ ಪಾತ್ರ ಆಗಿದ್ದರಿಂದ, ಕಾಸ್ಟ್ಯೂಮ್, ಹೇರ್‌ಸ್ಟೈಲ್ ಮತ್ತು ಮಾತಿನ ಶೈಲಿಯನ್ನೂ ಬದಲಾಯಿಸಿದ್ದಾರೆ. ಅಮೂಲ್ಯ ಈ ರೀತಿಯಲ್ಲಿ ಬದಲಾಗೋಕೆ ಕಾರಣ ಚಿತ್ರ ಸಾಹಿತಿ ಕವಿರಾಜ್.

ಕವಿರಾಜ್ ಇದೇ ಮೊದಲ ಬಾರಿಗೆ ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಅಮೂಲ್ಯ ಅವರದ್ದು ವಿಭಿನ್ನ ಪಾತ್ರ. ಅಲ್ಲದೇ ಪ್ರಮುಖ ಪಾತ್ರ. ಹೀಗಾಗಿಯೇ ಕವಿರಾಜ್ ತಮ್ಮ ಕಲ್ಪನೆಯ ನಾಯಕಿಯನ್ನು ಅಮೂಲ್ಯಗೆ ವಿವರಿಸಿದ್ದಾರೆ. ಅದರಂತೆ ಅಮೂಲ್ಯ ತಯಾರಿ ಮಾಡಿಕೊಂಡಿದ್ದಾರೆ. ಚಿತ್ರಕ್ಕೆ 'ಮದುವೆಯ ಮಮತೆಯ ಕರೆಯೋಲೆ' ಎಂಬ ಟೈಟಲ್ ಇಡಲಾಗಿದೆ. ಬಹುತೇಕ ಚಿತ್ರೀಕರಣ ಮುಗಿದಿದೆ. ಇದು ದರ್ಶನ್ ಬ್ಯಾನರ್‌ನಲ್ಲಿ ಮೂಡಿಬರುತ್ತಿರುವ ಚಿತ್ರ. ಹೊಸ ಹುಡುಗನನ್ನು ಈ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯಿಸುತ್ತಿದ್ದಾರೆ ನಿರ್ದೇಶಕರು.




ಶಿವಣ್ಣನ ಲೆಕ್ಕಾಚಾ

ಡಬ್ಬಿಂಗ್ ಭೂತ ದಹನಕ್ಕೆ ಮೂರನೇ ಕಣ್ಣು ತೆರೆಯುವುದ ಮಾತನಾಡಿದ್ದ ಶಿವರಾಜ್‌ಕುಮಾರ್ ಈಗ ಉಲ್ಟಾ ಹೊಡೆಯುತ್ತಿದ್ದಾರೆ. "ಡಬ್ಬಿಂಗ್ ಬೇಕು ಅನ್ನುವವರಿಗೆ ಏನು ಹೇಳೋಕೆ ಆಗತ್ತೆ? ಬಂದಿದ್ದನ್ನು ಅನುಭವಿಸೋಣ" ಅನ್ನುವ ಅರ್ಥದಲ್ಲಿ ಶಿವಣ್ಣ ಮಾತನಾಡುತ್ತಿದ್ದಾರೆ. ಶಿವಣ್ಣ ಇಂಥದ್ದೊ ನಿಲುವು ತಳೆಯಲು ಕಾರಣ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾ ಅನ್ನುತ್ತಿದೆ ಗಾಂಧಿ ನಗರದ ಲೆಕ್ಕಾಚಾರ ರೀಮೇಕ್ ಮಾಡುವುದಿಲ್ಲ, ಪರಭಾಷಾ ಚಿತ್ರಗಳಲ್ಲಿ ನಟಿಸುವುದಿಲ್ಲ ಎನ್ನುತ್ತಿದ್ದ ಹ್ಯಾ ಹೀರೋ, ರಾಮಗೋಪಾಲ್ ವರ್ಮಾ ಕರೆಯುತ್ತಿದ್ದಂತೆಯೇ ಕಾಲ್‌ಶೀಟ್ ಕೊ ಸರದಿಯಲ್ಲಿದ್ದ ಸಿನಿಮಾಗಳನ್ನು ಹಿಂದಕ್ಕಿಟ್ಟರು. ಈ 'ಕಿಲ್ಲಿಂಗ್ ವೀ ಚಿತ್ರ ತಮಿಳು ಮತ್ತು ತೆಲುಗಿನ ರಿಲೀಸ್ ಆಗಲಿದೆ. ಡಬ್ಬಿಂಗ್ ವಿರೋಧಿಸಿ ಶಿವಣ್ಣ ಮಾತಾಡಿದ ಪರಭಾಷೆಯವರು ಈ ಸಿನಿಮಾ ಒಪ್ಪಿಕೊಳ್ಳುವುದಿಲ್ಲ ಎಂಬ ಭಯ ಆವರಿಸಿದೆಯಂತೆ. ಹೀಗಾಗಿಯೇ ಡಬ್ಬಿಂ ವಿರೋಧದ ಮಾತುಗಳನ್ನು ಅವರು ಆಡುತ್ತಿಲ್ಲವಂತೆ.

ಉಪ್ಪಿಗೇಕೆ ಇಂಥ ಬು

ಕನ್ನಡ ಸಿನಿರಂಗ ಕಂಡ ಬುದ್ಧಿವಂತ ನಟ, ನಿರ್ದೇಶಕ ಉ ಆ ಬುದ್ಧಿವಂತಿಕೆಯು ಸದ್ಯ ಸಿನಿಮಾರಂಗಕ್ಕಾಗಿ ಖಚಾ ಎನ್ನುವುದು ವಿಷಾದ. ಮೊನ್ನೆಯಷ್ಟೇ 'ಉಪ್ಪಿ 2' ಚಿತ್ರ ಆಗಿದೆ. ಅದಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಗಲ್ಲಾಪೆಟ್ಟಿಗೆ ತುಂ ಅನುಮಾನ ಎಂಬ ಸುದ್ದಿ ಸಿಗುತ್ತಿದ್ದಂತೆಯೇ ಉಪೇಂದ್ರ ಬೇರೆ ಪ್ರಚಾರದಲ್ಲಿ ತೊಡಗಿದ್ದಾರೆ. ಸಿನಿಮಾ ಬಿಡುಗಡೆಯಾದ ಮ ಎಲ್ಲಾ ಪತ್ರಕರ್ತರಿಗೂ ಮೂರು ದಿನಗಳ ಬಾಕ್ಸ್ ಆಫೀಸ್ ಲೆಕ್ಕ ಕೊ ಅದು ಬರೋಬ್ಬರಿ 45 ಕೋಟಿ ರೂಪಾಯಿ. ಸಿನಿಮಾ ಬಿ ಆಗಿಯೇ ಒಂದು ದಿನ ಆಗಿದೆ. ಇನ್ನೆರಡು ದಿನಗಳ ಲೆಕ್ಕಕ್ಕೆ ಅವರು ಜ್ಯೋತಿಷಿಗಳನ್ನು ಕೇಳಿ, ಭವಿಷ್ಯ ಹೇಳಿಸಿದ್ದಾರಾ ಎನ್ನುವುದನ್ನು ಉಪೇಂದ್ರ ಅವರೇ ಹೇಳಬೇಕು.

ಉಪೇಂದ್ರ ಇಂಥ ಯಡವಟ್ಟು ಮಾಡಿದ್ದು ಇದೇ ಮೊದಲೇನೂ ಅಲ್ಲ. ಪತ್ರಿಕೆಗಳು ಉಪೇಂದ್ರರನ್ನು ಹೊಗಳಿ ಬರೆಯದೇ ಇದ್ದರೆ ಜಾಹೀರಾತು ನೀಡುವುದಿಲ್ಲ, ನೆಗೆಟಿವ್ ಸ್ಟೋರಿ ಪ್ರಿಂಟ್ ಮಾಡಿದರೆ ಆ ಪತ್ರಕರ್ತರ ಜತೆ ಉಪೇಂದ್ರ ಮಾತೂ ಆಡುವುದಿಲ್ಲ. ಈ ಬಾರಿ ಅಂತಹ ಕಟ್ಟಪ್ಪಣೆ ಹೊರಡಿಸಿದ್ದಾರೆ ಉಪೇಂದ್ರ. ಹಾಗಾಗಿ ಒಂದಿಷ್ಟು ಪತ್ರಿಕೆಗಳು ಮತ್ತು ಬಹುತೇಕ ಚಾನೆಲ್‌ಗಳು ಉಪ್ಪಿ ಸಿನಿಮಾ ಪ್ರಮೋಷನ್ ಮಾಡುತ್ತಿಲ್ಲ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com